

# ಬ್ರಹ್ಮ
# ರಾವಣ ಬ್ರಹ್ಮ
# ಭಗವಾನ್ ರಾವಣ ಬ್ರಹ್ಮ


ಗ್ರಂಥಕರ್ತ : ತ್ರಿಮತ ಏಕೈಕ ಗುರುವು


**ಆಧ್ಯಾತ್ಮಿಕ ಸಾಮ್ರಾಜ್ಯ ಚಕ್ರವರ್ತಿ, ಶತಾಧಿಕ ಗ್ರಂಥಕರ್ತ**

**ಇಂದೂ ಜ್ಞಾನ ಧರ್ಮಪ್ರದಾತ, ಸಂಚಲನಾತ್ಮಕ ರಚಯಿತ, ತ್ರೈತ ಸಿದ್ಧಾಂತ ಆದಿಕರ್ತ**

**ಶ್ರೀಶ್ರೀಶ್ರೀ ಆಚಾರ್ಯ ಪ್ರಬೋಧಾನಂದ ಯೋಗೀಶ್ವರರು**

ತೆಲುಗುನಿಂದ ಕನ್ನಡಕ್ಕೆ ಅನುವಾದ

**ಇಂದೂಶ್ರೀ ಕವಿತ, ಇಂದೂಶ್ರೀ ಶ್ರೀದೇವಿ**



ಗ್ರಂಥ ಮುದ್ರಣ

**ಇಂದೂ ಜ್ಞಾನ ವೇದಿಕೆ**

(Estd. in 1978 - Regd.No.: 168/2004)

ತ್ರೈತ ಶಕ : 39 ಪ್ರಥಮ ಮುದ್ರಣ : ಡಿಸೆಂಬರ್–2017

ಪ್ರತಿಗಳು : 1000 **ಬೆಲೆ.** /–

## ಇಂದೂ ಜ್ಞಾನವೇದಿಕೆ ಪ್ರಕಟಣೆಗಳು

01. ತ್ರೈತ ಸಿದ್ಧಾಂತ ಭಗವದ್ಗೀತೆ.
02. ಆಧ್ಯಾತ್ಮಿಕ ಪ್ರಶ್ನೆಗಳು–ಉತ್ತರಗಳು.
03. ಧರ್ಮ–ಅಧರ್ಮ.
04. ಇಂದೂತ್ವವನ್ನು ಕಾಪಾಡೋಣ.
05. ಯಜ್ಞಗಳು (ಸತ್ಯವಾ–ಅಸತ್ಯವಾ?)
06. ದೆವ್ವಗಳಹಾಗೂ–ಭೂತಗಳ ಯಥಾರ್ಥಸಂಘಟನೆಗಳು.
07. ಸತ್ಯಾನ್ವೇಷಿ ಕಥೆ.
08. ಮಂತ್ರ–ಮಹಿಮೆ (ಸತ್ಯವಾ–ಅಸತ್ಯವಾ)
09. ಶ್ರೀ ಕೃಷ್ಣನು ದೇವರಾ, ಭಗವಂತನಾ.
10. ಗೀತಾ ಪರಿಚಯ.
11. ಕಲಿಯುಗ (ಎಂದಿಗೂ ಯುಗಾಂತವಲ್ಲ).
12. ಜನನ ಮರಣ ಸಿದ್ಧಾಂತ.
13. ಮರಣ ರಹಸ್ಯ.
14. ಪುನರ್ಜನ್ಮ ರಹಸ್ಯ.
15. ತ್ರೈತಾಕಾರ ರಹಸ್ಯ (ತ್ರೈತಾಕಾರ ಬೆರ್ಮುಡಾ).
16. ಕಥೆಗಳ ಜ್ಞಾನ.
17. ಗಾದೆಗಳ ಜ್ಞಾನ.
18. ಒಗಟುಗಳಲ್ಲಿ ಜ್ಞಾನ.
19. ತತ್ತ್ವಗಳ ಜ್ಞಾನ.
20. ಬೈಗುಳಲ್ಲಿ ಜ್ಞಾನ–ಆಶೀರ್ವಾದಗಳಲ್ಲಿ ಅಜ್ಞಾನ.
21. ಗೀತಂ–ಗೀತ (ಹಾಡುಗಳ ಜ್ಞಾನ).
22. ತತ್ತ್ವಾರ್ಥ ಗೊಂಬೆಗಳ ಜ್ಞಾನ.
23. ದೇವಾಲಯ ರಹಸ್ಯಗಳು.
24. ಇಂದೂ ಸಂಪ್ರದಾಯಗಳು.
25. ನಮ್ಮ ಹಬ್ಬಗಳು. (ಹೇಗೆ ಮಾಡಬೇಕೋ ತಿಳಿದಿದೆಯಾ?)
26. ಜ್ಯೋತಿಷ್ಯಶಾಸ್ತ್ರ (ಶಾಸ್ತ್ರವಾ–ಅಶಾಸ್ತ್ರವಾ?)
27. ತಾಯಿ ತಂದೆ.
28. ಗುರುಪ್ರಾರ್ಥನಾ ಮಂಜರಿ.
29. ತ್ರೈತಾರಾಧನೆ.
30. ಸಮಾಧಿ.
31. ಪ್ರಬೋಧ.
32. ಸುಬೋಧ.
33. ಪ್ರಸಿದ್ಧಿ ಬೋಧನೆ.
34. ಸುಪ್ರಸಿದ್ಧಿಬೋಧನೆ.
35. ಶಿಲುಬೆ ದೇವರಾ?
36. ಮತಾತೀತ ದೇವರ ಮಾರ್ಗ.
37. ದೇವರ ಗುರುತು–963.
38. ಮತ–ಪಥ.
39. ಪ್ರಬೋಧಾನಂದ ನಾಟಕಗಳು.
40. ಇಂದೂ ಕ್ರೈಸ್ತವನಾ?
41. ನಿಗೂಢ ತತ್ತ್ವಾರ್ಥ ಬೋಧಿನಿ.
42. ಆತ್ಮ ಲಿಂಗಾರ್ಥ.
43. ನಾಸ್ತಿಕರು–ಆಸ್ತಿಕರು.
44. ಹೇತುವಾದ–ಪ್ರತಿವಾದ.
45. ಗುತ್ತಾ.
46. ಪ್ರಬೋಧ ತರಂಗಗಳು.
47. ತ್ರೈತ ಸಿದ್ಧಾಂತ.
48. ರೂಪ ಬದಲಾದ ಗೀತೆ.
49. ಉಪನಿಷತ್‌ಗಳಲ್ಲಿ ಲೋಪಗಳು.
50. ಪ್ರಥಮ ದೈವಗ್ರಂಥ ಭಗವದ್ಗೀತೆ.
51. ದ್ರಾವಿಡ ಬ್ರಾಹ್ಮಣ.
52. ತೀರ್ಪು.
53. ಕರ್ಮಪತ್ರ.
54. ಪ್ರವಕ್ತರು ಯಾರು?
55. ಧರ್ಮಶಾಸ್ತ್ರ ಯಾವುದು?
56. ಮತಾಂತರ ದೈವದ್ರೋಹ.
57. ತ್ರೈತಶಕ ಪಂಚಾಂಗ.
58. ತ್ರೈತ ಸಿದ್ಧಾಂತ ಆಧ್ಯಾತ್ಮಿಕ ಘಂಟು.
59. ಜೀಹಾದ್ ಎಂದರೇ ಯುದ್ಧವಾ?
60. ಮೂರು ಗ್ರಂಥಗಳು, ಇಬ್ಬರು ಗುರುಗಳು.
61. ದೇವರ ಜ್ಞಾನ ಕಬ್ಜಾ ಆಗಿದೆ.
62. ಅಜ್ಞಾನದಲ್ಲಿ ಉಗ್ರವಾದ ಬೀಜಗಳು.

## ಇಂದೂ ಜ್ಞಾನವೇದಿಕೆ ಪ್ರಕಟಣೆಗಳು

63. ವಾರ್ತಕನು-ವರ್ತಕನು.
64. ದೇವರ ಚಿಹ್ನೆ.
65. ನನ್ನದು ಲೋಚನೆ-ನಿನ್ನದು ಆಲೋಚನೆ
66. ಯಾವುದು ನಿಜವಾದ ಜ್ಞಾನ?
67. ಪ್ರತಿಮೆ X ವಿಗ್ರಹ - ದೈವ X ದೆವ್ವ.
68. ಮರಣದ ನಂತರ ಜೀವನ.
69. ಯಾವ ಮತದಲ್ಲಿ ಎಷ್ಟು ಮತ ದ್ವೇಷ.
70. ಸ್ವರ್ಗ ಇಂದ್ರಲೋಕವಾ! ನರಕ ಯಮರಾಜ್ಯವಾ!!
71. ದ್ವಿತೀಯ ದೈವಗ್ರಂಥದಲ್ಲಿ ರತ್ನ ವಾಕ್ಯಗಳು
72. ಅಂತಿಮ ದೈವಗ್ರಂಥದಲ್ಲಿ ಜ್ಞಾನವಾಕ್ಯಗಳು.
73. ಅಂತಿಮ ದೈವ ಗ್ರಂಥದಲ್ಲಿ ವಜ್ರವಾಕ್ಯಗಳು
74. ಹಿಂದೂ ಮತದಲ್ಲಿ ಸಿದ್ಧಾಂತಕರ್ತರು.
75. ಒಂದು ಮಾತು ಮೂರು ಗ್ರಂಥಗಳು.
76. ಲು ಎಂದರೇ ಏನು? (ತೆಲುಗು)
77. ಆದಿತ್ಯ.
78. ಗಿಡ ಮೊದಲಾ! ಬೀಜ ಮೊದಲಾ?
79. ಒಬ್ಬನೇ ಇಬ್ಬರು.
80. ಸಾಯಿಬಾಬಾ ದೇವರಾ! ಅಲ್ಲವಾ!
81. ಯೇಸು ಮರಣಿಸಿದ್ದಾನಾ? ಹತವಾಗಿದ್ದಾನಾ?
82. ದೇವರ ಆಗಮನಕ್ಕೆ ಇದು ಸಮಯವಲ್ಲವೇ!
83. ವಿಶ್ವ ವಿದ್ಯಾಲಯ
84. ಕೃಷ್ಣ ಮೂಸ (ಶ್ರೀ ಕೃಷ್ಣ ಮರಣದ ನಂತರ ಜೀವನ)
85. ಒರೆಗಲ್ಲು (ಗೀಟುರಾಯಿ)
86. ಮೂರು ದೈವ ಗ್ರಂಥಗಳು-ಮೂರು ಪ್ರಥಮ ವಾಕ್ಯಗಳು
87. ಹೇತುವಾದ ಪ್ರಶ್ನೆಗಳು-ಸತ್ಯವಾದ ಉತ್ತರಗಳು
88. ದೈವಗ್ರಂಥಗಳಲ್ಲಿ ಸತ್ಯಾಸತ್ಯ ವಿಚಕ್ಷಣೆ
89. ನಿನಗೆ ನನ್ನ ಲೇಖ
90. ಹಿಂದೂ ಮತದಲ್ಲಿಯೇ ಕುಲವಿವಕ್ಷ
91. ದೇವರ ಮುದ್ರೆ
92. ಬ್ರಹ್ಮ-ರಾವಣಬ್ರಹ್ಮ-ಭಗವಾನ್ ರಾವಣಬ್ರಹ್ಮ
93. ಧರ್ಮಚಕ್ರ
94. ಪ್ರಾಥಮಿಕ ಜ್ಞಾನ
95. ರಾಜಕೀಯ-ರಾಜಕೀಯ
96. ಉಗ್ರವಾದ ಸತ್ಯಕ್ಕೋಸ್ಕರವೇ
97. ಒಬ್ಬ ವ್ಯಕ್ತಿಯಲ್ಲಿ ಎರಡು ಕೋನಗಳು
98. ಮಾನವತ್ವ
99. ದ್ಯಾನ - ಪ್ರಾರ್ಥನೆ - ನಮಾಜ್



# 04 ಯೋಗೀಶ್ವರರ ಸಂಚಲನಾತ್ಮಕ ತ್ರಿಮತ ಆಧ್ಯಾತ್ಮಿಕ ತೆಲುಗು ಪ್ರಸಂಗಗಳು

**DVD's**

01. ಸಂತಕಮು.
02. ಸಾಂಪ್ರದಾಯಮು.
03. ತ್ರೈತಶಕಮು.
04. ಕೋಡಿಪುಂಜು–ಪಾದರಸಮು.
05. ಯುಗಮು–ಯೋಗಮು.
06. ನೈಜಂ–ಸಹಜಂ.
07. ಆತ್ಮಕು ವೆಂಟ್ರುಕ ಗುರ್ತು.
08. ಪೈತ್ಯಂ–ಸೈತ್ಯಂ.
09. ಶೈವಮು–ವೈಷ್ಣವಮು.
10. ಇಂದೂಮಹಾಸಮುದ್ರಂ.
11. ಸೃಷ್ಠಿ–ಸೃಷ್ಠಿಕರ್ತ.
12. ಕಾಯ–ಪಂಡು–ಕಾಯ.
13. ಜ್ಞಾನಮು–ವಿಜ್ಞಾನಮು.
14. ವಾರ–ಮಾಸ–ವತ್ಸರ.
15. ಸೇಕೂವಲಿ–ಕೂಲಿಸೇವಾ.
16. ಧರ್ಮಮು–ಅಧರ್ಮಮು.
17. ಏಕ್‌ನಿರಂಜನ್–ಅಲಕ್‌ನಿರಂಜನ್.
18. ಗುರುವುಲೇನಿವಿದ್ಯ–ಗ್ರುಡ್ಡಿವಿದ್ಯ.
19. ಬಟ್ಟತಲ.
20. ಭಗವಂತುಡು.
21. ದ್ರಾವಿಡುಲು – ಆರ್ಯುಲು.
22. ಪ್ರಭುವು – ಪ್ರಭುತ್ವಂ.
23. ಭೂತಂ – ಮಹಾಭೂತಂ.
24. ಪ್ರಭು – ಪ್ರಜ.
25. ಯಾದವ್.
26. ಪುಸ್ತಕಮು–ಗ್ರಂಥಮು.
27. ವೆಲುಗುಬಂಟು.
28. ಪ್ರಕೃತಿ–ವಿಕೃತಿ.
29. ಮಾಟ–ಮಂದು.
30. ಏಕತ–ಏಕಾಗ್ರತ.
31. ಹರಿಕಾಲು–ಹರಿಚೇಯಿ.
32. ಪುಟ್ಟಗೋಸಿ–ಮೊಲತ್ರಾಡು.
33. 1 2 3 ಗುರುಪೌರ್ಣಮಿ.
34. ಚಮತ್ಕಾರ–ಆತ್ಮ.
35. ಕ್ಷಮಿಂಚರಾನಿ ಪಾಪಮು.
36. ಮಾಯಕುಡು– ಅಮಾಯಕುಡು.
37. ಮರಣಮು–ಶರೀರಮು.
38. ದ್ವಿತೀಯುಡು–ಅದ್ವಿತೀಯುಡು.
39. ಎದಮೀದಮುದ್ರ–
ತಲ್ಲಿ ತಂಡ್ರಿ ಗುರ್ತು.
40. ಸೇವಾಶಾತಮು.
41. ಬಯಟಿ ಸಮಾಜಂ–
ಲೋಪಲಿ ಸಮಾಜಂ.
42. ಶ್ರೀಕೃಷ್ಣಾಷ್ಟಮಿ.
43. ಪ್ರಪಂಚ ಶ್ರದ್ಧ–
ಪರಮಾತ್ಮ ಶ್ರದ್ಧ.
44. ತಲ್ಲಿ ತಂಡ್ರಿ
45. ದೇವುನಿ ಜ್ಞಾನಮು–
ಮಾಯ ಮಹತ್ಯಮು.
46. ಸಮಾಧಿ.
47. ತಲ್ಲಿ ತಂಡ್ರಿ –
ಗುರುವು ದೈವಮು.
48. ಕಲಿಯುಗಮು.
49. ಮತಮು–ಪಥಮು.
50. ದಿವ್ಯಖುರಾನ್–ಹದೀಸು.
51. ತಲ್ಲಿ.
52. ಪುಟ್ಟುಟ – ಗಿಟ್ಟುಟ.
53. ಗೋರು – ಗುರು.
54. ಆತ್ಮ.
55. ಕರ್ಮ ಮರ್ಮಮು.
56. ತಾತ.
57. ಗುರುಪೌರ್ಣಮಿ.
58. ಯೋಗೀಶ್ವರುಲ
ಜನ್ಮದಿನ ಸಂದೇಶಮು.
59. ಶ್ರೀಕೃಷ್ಣಜನ್ಮ ಮಧುರ.
60. ಇಂದುವು – ಹಿಂದುವು.
61. ಸ್ತ್ರೀ–ಪು/ಲಿಂಗಮು.
62. ಆತ್ಮಪನಿ.
63. ತ್ರೈತ ಸಿದ್ಧಾಂತಮು.
64. ದೇಶಂ ಮೋಸಂ –
ದೇಹಂ ಮೋಹಂ.
65. ಜೀರ್ಣ+ಆಶಯಮು.

# ಯೋಗೀಶ್ವರರ ಸಂಚಲನಾತ್ಮಕ ತ್ರಿಮತ ಆಧ್ಯಾತ್ಮಿಕ ತೆಲುಗು ಪ್ರಸಂಗಗಳು 05

**DVD's**

66. ಮೇಘಂ ಒಕಭೂತಂ–
    ರೋಗಂ ಒಕಭೂತಂ.
67. ದೇವುನಿಕಿ ಮತಮುನ್ನದಾ?
68. ಸಹಜ ಮರಣಂ–ತಾತ್ಕಾಲಿಕ ಮರಣಂ
69. ಅಧರ್ಮ ಆರಾಧನಲು.
70. ಏದಿ ಧರ್ಮಮು.
71. ನಿದರ್ಶ – ನಿರೂಪ.
72. ಪುಟ್ಟಿನರೋಜು ಎವ್ವರಿಕೀ ರಾದು.
73. ನಟಿಂಚೇ ಆತ್ಮ.
74. ಮೂಡು ಪುಟ್ಟುಕಲು–
    ರೆಂಡು ಜಾಗಾಲು.
75. ಶ್ರೀ ಕೃಷ್ಣುಡು ಎವರು?
76. ಸಂಚಿತ ಕರ್ಮ.
77. ಗುರುವು ಎವರು?
78. ಕರ್ಮಲೇನಿ ಕೃಷ್ಣುಡು–
    ಕರ್ಮಉನ್ನ ಕೃಷ್ಣುಡು.
79. ಭಯಂ.
80. ಸುಖಮು–ಆನಂದಮು.
81. ದಶ–ದಿಶಲು.
82. ಆಡಿಂಚೇ ಆತ್ಮ.
83. ಇಚ್ಛಾಧೀನ ಕಾರ್ಯಮುಲು–
    ಅನಿಚ್ಛಾಧೀನ ಕಾರ್ಯಮುಲು.
84. ಟಕ್ಕುಟಮಾರಾ, ಇಂದ್ರಜಾಲ
    ಮಹೇಂದ್ರಜಾಲ,
    ಗಜಕರ್ಣ ಗೋಕರ್ಣ.
85. ಸ್ವಾರ್ಥ ರಾಜಕೀಯಂ
    (ಸ್ವ+ಅರ್ಥ ರಾಜಕೀಯಂ).
86. ಮೂಡು ನಿರ್ಮಾಣಾಲು–ಒಕ ಪರಿಶುಭ್ರತ.
87. ಏದಿ ಶಾಸ್ತ್ರಮು?
88. ತೆಲುಗುಲೋ ಮೂಡು–
    ಆರು–ತೊಮ್ಮಿದಿ
89. 6–3=6
90. ಗುರ್ತಿಂಪಬಡನಿವಾಡು ಗುರುವು.
91. ಜ್ಞಾನಮು ದಗ್ಗರ ಜಾಗ್ರತ್ತ!
92. ಚಂದ್ರಾಕಾರಮು (ಬಟ್ಟತಲ).
93. ಮತಮುಲಲೋ ಪವಿತ್ರ ಯುದ್ಧಮು.
94. ಮೂಡು ಗ್ರಂಥಮುಲು.
95. ಏಡು ಆಕಾಶಮುಲು.
96. ದೈವಗ್ರಂಥಮು.
97. ಜ್ಞಾನಮು ಕಬ್ಜಾ ಅಯ್ಯಿಂದಿ.
98. ಭಕ್ತಿ–ಭಯಮು.
99. ಜ್ಞಾನಶಕ್ತಿ.
100. ಕಾಲಜ್ಞಾನ ವಾಕ್ಯಮುಲು.
101. ಅರ್ಥಮು–ಅಪಾರ್ಥಮು.
102. ತೋಲೇವಾಡು.
103. ಗುರು ಚಿಹ್ನಂ.
104. ಭಕ್ತಿ–ಶ್ರದ್ಧಲು.
105. ದೇವುಡು ಇದ್ದರಾ! ಒಕ್ಕರಾ!!
106. ಪುರುಷೋತ್ತಮ.
107. ಮತದ್ವೇಷಮು.
108. ನೀ ವೆನುಕ ವಾಡು.
109. ಗ್ರಂಥಮು – ಬೋಧ.
110. ಆಟ – ದೋಬೂಚುಲಾಟ.
111. ಪ್ರಜಲು – ಮಾನವುಲು.
112. ಆಸ್ತಿ – ದೋಸ್ತಿ
113. ದಂತಮು–ಅಂತಮು.
114. ಮಾಯ ಮರ್ಮಮು–ಆತ್ಮ ಧರ್ಮಮು
115. ಶ್ರೀಕೃಷ್ಣುಡು
     ಚನಿಪೋಯಾಡಾ? ಚಂಪಬಡ್ಡಾಡಾ?
116. ಅಂತಿಮ ದೈವಗ್ರಂಥಮುಲೋ ಪ್ರಥಮವಾಕ್ಯಮುಲು
117. ಅದುರು–ಬೆದುರು
118. ಶವಮು – ಶಿವಮು
119. ಧರ್ಮಚಕ್ರಮು
120. ಗ್ರಾಹಿತ ಶಕ್ತಿ
121. ಭೌತಿಕಮು – ಅಭೌತಿಕಮು
122. ದೇವುನಿ ಆಜ್ಞ ಮರಣಂ
123. ಮತ ಸಾಮರಸ್ಯಂ
124. ಮೋಕ್ಷಮು – ಮೋಸಮು
125. ಅಕ್ಷರ ಜ್ಞಾನಮು
126. ಲಲಾಜಲಮು
127. ದೈವ ಧರ್ಮಗಳು–ಮತಸಾಂಪ್ರದಾಯಗಳು
128. ಆಹಾರಮು ನೀಕಾ! ನೀ ಆತ್ಮಕಾ!!
129. ಮಾತ್ರ–ಮಂದು
130. ಕಾಲಚಕ್ರಂ
131. ಆಧ್ಯಾತ್ಮಿಕ ಪ್ರಶ್ನಲು–ಜವಾಬುಲು.

# ಇಂದೂ ಜ್ಞಾನವೇದಿಕೆ ಪುಸ್ತಕಗಳು ದೊರೆಯುವ ವಿಳಾಸ

## ಪ್ರಬೋಧಾಶ್ರಮ (ಶ್ರೀ ಕೃಷ್ಣಮಂದಿರ)

ಚಿನ್ನಪೊಡಮಲ (ಗ್ರಾ), ತಾಡಿಪತ್ರಿ (ಮಂ), ಅನಂತಪುರಂ (ಜಿಲ್ಲೆ). A.P

Cell : **ಲಕ್ಷ್ಮಿನಾರಾಯಣಾಚಾರಿ**–09440556968. **ವೆಂಕಟೇಶ್**–08096816963.

**(ಇಂದೂ ಜ್ಞಾನ ವೇದಿಕೆ ಸದಸ್ಯರು)**

**ಎ. ರಾಘವೇಂದ್ರ ಶ್ರೇಷ್ಠಿ**
ಹೊಸಪೇಟೆ, ಬಳ್ಳಾರಿ (ಜಿಲ್ಲೆ). K. A
Cell : 9611133635, 7619545963, 09440645005

**ಜಿ. ರಾಧಾಕೃಷ್ಣಾ ರೆಡ್ಡಿ**
ಪ್ರಬೋಧಾ ನಿಲಯ. ರಿಂಗ್ ರೋಡ್, ಮರಲೂರು, ತುಮಕೂರು (ಜಿ).
ಪಿನ್–572150, Cell : 9448177812

**ಶಿವರಾಜ**
(ಸಾ)(ಕಿ) ಕುಕನೂರು, ಚಿಕ್ಕಸೂಗುರು (ತಾ), ರಾಯಚೂರು (ಜಿ), Cell:98443 69516

**R.S. ವೀರಾಚಾರಿ**
ಕತ್ತರಗುಪ್ಪೆ, ಬೆಂಗಳೂರು–560085
Cell : 9036892829

**G. ಮನೋಹರ್**
ಮಲ್ಲಸಂದ್ರ, ಟಿ. ದಾಸರಹಳ್ಳಿ ಬೆಂಗಳೂರು–560057
Cell : 7411459912, 9448452963.

**B. ವಾತ್ಸಲ್ಯ**
ರೈಲ್ವೇ ಸ್ಟೇಷನ್ ಹತ್ತಿರ, ಪಿ.ಬಿ.ರೋಡ್, ದಾವಣಗೆರೆ–577002
Cell : 9901534677, 8880666529

**ಯೋಗೇಶ್**.B
ವಡ್ಡೇಪಾಲ್ಯಂ (ಗ್ರಾ), ಕುಂದುರ್ಪಿ(ಮಂ),ಅನಂತಪುರ(ಜಿಲ್ಲಾ)
ಸೆಲ್: 9620193341, 9739228639

**ಬಸವರಾಜ ಅಂಗಡಿ**
(ಸಾ) ಪೋತ್ನಾಳ, (ತಾ) ಮಾನವಿ, ರಾಯಚೂರು (ಜಿ) Cell :**9632418716**

**ಸೂರ್ಯ ಪ್ರಕಾಶ**
ಟೈಪ್ 'ಸಿ' (ಸಾ) (ಪೊ) ಶಕ್ತಿನಗರ (ತಾ), ರಾಯಚೂರು (ಜಿ)
Cell : 9611183107, 9164886981

**ಲೀಲಾವತಿ**
ಜನತಾನಗರ, ತೊಣಚಿಕೊಪ್ಪಲ್, ಮೈಸೂರ್
Cell : 9141109799, 9986369118

**T.V. ರಮಣ**
NGR ಲೇಔಟ್, ರೂಪೇನಾ ಅಗ್ರಹಾರ, ಬೆಂಗಳೂರು–560068.
Cell : 08970772028, 07411459912, 07406039453

**M. ನಾರಾಯಣರೆಡ್ಡಿ**
(Bsc census department retired supervisor)
ರಾಮಗುಂಡನಲ್ಲಿ ಪೋಸ್ಟ್, ವೈಟ್ ಫೀಲ್ಡ್ ರೋಡ್, ಬೆಂಗಳೂರು–066
Cell : 9482516023

**ಪ್ರಕಾಶ್ ರೆಡ್ಡಿ**
ಸೆಲ್:9845656774,9482516023

**ಯೋಗೇಶ್**
ಸೂಲನಾಯಕನಹಳ್ಳಿ (ಗ್ರಾಮ), ತುಮಕೂರು (ಜಿಲ್ಲೆ).
ಸೆಲ್:8762523963,9740744424

# ಯೋಗೀಶ್ವರರ ಸಂಚಲನಾತ್ಮಕ ರಚನೆಗಳ ಸಾರಾಂಶ

1. ತ್ರೈತ ಸಿದ್ಧಾಂತ ಗ್ರಂಥಗಳಲ್ಲಿ ಅಕ್ಷರ ಸಮುದಾಯವೇ, ಆತ್ಮ ಸಮಾಚಾರವಾಗಿದೆ. ತ್ರೈತ ಸಿದ್ಧಾಂತ ಗ್ರಂಥಗಳಲ್ಲಿ ಕ್ಷಯ ಅಕ್ಷಯ ಸಮಾಚಾರ, ಪರಮಾತ್ಮನ ಸಮಾಚಾರ ಇದೆ.
2. ತ್ರೈತ ಸಿದ್ಧಾಂತ ಸಂಬಂಧ ಗ್ರಂಥಗಳನ್ನು ಭೌತಿಕವಾಗಿ ಬರೆದಿರುವುದು ಯೋಗೀಶ್ವರರು. ತ್ರೈತಸಿದ್ಧಾಂತ ಅನುಬಂಧ ಗ್ರಂಥಗಳಲ್ಲಿ ಅಭೌತಿಕವಾಗಿ ಯೋಗಶಕ್ತಿ ಇದೆ.
3. ತ್ರೈತ ಸಿದ್ಧಾಂತ ಇಂದೂ (ಹಿಂದೂ) ಧರ್ಮಗಳಲ್ಲಿ ವಿಪ್ಲವಾತ್ಮಕವಾದುದು. ತ್ರೈತ ಸಿದ್ಧಾಂತ ಗ್ರಂಥದಲ್ಲಿನ ಜ್ಞಾನ ಸಂಚಲನಾತ್ಮಕವಾದುದು, ಓದಿ ನೋಡಿರಿ.
4. ತ್ರೈತ ಸಿದ್ಧಾಂತ ಲೋಕದಲ್ಲಿ ಎಲ್ಲದಕ್ಕಿಂತ ದೊಡ್ಡದು. ತ್ರೈತ ಸಿದ್ಧಾಂತ ಗ್ರಂಥಗಳು ಎಲ್ಲಾ ಗ್ರಂಥಗಳನ್ನು ಮೀರಿರುವವು. ಅದರ ರಚನಗಾರ ಯೋಗಿಗಳಿಗೆ ಈಶ್ವರನಾದ ಯೋಗೀಶ್ವರನು.
5. ತ್ರೈತ ಸಿದ್ಧಾಂತ ಗ್ರಂಥಗಳು ಕಾಣಿಸಿದರೆ ದುಷ್ಟಶಕ್ತಿಗಳು ಭಯದಿಂದ ನಡುಗುತ್ತವೆ. ತ್ರೈತ ಸಿದ್ಧಾಂತ ಗ್ರಂಥಗಳನ್ನು ಹತ್ತಿರ ಇಟ್ಟುಕೊಂಡರೆ ಯೋಗಶಕ್ತಿಗೆ ತಾಳಲಾರದೆ ಭಯಪಟ್ಟು ಹೋಗುತ್ತವೆ.
6. ತ್ರೈತ ಸಿದ್ಧಾಂತ ಜ್ಞಾನ ಭಗವದ್ಗೀತೆ ನಂತರ ಹೇಳಲಾದ ಅತ್ಯುತ್ತಮ ಜ್ಞಾನ. ತ್ರೈತ ಸಿದ್ಧಾಂತ ಗ್ರಂಥದಲ್ಲಿ ಕೃಷ್ಣನು ಮೊದಲು ಹೇಳದ ಜ್ಞಾನವನ್ನೂ ಸಹ ಯೋಗೀಶ್ವರರು ಹೇಳಿದ್ದಾರೆ.
7. ತ್ರೈತ ಸಿದ್ಧಾಂತ ಜ್ಞಾನ ಮಾನವ ಜೀವನಕ್ಕೆ ದೊಡ್ಡ ಪ್ರಕಾಶವು. ತ್ರೈತ ಸಿದ್ಧಾಂತದ ಬೆಳಕಿನೊಳಗೆ ಹೋದವನಿಗೆ ಅದು ದೈವಶಕ್ತಿ ಎಂದು ತಿಳಿಯುತ್ತದೆ.
8. ತ್ರೈತ ಸಿದ್ಧಾಂತ ಭಗವದ್ಗೀತೆಯನ್ನು ಬರೆದಿರುವುದು ಯೋಗೀಶ್ವರರು. ಆದ್ದರಿಂದ ತ್ರೈತ ಸಿದ್ಧಾಂತ ಎಂದರೆ ಏನೋ, ಅದು ಎಷ್ಟು ದೊಡ್ಡದೋ ತಿಳಿದಿದೆ.
9. ತ್ರೈತ ಸಿದ್ಧಾಂತವನ್ನು ಕುರಿತು ತಿಳಿದರೆ, ಯೋಗೀಶ್ವರರ ಗ್ರಂಥಗಳನ್ನು ಓದಿದರೆ, ಯಾವ ಮತಸ್ಥನಾದರೂ ಒಪ್ಪಿಕೊಳ್ಳುತ್ತಾನೆ, ಅದನ್ನು ಆಚರಿಸುತ್ತಾನೆ.
10. ತ್ರೈತ ಸಿದ್ಧಾಂತವನ್ನು ಪ್ರತ್ಯಕ್ಷವಾಗಿ ಭಗವಂತನು ಹೇಳಿರುವುದು. ಆದ್ದರಿಂದ ಎಲ್ಲಾ ಮತಗಳ ಸಾರಾಂಶವು ತ್ರೈತ ಸಿದ್ಧಾಂತ ಗ್ರಂಥಗಳಲ್ಲಿ ಇದೆ.
11. ತ್ರೈತ ಸಿದ್ಧಾಂತ ಗ್ರಂಥಗಳು ವ್ಯಕ್ತಿ ಬರೆದಿರುವವು ಅಲ್ಲ, ವ್ಯಕ್ತಿಯಲ್ಲಿನ ಶಕ್ತಿ ಬರೆದಿರುವವು. ಆದ್ದರಿಂದ ಎಲ್ಲ ರಹಸ್ಯಗಳೇ ಓದಿ ತಿಳಿದುಕೊಳ್ಳಿ.
12. ತ್ರೈತ ಸಿದ್ಧಾಂತ ಭಗವದ್ಗೀತೆ, ಬೈಬಲ್, ಖುರಾನ್ ಗ್ರಂಥಗಳಲ್ಲಿ ಇದೆ. ಆದರೂ ಹಿಂದೂಗಳಿಗಾಗಲಿ, ಕ್ರೈಸ್ತವರಿಗಾಗಲಿ, ಮುಸ್ಲಿಮ್‌ರಿಗಾಗಲಿ ಆ ವಿಷಯ ತಿಳಿದಿಲ್ಲ.

ತಪ್ಪದೆ ಓದಿರಿ! ಓದಿಸಿರಿ!!

ಪ್ರಥಮ ದೈವ ಗ್ರಂಥ

# ತ್ರೈತ ಸಿದ್ಧಾಂತ ಭಗವದ್ಗೀತೆ

**(578 ಶ್ಲೋಕಗಳ ವಚನ ಗ್ರಂಥ)**

ಇದು ಆಧ್ಯಾತ್ಮಿಕ ವಿದ್ಯೆಯಲ್ಲಿ ವಿಪ್ಲವಾತ್ಮಕ ತಿರುವು ತಿರುಗಿದ ಭಗವದ್ಗೀತೆ. 55 ಶ್ಲೋಕಗಳಿಗೆ ಪೂರ್ತಿ ಭಾವ ಬದಲಾವಣೆಯೊಂದಿಗೆ ತಯಾರಾಗಿದೆ. ಮೂರು ಆತ್ಮಗಳನ್ನು ಕುರಿತು ಶಾಸ್ತ್ರಾಧಾರದಿಂದ ವಿವರಿಸಿ ಬೋಧಿಸಿದ ಮೊಟ್ಟ ಮೊದಲ ಭಗವದ್ಗೀತೆ. ಮೊದಲು ಎಷ್ಟೋ ಜನರು ಬರೆದ ಭಗವದ್ಗೀತೆಗಳಿಗೆ ನೂರಕ್ಕೆ 90ರಷ್ಟು ವಿಭಿನ್ನ ಭಾವಗಳಿಂದ ಕೂಡಿಕೊಂಡಿದೆ. ಎಷ್ಟೋ ಪ್ರತ್ಯೇಕ ಅರ್ಥಗಳೊಂದಿಗೆ ದೇವರು ಹೇಳಿದ ನಿಜ ಭಾವಗಳನ್ನು ಹೇತುಬದ್ಧವಾಗಿ ವಿವರಿಸಿರುವುದು ಮತ್ತು ಹೇತುವಾದಿಗಳು ಸಹ ಖಂಡಿಸಲಾರದ ಭಗವದ್ಗೀತೆ ಇದು ಒಂದೇ. ಗರ್ಭಸ್ಥ ಶಿಶುವಿಗೆ ಪ್ರಾಣ ಇಲ್ಲ ಎನ್ನುವುದು, ಹತ್ಯೆಯನ್ನು ವಿವರಿಸಿ ಆತ್ಮಹತ್ಯೆಯಾಗಿ ಹಾಗೆಯೇ ಆತ್ಮಹತ್ಯೆಯನ್ನು ಹತ್ಯೆಯಾಗಿ ಹೇಳುವುದು, ಇಂತಹವು ಬಹಳ ಜನರಿಗೆ ಸಹಿಸಿಕೊಳ್ಳಲಾರದಂತಹ ವಿಪ್ಲವಾತ್ಮಕ ಹಾಗೂ ಸಂಚಲನ ವಿಷಯಗಳೆಷ್ಟೋ ಈ ಗ್ರಂಥದಲ್ಲಿ ಇವೆ. ಶ್ರೀಕೃಷ್ಣನ ಯಥಾರ್ಥ ಭಾವವನ್ನು ತಿಳಿಸಿ, ವಾಸ್ತವ ಜ್ಞಾನ ಪಥದಲ್ಲಿ ನಡೆಸಿ, ಮೋಕ್ಷಗಮ್ಯವನ್ನು ಸೇರಿಸುವುದು ಈ ಗ್ರಂಥ ರಾಜ.

**ರಚಿತ : ತ್ರಿಮತ ಏಕೈಕ ಗುರುವು, ತ್ರೈತ ಸಿದ್ಧಾಂತ ಆದಿಕರ್ತ ಶ್ರೀಶ್ರೀಶ್ರೀ ಆಚಾರ್ಯ ಪ್ರಬೋಧಾನಂದ ಯೋಗೀಶ್ವರರು**

# ಬ್ರಹ್ಮ-ರಾವಣ ಬ್ರಹ್ಮ-ಭಗವಾನ್ ರಾವಣ ಬ್ರಹ್ಮ

ರಾವಣಬ್ರಹ್ಮ ಎಂಬ ಹೆಸರು ಎಲ್ಲರೂ ಕೇಳಿರುತ್ತೀರಿ. ಆ ಹೆಸರನ್ನು ಎರಡು ಭಾಗಗಳಾಗಿ ವಿಂಗಡಿಸಬಹುದು. ಒಂದು ರಾವಣ, ಎರಡು ಬ್ರಹ್ಮ. 'ರಾವಣ' ಎಂಬ ಪದವನ್ನು ಕುರಿತು ನಂತರ ಹೇಳಿಕೊಳ್ಳೋಣ ಆದರೇ ಮೊದಲು 'ಬ್ರಹ್ಮ' ಎಂಬ ಪದವನ್ನು ಕುರಿತು ಹೇಳಿಕೊಳ್ಳೋಣ. ಬ್ರಹ್ಮ ಎಂದರೇ ದೊಡ್ಡದೆಂದು ಅರ್ಥ. ಸರ್ವಲೋಕಗಳಿಗು ದೊಡ್ಡವನು ಒಬ್ಬನೇ ಇದ್ದಾನೆ. ಆ ಒಬ್ಬನೇ ದೇವರು ಎಂದು ಹೇಳಬಹುದು. ದೇವರು ಎಂದರೇ! 'ಹುಡುಕಲ್ಪಡುವ ವನು' ಎಂದು ಅರ್ಥ. ಅದನ್ನೇ **'ಹುಡುಕಲ್ಪಡುವವನು ದೇವರೆಂದು'** ಹೇಳುತ್ತಾರೆ. ದೇವರು ಹುಡುಕಲ್ಪಡುವವನು ಆದರೇ ಆತನು ಯಾರಿಗೂ ತಿಳಿಯದಂತೆ ಎಲ್ಲೋ ಒಂದು ಕಡೆ ಇರಬೇಕು ಅಲ್ಲವೇ! ಎಂದು ಯಾರಾದರೂ ಕೇಳಬಹುದು. ಅದಕ್ಕೆ ಉತ್ತರವಾಗಿ ದೇವರು ಎಲ್ಲೋ ಒಂದು ಕಡೆ ಇದ್ದಾನೆ ಎಂದು ಒಪ್ಪಿಕೊಂಡರೂ, ಆ ಇರುವವನು ಯಾರು? ಎಂಬ ಪ್ರಶ್ನೆ ತಕ್ಷಣವೇ ಹುಟ್ಟಿಬರುತ್ತಿದೆ. ಅದನ್ನು ಪ್ರತ್ಯಕ್ಷವಾಗಿ ಕೇಳಿದರೇ **"ದೇವರು ಯಾರು?"** ಎಂದು ಪ್ರಶ್ನಿಸಬಹುದು. ಪ್ರಶ್ನೆ ಎಂದ ಮೇಲೆ ಉತ್ತರ ತಪ್ಪದೇ ಇರುತ್ತದೆ. ಆದರೇ ಆ ಉತ್ತರ ಎಲ್ಲರಿಗೂ ತಿಳಿಯಬಹುದು ಇಲ್ಲವೇ ತಿಳಿಯದೆ ಹೋಗಬಹುದು. ಪ್ರಶ್ನೆ, ಪ್ರಶ್ನೆಗು ಉತ್ತರ ಎರಡು ಇದ್ದರೂ ಪ್ರಪಂಚದಲ್ಲಿ ಅತಿ ದೊಡ್ಡ ಪ್ರಶ್ನೆಯಾಗಿ ಉಳಿದುಹೋಗಿರುವುದು "ದೇವರು ಯಾರು?" ಎನ್ನುವುದು. ಆ ಪ್ರಶ್ನೆಗೆ ಉತ್ತರ ಇದ್ದರೂ ಯಾರಿಗೂ ತಿಳಿಯದ ಅತಿ ರಹಸ್ಯ ಉತ್ತರ 'ದೇವರು ಇಂಥವನು' ಎನ್ನುವುದು. ಒಂದು ವಿಧವಾಗಿ ಹೇಳಿದರೇ ಉತ್ತರವಿಲ್ಲದ ಪ್ರಶ್ನೆ ಎಂದು ಹೇಳಬಹುದು. ಪ್ರಶ್ನೆ ಎಂದ ಮೇಲೆ ಉತ್ತರ ಇರುತ್ತದೆ ಆದಕಾರಣ ಯಾರಿಗೂ ತಿಳಿಯದ ಉತ್ತರವಿರುವ ಪ್ರಶ್ನೆಯೆಂದು ಕೂಡಾ ಹೇಳಬಹುದು. ಪ್ರಶ್ನೆ ಒಬ್ಬರದ್ದಾದರೇ ಉತ್ತರ ಇನ್ನೊಬ್ಬರು ಹೇಳಬೇಕಾಗಿರುತ್ತದೆ. ಆದರೇ ಈ ಪ್ರಶ್ನೆಗೆ ಉತ್ತರವಿದ್ದರೂ ಆ ಉತ್ತರ ದೇವರಿಗೇ ಗೊತ್ತು. ಆದರೇ ಪ್ರಶ್ನೆ ಯಾರದ್ದಾದರೂ ಆಗಬಹುದು, ಉತ್ತರ ಮಾತ್ರ ದೇವರದ್ದೇಯೆಂದು ಹೇಳಬಹುದು. ದೇವರು

ತನ್ನ ಉತ್ತರವನ್ನು ಪ್ರತ್ಯಕ್ಷವಾಗಿ ಹೇಳುವುದಿಲ್ಲ. ಪರೋಕ್ಷವಾಗಿ ಹೇಳಿದ್ದಾನೆ. ಆದರೇ ಆ ಉತ್ತರವನ್ನು ಪ್ರಜೆಗಳು ಗ್ರಹಿಸಲಾರದೇ ಹೋಗಿದ್ದಾರೆ. ಆದಕಾರಣ ಆ ಉತ್ತರ ಯಾರಿಗೂ ತಿಳಿಯದ ಅತಿ ದೊಡ್ಡ ರಹಸ್ಯ ಉತ್ತರವಾಗಿದೆ.

"ದೇವರು ಯಾರು?" ಎಂಬ ಪ್ರಶ್ನೆಗೆ ದೇವರು ಇಂಥವನು ಎನ್ನುವ ಉತ್ತರವೇನೋ, ಅದು ರಹಸ್ಯವಾಗಿರುವುದಾದ್ದರಿಂದ ದೇವರು ಕೂಡ ರಹಸ್ಯವಾದವನೇ ಎಂದು ಹೇಳಬಹುದು. ದೇವರು ರಹಸ್ಯದವನಾ? ಎಂದು ಪ್ರಶ್ನಿಸಿದರೇ ಇಲ್ಲ ಆತನು ಬಟ್ಟೆಬಯಲಾಗಿ ಎಲ್ಲರಿಗೂ ಹತ್ತಿರವಾಗಿ, ಎಲ್ಲರೂ ತಿಳಿಯುವಂತೆ ಇದ್ದಾನೆಂದು ಹೇಳಬಹುದು. ದೇವರು ಒಂದು ಕಡೆ ರಹಸ್ಯವಾಗಿ ಅಡಗಿದ್ದಾನಾ? ಎಂದು ಪ್ರಶ್ನಿಸಿದರೇ ಅದಕ್ಕೆ ಉತ್ತರವಾಗಿ ದೇವರು ಒಂದು ಕಡೆ ರಹಸ್ಯವಾಗಿ ಇಲ್ಲ, ದೇವರು ಎಲ್ಲೆಡೆ ಇದ್ದಾನೆ. ಆದಕಾರಣ ಆತನನ್ನು ನೋಡಲಾರದೆ ಎಲ್ಲೋ ಇದ್ದಾನೆ ಎನ್ನುವುದು, ರಹಸ್ಯವಾಗಿ ಇದ್ದಾನೆ ಎನ್ನುವುದು, ಒಂದುಕಡೆ ಇದ್ದಾನೆ ಎನ್ನುವುದು ಮನುಷ್ಯರ ತಪ್ಪೇ ಹೊರತು ದೇವರ ತಪ್ಪಲ್ಲ. ಹೇಗಾದರೂ ಮನುಷ್ಯರ ಅಜ್ಞಾನದಿಂದ ದೇವರು ಎಲ್ಲೆಡೆ ಇದ್ದರೂ ಆತನನ್ನು ತಿಳಿಯಲಾರದೇ ದೇವರು ಇಲ್ಲವೇಇಲ್ಲ ಎನ್ನುವವರು ಇದ್ದಾರೆ. ಆಗ ದೇವರ ಇರುವಿಕೆಗೇ ಆಪತ್ತಾಗುವುದರಿಂದ, ದೇವರು ಇರುವವನಲ್ಲ ಇಲ್ಲದವನು ಎಂದು ಹೇಳುವುದರಿಂದ, ದೇವರು ತನ್ನ ಇರುವಿಕೆಯನ್ನು ತಿಳಿಸುವುದಕ್ಕಾಗಿ, ಸ್ವತಃವಾಗಿ ಮನುಷ್ಯರು ದೇವರನ್ನು ತಿಳಿಯುವುದಕ್ಕೆ ಅವಶ್ಯವಾದ ಜ್ಞಾನವನ್ನು ತಿಳಿಸಬೇಕೆಂದು ಅಂದುಕೊಂಡಿದ್ದಾನೆ.

ದೇವರು ಎಂದರೇ ತಿಳಿಯದವನು, ಇಲ್ಲದವನು ಎಂಬ ಅಪವಾದ ಹೋಗುವುದಕ್ಕೆ ದೇವರು ಮನುಷ್ಯರಿಗೆ ತನ್ನನ್ನು ತಿಳಿಯುವ ಉಪಾಯ ಜ್ಞಾನವನ್ನು ತಿಳಿಸಬೇಕೆಂದುಕೊಂಡಿದ್ದಾನೆ. ಆದರೇ ದೇವರು ತನಗಾಗಿ ಕೆಲವು ಧರ್ಮಗಳನ್ನು ಇಟ್ಟುಕೊಂಡು, ತನ್ನ ಧರ್ಮಗಳ ಪ್ರಕಾರ ಇರಬೇಕೆಂದು ಕೊಳ್ಳುವವನು ದೇವರು ಆಗಿರುವುದರಿಂದ, ಆತನು ನೇರವಾಗಿ ಪ್ರಜೆಗಳೊಂದಿಗೆ ಮಾತನಾಡುವ ಅವಕಾಶವಿಲ್ಲ. ದೇವರು ಮುಖ್ಯವಾಗಿ ಮೂರು ಧರ್ಮಗಳನ್ನು

ಅನುಸರಿಸುತ್ತಿದ್ದಾನೆ. ನಾಮ, ರೂಪ, ಕ್ರಿಯೆಗಳು ಇಲ್ಲದವನಾಗಿ ಇದ್ದಾನೆ. ಆ ಪದ್ಧತಿ ಪ್ರಕಾರ ದೇವರಿಗೆ ಹೆಸರಿಲ್ಲ, ರೂಪವಿಲ್ಲ, ಕೆಲಸವಿಲ್ಲ. ಮನುಷ್ಯ ದೇವರನ್ನು ನೋಡಿ ತಿಳಿಯುವುದಕ್ಕೆ ಆತನಿಗೆ ರೂಪ ಇಲ್ಲ. ಆಕಾರ ಇಲ್ಲದಿರುವುದರಿಂದ ಮನುಷ್ಯ ದೇವರನ್ನು ನೋಡುವುದಕ್ಕೆ ಅವಕಾಶವೇ ಇಲ್ಲ. ಹಾಗೆಯೇ ದೇವರಿಗೆ ಹೆಸರಿಲ್ಲ ಆದ್ದರಿಂದ ದೇವರು ಇಂತಹ ಹೆಸರಿರುವವನು ಎಂದು ಹೇಳುವುದಕ್ಕೂ ಅವಕಾಶವಿಲ್ಲ. ಮುಖ್ಯವಾಗಿ ಗಮನಿಸಬೇಕಾಗಿರುವುದು ಏನೆಂದರೇ! ದೇವರು ಎನ್ನುವ ಪದ ದೇವರ ಹೆಸರಲ್ಲ. ದೇವರು ಹುಡುಕಲ್ಪಡುವವನು ಎಂದು ತಿಳಿಸುವ ನಿಮಿತ್ತ ಹೇಳುವ ಪದವಾಗಿ ಲೆಕ್ಕಿಸಬೇಕು. ಹಾಗೆಯೇ ಕೆಲಸ ಮಾಡದವನು ದೇವರು. ಆತನು ಯಾವ ಕಾರ್ಯವನ್ನಾಗಲೀ ಮಾಡುವವನಲ್ಲ. ಆದ್ದರಿಂದ ಇಂತಹ ಕೆಲಸ ಮಾಡುವವನು ದೇವರು ಎಂದು ಹೇಳುವುದಕ್ಕೆ ಅವಕಾಶವಿಲ್ಲ. ಆಕಾರ, ಹೆಸರು, ಕೆಲಸ ಇಲ್ಲದವನು ದೇವರು ಆಗಿರುವುದರಿಂದ ಆತನನ್ನು ಯಾರೂ ಗುರುತಿಸುವುದಕ್ಕೆ ಅವಕಾಶವೇ ಇಲ್ಲ. ಯಾರೂ ತಿಳಿಯುವುದಕ್ಕೆ ಅವಕಾಶವೇ ಇಲ್ಲದಿರುವುದರಿಂದ ಆತನು ಎಂದಿಗಾದರೂ ಹುಡುಕಲ್ಪಡುವವನೇ ಹೊರತು, ತಿಳಿಯಲ್ಪಡುವವನಲ್ಲ. ಆದ್ದರಿಂದ ಆತನು ಶಾಶ್ವತವಾಗಿ ದೇವರಾಗಿ ಉಳಿದುಹೋಗಿದ್ದಾನೆ.

**ಪ್ರಶ್ನೆ :– ದೇವರು ಕೆಲಸಮಾಡದವನಾದರೇ ಪ್ರಪಂಚವನ್ನು ಹೇಗೆ ಸೃಷ್ಟಿಸಿದ್ದಾನೆ? ಪ್ರಪಂಚವನ್ನು ಸೃಷ್ಟಿಸಿರುವ ಸೃಷ್ಟಿಕರ್ತನು ಎಂದು ದೇವರೇ ತನ್ನ ಮಾತುಗಳಲ್ಲಿ ಹೇಳಿದ್ದಾನೆ. ದೈವಗ್ರಂಥಗಳಲ್ಲಿ ದೇವರು ಸೃಷ್ಟಿಕರ್ತನೆಂದು ಹೇಳಲ್ಪಟ್ಟಿದ್ದಾನೆ. ದೇವರು ಪ್ರಪಂಚವನ್ನು ತಯಾರು ಮಾಡಿರುವವನಾದ್ದರಿಂದ ದೇವರು ಕೆಲಸ ಮಾಡಿದವನಾಗುತ್ತಿದ್ದಾನೆ. ಹಾಗಿರುವಾಗ ದೇವರ ಮುಖ್ಯವಾದ ಧರ್ಮಗಳಲ್ಲಿ ದೇವರು ಕ್ರಿಯಾರಹಿತನು ಎಂದು ಹೇಳುವುದು ಅಸತ್ಯವಲ್ಲವೇ? ದೇವರು ಕೆಲಸ ಮಾಡದೇನೇ ಸೃಷ್ಟಿ ತಯಾರಾಗಿದೆಯಾ? ಇದಕ್ಕೆ ನಿಮ್ಮ ಉತ್ತರ ಏನು?**

**ಉತ್ತರ :–** ದೇವರು 'ಯಾವ ಕೆಲಸವನ್ನು ಮಾಡುವವನಲ್ಲ' ಎನ್ನುವ ಮಾತು ವಾಸ್ತವ. ಆ ವಿಷಯವು ಮನುಷ್ಯರಾದ ನಮಗೆ ಅರ್ಥವಾಗಬೇಕೆಂದರೇ

ಮೊದಲಿಗೆ ಸ್ವಲ್ಪ ಸಮಾಚಾರವನ್ನು ತಿಳಿಯಬೇಕಾಗಿದೆ. ಅದು ಏನೆಂದರೇ! ಮೊದಲು ಪ್ರಪಂಚವಿಲ್ಲದ ಸಮಯದಲ್ಲಿ ಕೂಡಾ ದೇವರು ಒಬ್ಬನೇ ಇದ್ದಾನೆ. ದೇವರು ಹೊರತು ಯಾರೇ ಆಗಲೀ, ಯಾವುದೇ ಆಗಲೀ ಇಲ್ಲದ ಸಮಯದಲ್ಲಿ ಪ್ರಪಂಚವೆನ್ನುವುದು ಇಲ್ಲ, ಪ್ರಪಂಚದಲ್ಲಿ ಮನುಷ್ಯರಾಗಲೀ, ಜೀವರಾಶಿಗಳಾಗಲೀ ಇಲ್ಲ. ಯಾವುದೂ ಅಲ್ಲದ ಸಮಯದಲ್ಲಿ, ಏನೂ ಇಲ್ಲದ ಸಮಯದಲ್ಲಿ ದೇವರು ಪ್ರಪಂಚವನ್ನು ಸೃಷ್ಟಿಸಬೇಕೆಂದುಕೊಂಡಿದ್ದಾನೆ. ಸೃಷ್ಟಿ ಪೂರ್ವ ದೇವರು ಕೆಲಸವನ್ನು ಮಾಡಿ ಪ್ರಪಂಚವನ್ನು ತಯಾರು ಮಾಡಿದ್ದಾನೆ. ದೇವರು ಕೆಲಸ ಮಾಡುವುದರಿಂದ ಆ ದಿನ ಪ್ರಕೃತಿ ತಯಾರಾಗಿದೆ. ಪ್ರಕೃತಿ ಎಂದರೇ ಐದು ಭಾಗಗಳಾಗಿ ಇರುವ ಪ್ರಪಂಚ. ಪ್ರಪಂಚವು ಆಕಾಶ, ಗಾಳಿ, ಅಗ್ನಿ, ನೀರು, ಭೂಮಿ ಎಂಬ ಐದು ಭಾಗಗಳಾಗಿ ಇದೆ. ಪ್ರಪಂಚವಿಲ್ಲದ ಸಮಯದಲ್ಲಿ ದೇವರಿಗೆ ಧರ್ಮಗಳು ಇಲ್ಲ. ದೇವರೆಂದು ಕೂಡಾ ಕರೆಯಲ್ಪಡುವವನು ಅಲ್ಲ. ಯಾರೂ ಇಲ್ಲದ ಕಾಲದಲ್ಲಿ ಆತನನ್ನು ದೇವರೆಂದು ಕರೆಯುವವರೂ ಇಲ್ಲ. ದೇವರು ಸೃಷ್ಟಿ ಕಾರ್ಯವನ್ನು ಮಾಡಿದ ನಂತರ ಎರಡನೆಯ ಕಾರ್ಯವನ್ನು ಮಾಡಲಿಲ್ಲ. ದೇವರು ಒಬ್ಬನೇ ಆಗಿರುವುದರಿಂದ ಆತನು ಸೃಷ್ಟಿ ಪೂರ್ವವು ಒಂದೇ ಕಾರ್ಯವನ್ನು ಮಾಡಿದ್ದಾನೆ. ಒಂದು ಕಾರ್ಯದ ನಂತರ ಎರಡನೆಯ ಕಾರ್ಯವನ್ನು ಮಾಡಲಿಲ್ಲ. ಸೃಷ್ಟಿ ನಂತರ ದೇವರಿಗೆ ಮುಖ್ಯವಾಗಿ ಮೂರು ಧರ್ಮಗಳು ಏರ್ಪಟ್ಟಿವೆ. ಅವುಗಳೇ ರೂಪ, ನಾಮ, ಕ್ರಿಯೆಗಳು ಇಲ್ಲದವನು ಎನ್ನುವವು. ದೇವರು ಸೃಷ್ಟಿ ಪೂರ್ವ ಕೆಲಸ ಮಾಡಿದ್ದಾನೆ. ಆಗ ಆತನಿಗೆ ಯಾವ ಧರ್ಮಗಳಿಲ್ಲ. ಸೃಷ್ಟಿ ನಂತರ ಧರ್ಮಗಳು ಏರ್ಪಟ್ಟಿವೆ ಆದಕಾರಣ, ಸೃಷ್ಟಿ ನಂತರ ಆತನು ಯಾವ ಕಾರ್ಯವನ್ನು ಮಾಡಲಿಲ್ಲ. ಆತನಿಗೆ ಯಾವ ಹೆಸರಿಲ್ಲ. ಆತನಿಗೆ ಯಾವ ಆಕಾರವಿಲ್ಲ. ಆದ್ದರಿಂದ ಆತನನ್ನು ಯಾರೂ ತಿಳಿಯರು.

**ಪ್ರಶ್ನೆ :– ಈ ದಿನ ಎಷ್ಟೋ ಜನ ಸಾಯುತ್ತಿದ್ದಾರೆ. ಎಷ್ಟೋ ಜನ ಹುಟ್ಟುತ್ತಿದ್ದಾರೆ. ದೇವರು ಸೃಷ್ಟಿಕರ್ತನಾದಾಗ ಪ್ರತಿದಿನ ಸತ್ತುಹೋದವರನ್ನು ತಿರುಗಿ ಹುಟ್ಟಿಸುವ ಕಾರ್ಯವನ್ನು ಮಾಡುತ್ತಿದ್ದಾನೆ ಅಲ್ಲವೇ! ಸರ್ವಜೀವರಾಶಿಗಳನ್ನು ಸೃಷ್ಟಿಸುವ**

**ಕಾರ್ಯಗಳನ್ನು ನಿತ್ಯವು ಮಾಡುವವನನ್ನು ಕಾರ್ಯಗಳು ಮಾಡುವವನು ಎನ್ನದೇ, ಕಾರ್ಯಗಳು ಮಾಡದವನು ಎಂದು ಹೇಗೆ ಹೇಳಬೇಕು? ಹಾಗೆ ಹೇಳುವುದು ಅಸತ್ಯವನ್ನು ಹೇಳಿದಂತೆ ಅಲ್ಲವೇ? ಇದಕ್ಕೆ ನೀವೇನು ಹೇಳುತ್ತೀರಿ?**

**ಉತ್ತರ :–** ನನ್ನ ಉತ್ತರವನ್ನು ತಿಳಿಯುವುದಕ್ಕು ಮೊದಲು ನೀನು ನನ್ನನ್ನು ವಿಶ್ವಾಸಿಸಬೇಕಾಗಿರುತ್ತದೆ. ನಾನು ಸತ್ಯವನ್ನೇ ಹೇಳುತ್ತೇನೆಂದು ನನ್ನನ್ನು ನೀನು ವಿಶ್ವಾಸಿಸಿದಾಗ ನನ್ನ ಮಾತನ್ನು ಕೇಳಬಲ್ಲೆ, ಅಂದರೇ ನನ್ನ ಮಾತಲ್ಲಿನ ಸತ್ಯವನ್ನು ಗ್ರಹಿಸಬಲ್ಲೆ. ನಾನು ಹೇಳುವ ಮಾತು ಶಾಸ್ತ್ರಬದ್ಧವಾದುದೆಂದು ತಿಳಿಯುವುದು. ಅದೇ ಭಾವವನ್ನು ಹೊಂದಿ ಈಗ ನಾನು ಹೇಳುವ ಮಾತನ್ನು ಕೇಳಿದರೇ ವಾಸ್ತವವಾದ ಉತ್ತರ ತಿಳಿಯುವುದು. ಮೂರು ದೈವಗ್ರಂಥಗಳಲ್ಲಿನ ದೈವ ಜ್ಞಾನವನ್ನೇ ಹೇಳುತ್ತಿದ್ದೇನೆಂದು ಕೂಡಾ ನಿಮಗೆ ಅರ್ಥವಾಗುವುದು. 'ದೇವರು' ಅಂದರೇ ಪರಿಶುದ್ಧಾತ್ಮ ಎಂದು ಕರೆಯಲ್ಪಡುವ ಪರಮಾತ್ಮ ಪ್ರಪಂಚವನ್ನು ಪ್ರಪಂಚವನ್ನು ಸೃಷ್ಠಿಸಿರುವ ಸೃಷ್ಠಿಕರ್ತನೇ ಹೊರತು, ಜೀವರಾಶಿಗಳನ್ನು ಸೃಷ್ಠಿಸಿರುವ ಸೃಷ್ಠಿಕರ್ತನಲ್ಲನೀ ದಿನ ಜೀವರಾಶಿಗಳನ್ನು ಸೃಷ್ಠಿಸುತ್ತಿರುವ ಸೃಷ್ಠಿಕರ್ತ ಬೇರೆ. ಮೊಟ್ಟಮೊದಲು ಪ್ರಪಂಚವನ್ನು ಸೃಷ್ಠಿಸಿರುವ ಸೃಷ್ಠಿಕರ್ತ ಬೇರೆ. ಮೊದಲು ಪ್ರಪಂಚವನ್ನು ಸೃಷ್ಠಿಸಿರುವ ಸೃಷ್ಠಿಕರ್ತನಾದ ಪರಮಾತ್ಮ ಎರಡನೆಯಬಾರಿ ಕೆಲಸವನ್ನು ಮಾಡಲಿಲ್ಲ. ಆ ಲೆಕ್ಕದ ಪ್ರಕಾರ ಪರಮಾತ್ಮ ಜೀವರಹಿತವಾದ ಸೃಷ್ಠಿಯಾದ ಪ್ರಪಂಚವನ್ನು ಸೃಷ್ಠಿಸಿದ್ದಾನೆ. ಆ ಲೆಕ್ಕದ ಪ್ರಕಾರ ಮೊದಲು ಜೀವರಾಶಿಗಳು ಇಲ್ಲದ ಪ್ರಪಂಚವು ಸೃಷ್ಠಿಸಲ್ಪಟ್ಟಿದೆ. ಸೃಷ್ಠಿ ಪೂರ್ವವು ಕೆಲಸ ಮಾಡಿರುವ ಪರಮಾತ್ಮ ಎರಡನೆಯಬಾರಿ ತನ್ನ ಸೃಷ್ಠ ನಂತರ ಕೆಲಸವನ್ನು ಮಾಡದವನಾಗಿ, ಜೀವರೂಪವಾದ ಪ್ರಪಂಚವನ್ನು ಸೃಷ್ಠಿಸುವ ನಿಮಿತ್ತ ತನ್ನಿಂದ ಆತ್ಮನನ್ನು ಹೊರಗೆ ಕಳುಹಿಸಿದ್ದಾನೆ. ತಾನು ಕಳುಹಿಸಿರುವ ಆತ್ಮದಿಂದ ಜೀವರೂಪವಾದ ಪ್ರಪಂಚವನ್ನು ತಯಾರು ಮಾಡಿದ್ದಾನೆ. ತಾನು ಕೆಲಸ ಮಾಡದಿದ್ದರೂ ಸರ್ವಜೀವರಾಶಿಗಳನ್ನೂ ಸೃಷ್ಠಿಸುವ ನಿಮಿತ್ತ ಆತ್ಮನನ್ನು ತನ್ನಿಂದ ಹೊರಗೆ ಕಳುಹಿಸಿದ್ದಾನೆ.

ಜೀವರಾಶಿಗಳಿಲ್ಲದ ಪ್ರಕೃತಿಯನ್ನು ತಯಾರು ಮಾಡಿರುವ ಸೃಷ್ಟಿಕರ್ತ ಪರಮಾತ್ಮ ಆಗಿರುವಾಗ, ಜೀವರಾಶಿಗಳನ್ನು ಸೃಷ್ಟಿಸಿರುವ ಸೃಷ್ಟಿಕರ್ತ ಆತ್ಮ ಎಂದು ಹೇಳಬಹುದು. ಈ ವಿಧವಾಗಿ ಸೃಷ್ಟಿಕರ್ತರು ಇಬ್ಬರೆಂದೂ, ಒಬ್ಬರು ಪ್ರಪಂಚವನ್ನು ಸೃಷ್ಟಿಸಿರುವಾಗ, ಮತ್ತೊಬ್ಬನು ಜೀವರಾಶಿಗಳನ್ನು ಸೃಷ್ಟಿಸಿದ್ದಾನೆ. ಜೀವರಾಶಿಗಳನ್ನು ಸೃಷ್ಟಿಸುವ ಅಧಿಕಾರವನ್ನು ಆತ್ಮ ಪರಮಾತ್ಮ ಬಳಿಯಿಂದ ಪಡೆದಿರುವುದಾಗಿದೆ. ಪರಮಾತ್ಮ ತಂದೆಯಾಗಿರುವಾಗ, ಆತ್ಮ ಪರಮಾತ್ಮಗೆ ಮಾನಸಪುತ್ರನಾಗಿ ಇದ್ದಾನೆ. ದೇವರು ತನ್ನ ಸಂಕಲ್ಪದಿಂದ ಆತ್ಮನನ್ನು ತಯಾರಾಗುವಂತೆ ಮಾಡಿ, ಜೀವರೂಪವಾದ ಸರ್ವಜೀವರಾಶಿಗಳನ್ನು ಆತ್ಮದಿಂದ ಸೃಷ್ಟಿಸಲ್ಪಡುವಹಾಗೆ ಪರಮಾತ್ಮ ಆತ್ಮಗೆ ಸರ್ವ ಅಧಿಕಾರಗಳನ್ನು ಕೊಟ್ಟಿದ್ದಾನೆ. ಅಂದಿನಿಂದ ಇಂದಿನವರೆಗು ಸರ್ವಜೀವರಾಶಿಗಳನ್ನು ಆತ್ಮವೇ ಸೃಷ್ಟಿಸುತ್ತಿದೆ, ಪರಮಾತ್ಮ ಯಾವ ಕೆಲಸವನ್ನೂ ಮಾಡಲಿಲ್ಲ. ಪರಮಾತ್ಮ ಸೃಷ್ಟಿ ಪೂರ್ವದಲ್ಲಿ ಕೆಲಸ ಮಾಡಿದ್ದಾನೆ ಆದರೇ, ಸೃಷ್ಟಿ ನಂತರ ಕೆಲಸವನ್ನು ಮಾಡಲಿಲ್ಲವೆಂದು ಹೇಳಬಹುದು. ಸೃಷ್ಟಿ ನಂತರ ಪರಮಾತ್ಮ ಯಾವ ಕೆಲಸವನ್ನೂ ಮಾಡದೆ ಸುಮ್ಮನಿರುವವನಾಗಿದ್ದು, ಆತ್ಮ ಸರ್ವಕಾರ್ಯಗಳನ್ನು ಮಾಡುತ್ತಿದ್ದಾನೆ. ಆದ್ದರಿಂದ ಆತ್ಮನನ್ನು 'ಕಾರ್ಯಕರ್ತ' ಎಂದು ಹೇಳಿದರೇ, ಪರಮಾತ್ಮನನ್ನು 'ಕ್ರಿಯಾರಹಿತನು' ಎಂದು ಹೇಳಿದ್ದಾರೆ.

**ಪ್ರಶ್ನೆ :- ಪ್ರಪ್ರಥಮ ಸೃಷ್ಟಿಕರ್ತನಾದ ಪರಮಾತ್ಮ ಪ್ರಪಂಚ ತಯಾರಾದ ನಂತರ ಕ್ರಿಯಾರಹಿತನಾಗಿ ಹೋಗಿದ್ದಾನೆ ಅಲ್ಲವೇ! ಎಲ್ಲ ಕೆಲಸಗಳನ್ನು ದೇವರ ಸ್ಥಾನದಲ್ಲಿ ಆತ್ಮವಿದ್ದು ಕೆಲಸ ಮಾಡುತ್ತಿದೆ ಅಲ್ಲವೇ! ಹಾಗಿರುವಾಗ ಪರಮಾತ್ಮ ಅಗತ್ಯವೇ ಇಲ್ಲವಲ್ಲ! ಆತ್ಮವೇ ಸರ್ವಕಾರ್ಯಗಳನ್ನು ಮಾಡುತ್ತಿರುವುದರಿಂದ, ಯಾವ ಕಾರ್ಯವನ್ನು ಪರಮಾತ್ಮ ಮಾಡದೆ ಇರುವುದರಿಂದ, ಮನುಷ್ಯನಿಗೆ ಆತ್ಮ ಅಗತ್ಯವಿದೆ ಆದರೇ, ಪರಮಾತ್ಮ ಒಂದರ ಅಗತ್ಯ ಇಲ್ಲ ಅಲ್ಲವೇ! ಹಾಗಿರುವಾಗ ಪರಮಾತ್ಮನನ್ನು ನಾವು ಹೇಳಿಕೊಳ್ಳಬೇಕಾದ ಕೆಲಸವಿಲ್ಲ ಅಲ್ಲವೇ! ಎಂದು ಕೆಲವರು ಕೇಳಬಹುದು. ಇದಕ್ಕೆ ನೀವೇನು ಹೇಳುತ್ತೀರಿ?**

**ಉತ್ತರ :–** ಒಂದು ಮನೆಯಲ್ಲಿ ಮಗನು, ಮಗನಿಗೆ ತಂದೆ, ತಂದೆಗೆ ತಂದೆ ಇದ್ದಾನೆಂದುಕೊಳ್ಳಿ. ಆಗ ಮನುಷ್ಯ, ತಂದೆ, ತಾತ ಇರುವಹಾಗೆ ತಿಳಿಯುವುದು ಅಲ್ಲವೇ! ಮಗ, ತಂದೆ, ತಾತ ಮೂವರು ಇರುವಾಗ ತಾತನಾದವನು ಸಂಸಾರದ ಜವಾಬ್ದಾರಿಯನ್ನೆಲ್ಲ ತನ್ನ ಮಗನಿಗೆ ವಹಿಸಿ, ತಾತ ಕೆಲಸವನ್ನು ಮಾಡದೆ ಸುಮ್ಮನಿರುವನು. ಎಂದಾದರೂ ಅವಶ್ಯಕತೆ ಬಂದರೇ ಸಲಹೆ ಹೇಳುವುದು ಹೊರತು ಯಾವ ಕೆಲಸವನ್ನು ಮಾಡುತ್ತಿಲ್ಲ. ತಾತ ಕೆಲಸ ಮಾಡದವನೆಂದು ಆತನನ್ನು ಗೌರವಿಸದೇ ಇರುವೆಯಾ, ಅನ್ನವನ್ನು ಇಡದೆ ಇರುತ್ತೀಯಾ? ಮನೆಯಲ್ಲಿ ದೊಡ್ಡವನಾದುದರಿಂದ ಆತನನ್ನು ಗೌರವಿಸುತ್ತಾ ತಿಳಿಯದ ವಿಷಯಗಳನ್ನು ಕೇಳಿದಾಗ, ಆತನು ಸಲಹೆಗಳನ್ನು ಕೊಡುತ್ತಿರುತ್ತಾನೆ. ತಾತನಾದವನು ಕೆಲಸವನ್ನು ಮಾಡದಿದ್ದರೂ, ಮೊಮ್ಮಗ ಮತ್ತು ಮಗ ಇಬ್ಬರೂ ತಾತನನ್ನು ಹೆಮ್ಮೆಯಿಂದ ಹೇಳಿಕೊಳ್ಳುತ್ತಾ ಗೌರವಿಸುತ್ತಿದ್ದಾರೆ ಅಲ್ಲವೇ! ಅದೇ ವಿಧವಾಗಿ ಮನುಷ್ಯನಿಗೆ ತಾತನಹಾಗೆ ಇರುವ ಪರಮಾತ್ಮನನ್ನು ಮಗನಾದ ಆತ್ಮ, ಮೊಮ್ಮಗನಾದ ಜೀವಾತ್ಮ ಅಮಿತವಾಗಿ ಹೇಳಿಕೊಳ್ಳುತ್ತಿದ್ದಾರೆ. ದೇವರಾದ ಪರಮಾತ್ಮ ಪಾತ್ರ ಇಲ್ಲದಿದ್ದರೂ ಮನೆಯಲ್ಲಿ ತಾತನಹಾಗೆ ಗೌರವಿಸಲ್ಪಡುವುದೇ ಅಲ್ಲದೇ, ಆತನನ್ನು ದೇವರೆಂದು ಹೇಳಿಕೊಳ್ಳುತ್ತಾ, ದೇವರೆನ್ನುವ ಭಯ ಹೊಂದಿದ್ದಾರೆ.

**ಪ್ರಶ್ನೆ :– ಒಬ್ಬ ಮನುಷ್ಯನಿಗೆ ದೇವರಾದ ಪರಮಾತ್ಮ ತಾತನಂಥವನು, ಆತ್ಮ ತಂದೆಯಂಥವನು. ಒಳಗಿನ ಜ್ಞಾನದ ಪ್ರಕಾರ ನೋಡಿದರೇ ಮನುಷ್ಯನಿಗೆ ತಂದೆ ಆತ್ಮ, ತಾತ ಪರಮಾತ್ಮನೆಂದು ಹೇಳುವುದು ತಪ್ಪುವುದಿಲ್ಲ. ಆದರೇ ಮನುಷ್ಯ ಅಜ್ಞಾನದಲ್ಲಿ ಮುಳುಗಿಹೋಗಿ ದೇವರೆಂಬ ಭಾವನೆ ಹೊಂದಿದ್ದರೂ, ದೇವರೆಂದರೇ ಆತ್ಮನಾ ಅಥವಾ ಪರಮಾತ್ಮನಾ ಎಂದು ತಿಳಿಯದೆ ಆತ್ಮನನ್ನು ಬಿಟ್ಟುಹಾಕಿ ಪರಮಾತ್ಮನನ್ನು ದೇವರೆಂದು ಹೇಳುತ್ತಿದ್ದಾರೆ. ಮನೆಯಲ್ಲಿ ತಂದೆಯೊಂದಿಗೆ ಮಾತನಾಡದೆ, ನೇರವಾಗಿ ತಾತನೊಂದಿಗೆ ಮಾತನಾಡುವುದರಿಂದ ತಂದೆಯನ್ನು ಅವಮಾನ ಪಡಿಸಿದಂತೆ ಅಲ್ಲವೇ! ಅದೇ ವಿಧವಾಗಿ ಮನುಷ್ಯರು ಪರಮಾತ್ಮನನ್ನು**

**ಆರಾಧಿಸುವುದು ಮಾಡುತ್ತಾ, ಆತ್ಮನನ್ನು ಸ್ವಲ್ಪವಾದರೂ ತಿಳಿಯದೇ ಇದ್ದಾರೆ. ಎಲ್ಲಾ ಮತದವರು ಹಾಗೆಯೇ ಮಾಡುತ್ತಿದ್ದಾರೆ. ಈ ವಿಷಯದಲ್ಲಿ ದೇವರು ಹೇಳಿರುವ ಜ್ಞಾನದ ಪ್ರಕಾರ ಪರಮಾತ್ಮನನ್ನು ಆರಾಧಿಸಬೇಕಾ ಇಲ್ಲವೇ ಆತ್ಮನನ್ನು ಆರಾಧಿಸಬೇಕಾ?**

**ಉತ್ತರ :–** ಈ ವಿಷಯದಲ್ಲಿ ಬಹಳಜನ ತಿಳಿಯದೇ ಗೊಂದಲಪಡುತ್ತಿದ್ದಾರೆ. ಆದರೇ ದೇವರು ತನ್ನ ಗ್ರಂಥವಾದ ಅಂತಿಮ ದೈವಗ್ರಂಥದಲ್ಲಿ **"ಆತ್ಮನನ್ನು ಆರಾಧಿಸಿರೆಂದು, ನನಗೆ ಭಯಪಡಿರೆಂದು"** ಹೇಳಿದ್ದಾನೆ. ಅದರಿಂದ ಭಕ್ತಿ ಆತ್ಮ ಮೇಲೆ, ಭಯ ಪರಮಾತ್ಮನ ಮೇಲೆ ಹೊಂದಿರಬೇಕೆಂದು ತಿಳಿಯುತ್ತಿದೆ. ಅದೇ ವಿಷಯವನ್ನೇ ಉಳಿದ ಎರಡು ಗ್ರಂಥಗಳಲ್ಲಿ ಕೂಡಾ ಹೇಳಿದ್ದಾರೆ. ದ್ವಿತೀಯ ದೈವಗ್ರಂಥದಲ್ಲಿ **"ಕುಮಾರನನ್ನು ಘನಪಡಿಸಿದವನು ತಂದೆಯನ್ನು ಘನಪಡಿಸಿ ದಂತೆಯೇ ಎಂದು"** ಹೇಳಿದ್ದಾರೆ. ಯಾರನ್ನು ಆರಾಧಿಸಬೇಕೆನ್ನುವ ವಿಷಯವನ್ನು ದೈವಗ್ರಂಥಗಳಲ್ಲಿ ಹೇಳಿದ್ದರೂ, ಮನುಷ್ಯರು ಮಾತ್ರ ದೈವಗ್ರಂಥಗಳಲ್ಲಿ ದೇವರು ಹೇಳಿದಂತೆ ಆಚರಿಸದೆ, ತಮ್ಮ ಸ್ವಂತ ನಿರ್ಣಯದಿಂದ ಮುಂದಕ್ಕೆ ಹೋಗುತ್ತಿದ್ದಾರೆ. ತಾವು ಮಾಡುವ ಪ್ರಾರ್ಥನೆ ಯಾರಿಗೆ ಸೇರುತ್ತದೋ ಕೂಡಾ ತಿಳಿಯದೇ ತಾವು ಮಾಡುವುದೇ ನಿಜವಾದ ಮಾರ್ಗ ಅಂದುಕೊಳ್ಳುತ್ತಿದ್ದಾರೆ. ವಾಸ್ತವವಾಗಿ ಹೇಳಿದರೇ ಮೂರು ಮತಗಳವರು ದೇವರು ಹೇಳಿದಂತೆ ಆರಾಧಿಸುತ್ತಿಲ್ಲ. ಅಷ್ಟೇ ಅಲ್ಲದೇ ಆತ್ಮವೇ ತಮಗೆ ದೇವರೆಂದು ಭಾವಿಸದೆ ನೇರವಾಗಿ ಪರಮಾತ್ಮ ನನ್ನೇ ಆರಾಧಿಸುತ್ತಿದ್ದಾರೆ. ವಾಸ್ತವಕ್ಕೆ ಆತ್ಮ ದೇವರೆಂದೂ, ಆತ್ಮನನ್ನೇ ಆರಾಧಿ ಸಬೇಕೆಂದು ತಿಳಿಯದವರು ಇದ್ದಾರೆ. ಆತ್ಮ ತಮಗೆ ಆರಾಧಿಸಲ್ಪಡುವ ದೇವರಾಗಿರುವಾಗ, ಪರಮಾತ್ಮನನ್ನು ಆರಾಧಿಸಬಾರದೆಂದೂ, ಪರಮಾತ್ಮ ಆರಾಧಿಸಲ್ಪಡುವ ದೇವರಲ್ಲವೆಂದು, ಆತ್ಮನನ್ನೇ ಆರಾಧಿಸಬೇಕೆಂದು ತಿಳಿಯ ದವರು ಮೂರು ಮತಗಳಲ್ಲಿ ಇದ್ದಾರೆ. ಮನುಷ್ಯನ ಭಕ್ತಿ ಎಲ್ಲವೂ ಆತ್ಮಕ್ಕೇ ಸೇರಬೇಕಾಗಿದೆ. ಪರಮಾತ್ಮ ಸಾಕ್ಷಿ ಭೂತನಾಗಿ ಇದ್ದಾನೆ ಹೊರತು ಆರಾಧನೆ ಸ್ವೀಕರಿಸುವವನಾಗಿ ಇಲ್ಲ.

ಮನುಷ್ಯ ಭೂಮಿಮೇಲೆ ಹುಟ್ಟಿದಾಗಿನಿಂದ ಹಸಿವಾದರೇ ಹಾಲಿಗಾಗಿ ಅಳಲನ್ನು ಪ್ರಾರಂಭಿಸಿ, ದೊಡ್ಡವನಾದ ಬಳಿಕ ಬದುಕುವುದಕ್ಕೆ ಧನಕ್ಕಾಗಿ ಪರದಾಡುತ್ತಿದ್ದಾನೆ. ಮುಂಬರುವ ಕಾಲದಲ್ಲಿ ಸಾಯುತ್ತೀನೋ, ಬದುಕುತ್ತೀನೋ ಎಂದು ತಿಳಿಯದೆ ಹೋದರೂ ಬದುಕುತ್ತೇನೆ ಎನ್ನುವ ನಂಬಿಕೆಯಿಂದಲೇ ಪ್ರಪಂಚ ಮಾರ್ಗದಲ್ಲಿ ಹೋಗುತ್ತಲೇ ಇದ್ದಾನೆ ಹೊರತು ದೈವಮಾರ್ಗವನ್ನು ಕುರಿತು ಆಲೋಚಿಸುತ್ತಿಲ್ಲ. 'ನಾಲ್ವರೊಂದಿಗೆ ನಾರಾಯಣ' ಎಂದಂತೆ ಭಕ್ತಿ ಇಲ್ಲವೆನ್ನದಂತೆ ವರ್ಷಕ್ಕೆ ಒಂದುಬಾರಿಯೋ ಎರಡುಬಾರಿಯೋ ಗುಡಿಗೆ ಹೋಗಿಯೋ ಇಲ್ಲವೇ ತೀರ್ಥಯಾತ್ರೆಗಳನ್ನು ಮಾಡಿಯೋ ನಾನೂ ಭಕ್ತಿ ಇರುವವನೇ ಎಂದು ಹೇಳಿಕೊಳ್ಳುತ್ತಿದ್ದಾನೆ. ಈ ವಿಧವಾಗಿ ದೈವಮಾರ್ಗದಲ್ಲಿ ದಾರಿ ತಪ್ಪಿ ನಡೆಯುತ್ತಿದ್ದರೂ ಎಲ್ಲರೂ ತಮಗೆ ತಾವು ಜ್ಞಾನಿಗಳೇಯೆಂದು ಕೊಳ್ಳುವುದು ನಡೆಯುತ್ತಿದೆ. ದೈವಮಾರ್ಗದಲ್ಲಿ ದಾರಿ ತಪ್ಪಿದ ಸಮಾಜಕ್ಕೆ ಧರ್ಮಗಳನ್ನು ತಿಳಿಸಿ ಸಕ್ರಮಮಾರ್ಗದಲ್ಲಿ ನಡೆಯುವಂತೆ ಮಾಡುವುದಕ್ಕೆ, ದೇವರು ಭೂಮಿಮೇಲಕ್ಕೆ ಮನುಷ್ಯನಹಾಗೆ ಬಂದು, ತನ್ನ ಜ್ಞಾನವನ್ನು ತಾನೇ ಸ್ವತಃವಾಗಿ ತಿಳಿಸಬೇಕಾಗಿದೆ. ಅದೇ ವಿಧವಾಗಿ ಗತದಲ್ಲಿ ದೇವರು ಮನುಷ್ಯನಹಾಗೆ ಬರುವುದು, ದೈವ ಧರ್ಮಗಳು ತಿಳಿಸಿ ಹೋಗುವುದು ನಡೆದಿದೆ. ಎಂದಾದರೇ ಭೂಮಿಮೇಲೆ ಮನುಷ್ಯರಲ್ಲಿ ದೈವಜ್ಞಾನವು ಇಲ್ಲದೇ ಹೋಗುತ್ತಿದೆಯೋ, ಎಂದಾದರೇ ಧರ್ಮಗಳು ತಿಳಿಯದೇ ಹೋಗಿ ಅಧರ್ಮ ಕಾರ್ಯಗಳು ಹೆಚ್ಚಾಗುತ್ತವೋ ಆಗ ದೇವರು ತನ್ನ ಧರ್ಮಗಳನ್ನು ತಿಳಿಸುವ ನಿಮಿತ್ತ ಮನುಷ್ಯರ ಮಧ್ಯದೊಳಗೆ ಮನುಷ್ಯನ ಹಾಗೆ ಬರಬೇಕಾಗಿರುತ್ತದೆ. ಆದರೇ ಗತದಲ್ಲಿ ಎಷ್ಟೋಬಾರಿ ಬಂದು ತನ್ನ ಜ್ಞಾನವನ್ನು ಹೇಳಿಹೋದಂತೆ ಕೆಲವು ಆಧಾರಗಳಿಂದ ತಿಳಿಯುತ್ತಿದೆ.

ದೇವರು ಭೂಮಿ ಮೇಲೆ ಮನುಷ್ಯನಹಾಗೆ ಅವತರಿಸಿ ಬಂದರೇ ಆತನನ್ನು ಯಾರೂ ಗುರುತಿಸಲಾರರು. ಯಾರೂ ಗುರುತಿಸದಂತೆ ಭೂಮಿಮೇಲೆ ಮನುಷ್ಯನ ರೂಪದಲ್ಲಿ ನಟಿಸಿ ಹೋಗುತ್ತಾನೆ. ದೇವರು ಮನುಷ್ಯನಹಾಗೆ

ಬಂದರೇ ಜ್ಞಾನಿಗಳು ಸಹಿತ ಆತನನ್ನು ಗುರುತಿಸಲಾರರು. ಹಾಗಿರುವಾಗ ಅಜ್ಞಾನಿಗಳಾದವರಿಗೆ ದೇವರ ಅವತಾರದ ವಿಷಯ ಏನೂ ತಿಳಿಯದೆಂದೇ ಹೇಳಬಹುದು. ದೇವರು ಎಷ್ಟುಬಾರಿ ಭೂಮಿಮೇಲೆ ಮನುಷ್ಯನಾಗಿ ಬಂದಿದ್ದಾನೋ ಹೇಳಲಾಗುವುದಿಲ್ಲ ಆದರೇ, ಕೆಲವುಬಾರಿ ಬಂದು ಹೋಗಿದ್ದಾ ನೆಂದು ಹೇಳುವುದಕ್ಕೆ ಸ್ವಲ್ಪ ಆಧಾರವಿದೆ. ಕಳೆದ ನಾಲ್ಕು ಯುಗಗಳಲ್ಲಿ ಮೊದಲ ಯುಗವಾದ ಕೃತಯುಗದಲ್ಲಿ ಆಕಾಶದ ಮೂಲಕ ಸೂರ್ಯನಿಗೆ "ಜಪರ" ಜ್ಞಾನವನ್ನು ಹೇಳಿರುವಾಗ, ಸೂರ್ಯನು ಸ್ವಲ್ಪ ಕಾಲಕ್ಕೆ ಭೂಮಿಮೇಲೆ 'ಮನುವು' ಎಂಬ ವ್ಯಕ್ತಿಗೆ ಹೇಳಿರುವಾಗ! ಮನುವು ಮುಖಾಂತರ ಮತ್ತೊಬ್ಬರಿಗೆ, ಆತನ ಮುಖಾಂತರ ಇನ್ನೊಬ್ಬರಿಗೆ ಜ್ಞಾನವು ತಿಳಿಯುತ್ತಾ ಹೋಗುತ್ತಿರುವಾಗ, ಕೆಲವು ಸಾವಿರ ವರ್ಷಗಳಿಗೆ ಭೂಮಿಮೇಲೆಲ್ಲಾ ಜ್ಞಾನವು ವ್ಯಾಪಿಸಿದೆ. ಯಾವ ವಿಧವಾಗಿ ಜ್ಞಾನವು ಹಂತಹಂತವಾಗಿ ಹರಡಿದೆಯೋ ಹಾಗೆಯೇ ಕೆಲವು ಸಾವಿರ ವರ್ಷಗಳಿಗೆ ಜ್ಞಾನವು ಹಂತಹಂತವಾಗಿ ಇಲ್ಲದೇ ಹೋಗಿದೆ. ಹಾಗೆ ಎಲ್ಲಾ ದೇಶಗಳಲ್ಲಿ ದೈವಜ್ಞಾನವು ಇಲ್ಲದೇ ಹೋದರೂ, ಭಾರತ ದೇಶದಲ್ಲಿ ಮಾತ್ರ ಎಲ್ಲಾ ದೇಶಗಳ ಹಾಗೆ ಅಜ್ಞಾನವು ವ್ಯಾಪಿಸದೆ ಸಂಪೂರ್ಣ ಜ್ಞಾನವನ್ನು ಹೊಂದಿತ್ತು. ಆದ್ದರಿಂದ ಭಾರತ ದೇಶಕ್ಕೆ ಕೃತಯುಗದಲ್ಲಿ 'ಜ್ಞಾನಿಗಳ ದೇಶ' ಎಂದು ಹೆಸರು ಬಂದಿದೆ. ಜ್ಞಾನಿಗಳ ದೇಶವೆಂದು ಹೇಳುವುದಕ್ಕೆ 'ಇಂದೂಗಳ ದೇಶ' ಎಂದು ಹೇಳುತ್ತಿದ್ದರು. ಹಾಗೆಯೇ ಸ್ವಲ್ಪ ಕಾಲಕ್ಕೆ ಇಂದೂಗಳ ದೇಶ ಎನ್ನದೇ 'ಇಂದೂ ದೇಶ' ಎಂದು ಕರೆಯುವುದಕ್ಕೆ ಅಭ್ಯಾಸವಾಗಿದ್ದಾರೆ. ಹಾಗೆ ಕೃತಯುಗದಲ್ಲಿ ಬಂದಿರುವ ಹೆಸರು ಈಗ ಕಲಿಯುಗದವರೆಗು ಇಂದೂ ದೇಶವೆಂದು ಕರೆಯುತ್ತಿದ್ದರೂ ಈ ಮಧ್ಯ ಕಾಲದಲ್ಲಿ ಸುಮಾರು 150 ವರ್ಷಗಳ ಹಿಂದೆ **'ಇಂದೂ'** ಎಂಬ ಪದವು **'ಹಿಂದೂ'** ಎಂಬ ಪದವಾಗಿ ಬದಲಾಗಿ ಹೋಗಿದೆ. ಪ್ರಸ್ತುತ ಈಗ ಹಿಂದೂ ದೇಶವಾಗಿ ಕರೆಯಲ್ಪಡುತ್ತಿದೆ. ಗತಚರಿತ್ರೆಯನ್ನು ತಿಳಿಯದವರು ಅದೇ ನಿಜವಾದ ಹೆಸರಾಗಿ ಹೇಳುತ್ತಾ ತಮ್ಮನ್ನು ತಾವು ಹಿಂದುಗಳಾಗಿ ಪರಿಚಯ ಮಾಡಿಕೊಳ್ಳುತ್ತಿದ್ದಾರೆ.

ಗತದಲ್ಲಿ ಎರಡು ಸಾವಿರ ವರ್ಷಗಳ ಪೂರ್ವದ ವರೆಗು ಭಾರತ ದೇಶದಲ್ಲಿ ಇಂದೂ ಸಮಾಜವು ಇತ್ತು. ಅಲ್ಲೀತನಕ ಭಾರತೀಯರೆಲ್ಲರೂ ಇಂದೂಗಳಾಗಿ ಕರೆಯಲ್ಪಡುತ್ತಿದ್ದರು. ಎರಡುಸಾವಿರ ವರ್ಷಗಳ ಸಮಯದಲ್ಲಿ ಮೊದಲು ಕ್ರೈಸ್ಥ ಮತವು ತಯಾರಾಗಿರುವಾಗ, ಅಲ್ಲೇತನಕ ಮತಪ್ರಸ್ತಾಪ ಇಲ್ಲದೇ ಇದ್ದ ಇಂದೂ ಸಮಾಜವು ಇಂದೂಮತವಾಗಿ ಕರೆಯಲ್ಪಟ್ಟಿತ್ತು. ಅದೇ ಈ ದಿನ ಹಿಂದೂಮತವಾಗಿ ನಿಂತಿದೆ. ಗತದಲ್ಲಿ ಇಲ್ಲದ ಮತಗಳು ಈದಿನ ಬೆಳೆದುಹೋಗಿ ಇಂದಿಗೂ ಭೂಮಿಮೇಲೆ ಹನ್ನೆರಡು ಮತಗಳಾಗಿ ಏರ್ಪಟ್ಟಿರುವಾಗ ಅದರಲ್ಲಿ ಹಿಂದೂ, ಇಸ್ಲಾಮ್, ಕ್ರೈಸ್ಥ ಮತಗಳು ಮೂರು ಮುಖ್ಯವಾದವು. ಈದಿನ ಭೂಮಿಮೇಲೆ ದೊಡ್ಡ ಮತಗಳಾಗಿ ಇರುವವು ಕೂಡಾ ಈ ಮೂರು ಮತಗಳೇ. ಈ ಮೂರು ಮತಗಳಲ್ಲಿಯೇ ದೈವಜ್ಞಾನವು ಮೂರು ದೈವಗ್ರಂಥಗಳಾಗಿ ಹೇಳಲಾಗಿದೆ. ಭೂಮಿಮೇಲೆ ಪ್ರಜೆಗಳ ಮಧ್ಯದಲ್ಲಿ ದೈವಧರ್ಮಗಳು ಮೂರು ದೈವಗ್ರಂಥಗಳ ರೂಪದಲ್ಲಿ ಇದ್ದರೂ ಪ್ರಜೆಗಳು ಮಾತ್ರ ದೈವಜ್ಞಾನವನ್ನು ಸಂಪೂರ್ಣವಾಗಿ ತಿಳಿಯಲಾರದೇ ಇದ್ದಾರೆ.

ಈ ದಿನ ಮೂರು ದೈವ ಗ್ರಂಥಗಳನ್ನು ಮೂರು ಮತಗಳವರು ಹಂಚಿಕೊಂಡಹಾಗೆ ಭಗವದ್ಗೀತೆ ಹಿಂದೂಗಳದ್ದೆಂದು ಎಂದೂ, ಬೈಬಲ್ ಕ್ರೈಸ್ಥವರದ್ದೆಂದೂ, ಖುರ್ಆನ್ ಗ್ರಂಥವು ಮುಸ್ಲೀಮ್‌ರವರದ್ದೆಂದು ಹೇಳಿ ಕೊಳ್ಳುತ್ತಿದ್ದಾರೆ. ಈ ದಿನ ಯಾರು ಹೇಗೆ ಹೇಳಿಕೊಂಡರೂ ನಮಗೆ ತಿಳಿದಿರುವವರೆಗು ಮೂರು ದೈವಗ್ರಂಥಗಳಲ್ಲಿನ ಜ್ಞಾನವು ಒಂದೇ ಎಂದು ಹೇಳಬಹುದು. ಮೊದಲು ಹುಟ್ಟಿರುವುದನ್ನು ಪ್ರಥಮ ದೈವಗ್ರಂಥವೆಂದೂ, ನಂತರ ಹುಟ್ಟಿರುವ ಗ್ರಂಥವನ್ನು ದ್ವಿತೀಯ ದೈವಗ್ರಂಥವೆಂದೂ, ಆ ನಂತರ ಕೊನೆಯದಾಗಿ ಹುಟ್ಟಿರುವುದನ್ನು ಅಂತಿಮ ದೈವಗ್ರಂಥವೆಂದೂ ಹೇಳುತ್ತಿದ್ದಾರೆ. ಆದರೇ ಮೊದಲು ಹುಟ್ಟಿರುವ ಪ್ರಥಮ ದೈವಗ್ರಂಥದಲ್ಲಿನ ಜ್ಞಾನವೇ ಉಳಿದ ಎರಡು ಗ್ರಂಥಗಳಲ್ಲಿ ಇದೆ. ಭಗವದ್ಗೀತೆ ಪ್ರಥಮ ದೈವಗ್ರಂಥವಾಗಿರುವಾಗ ಭಗವದ್ಗೀತೆಯಲ್ಲಿನ ವಿಷಯಗಳೇ ಉಳಿದ ಎರಡು ಗ್ರಂಥಗಳಲ್ಲಿ ಇವೆಯೆಂದು

ಅಂತಿಮ ದೈವಗ್ರಂಥ ಖುರ್‌ಆನ್‌ನಲ್ಲಿ ಸೂರಾ ಐದು(5) ರಲ್ಲಿ 44, 46, 48, 68 ಆಯತ್‌ಗಳು ಸಾಕ್ಷಿ ಕೊಡುತ್ತಿವೆ. ಮೊದಲು ತಯಾರಾದ ಭಗವದ್ಗೀತೆಯಲ್ಲಿನ ಜ್ಞಾನವನ್ನು ಶ್ರೀಕೃಷ್ಣನು ದ್ವಾಪರ ಯುಗದ ಕೊನೆಯಲ್ಲಿ ಹೇಳಿದ್ದಾನೆ. ದ್ವಾಪರ ಯುಗದಲ್ಲಿ ಹೇಳಿರುವ ಭಗವದ್ಗೀತೆಯಲ್ಲಿನ ಜ್ಞಾನವಿಷಯಗಳಿಗೆ ಸೂರ್ಯನಿಗೆ ಆಕಾಶವಾಣಿ ಹೇಳಿರುವ 'ಜಪರ' ಜ್ಞಾನವೇ ಆಧಾರ. ಆಕಾಶವಾಣಿ ಮೊದಲು ಸೂರ್ಯನಿಗೆ ಹೇಳಿರುವ 'ಜಪರ' ಎನ್ನುವ ಜ್ಞಾನವೇ ಕೃಷ್ಣನ ಮೂಲಕ ಹೇಳಲ್ಪಟ್ಟು ಗ್ರಂಥರೂಪವಾಗಿದೆ. ಅದೇ ಜ್ಞಾನವೇ ಬೈಬಲ್, ಖುರ್‌ಆನ್‌ಗಳಾಗಿ ತಯಾರಾಗಿದೆ. ಯೇಸು ಹೇಳಿರುವ ಜ್ಞಾನವು ಬೈಬಲ್ ಆಗಿದ್ದರೇ, ಜಿಬ್ರಯೇಲ್ ಎನ್ನುವ ಆಕಾಶ ಗ್ರಹವು (ಸೂರ್ಯನು) ಹೇಳಿರುವ ಜ್ಞಾನವು ಖುರ್‌ಆನ್‌ಆಗಿ ತಯಾರಾಗಿದೆ. ಇದನ್ನನುಸರಿಸಿ ಒಂದೇ ದೇವರ ಜ್ಞಾನವೇ ಮೂರು ಗ್ರಂಥಗಳಾಗಿ ಹೇಳಲ್ಪಟ್ಟಿದೆಯೆಂದು ತಿಳಿಯುತ್ತಿದೆ. ದೈವಜ್ಞಾನವು ಗ್ರಂಥರೂಪವಾಗಿ ಇಲ್ಲದ ಕಾಲದಲ್ಲಿ ಮೊಟ್ಟಮೊದಲು ದೇವರು ಮನುಷ್ಯನಾಗಿ ತ್ರೇತಾಯುಗದಲ್ಲಿ ಬಂದು ದೈವಧರ್ಮಗಳನ್ನು ತಿಳಿಸಿದ್ದಾನೆ. ದೇವರು ಮನುಷ್ಯನಾಗಿ ಬಂದರೇ ಆತನನ್ನು ದೇವರು ಎನ್ನಬಾರದು. 'ಭಗವಂತನು' ಎಂದು ಹೇಳಬೇಕೆಂದು ಮೊದಲೇ ತಿಳಿದುಕೊಂಡಿದ್ದೇವೆ.

ಭೂಮಿಮೇಲೆ ದೇವರು ಮೊಟ್ಟಮೊದಲನೆಯದಾಗಿ ಮನುಷ್ಯನಾಗಿ ಅಂದರೇ ಭಗವಂತನಾಗಿ ಬಂದಿರುವುದು ತ್ರೇತಾಯುಗದಲ್ಲಿಯೇ ಎಂದು ಹೇಳಬಹುದು. ಪ್ರಪ್ರಥಮವಾಗಿ ಬಂದ ಭಗವಂತನಿಗೆ ಒಂದು ಪ್ರತ್ಯೇಕತೆ ಇದೆ. ಆತನು ಮೊಟ್ಟಮೊದಲು ಬಂದಿರುವ ಭಗವಂತನು ಎಂದು ಹೇಳುವುದಕ್ಕೆ ಆ ಪ್ರತ್ಯೇಕತೆಯೇ ಆಧಾರವೆಂದು ಹೇಳಬಹುದು. ಹಾಗೆಯೇ ನಂತರ ಎಷ್ಟುಬಾರಿ ದೇವರು ಭಗವಂತನಾಗಿ ಬಂದರೂ ಅವರು ಮೊದಲ ಭಗವಂತನ ನಂತರ ಬಂದಿರುವ ಭಗವಂತರೆಂದು ತಿಳಿಯುವುದಕ್ಕೆ ಕೂಡಾ ಪ್ರತ್ಯೇಕವಾದ ಗುರುತು ಇದೆ. ದೇವರು ಮನುಷ್ಯನಾಗಿ ಬರುವುದರಿಂದ ಆತನಿಗೆ ಮನುಷ್ಯರಿಗಿರುವ ಹಾಗೆಯೇ ಹೆಸರು ಇರುತ್ತದೆ. ಉದಾಹರಣೆಗೆ ಕೃಷ್ಣನು ಭಗವಂತನಾಗಿ

ಬಂದಿದ್ದಾನೆ ಆದಕಾರಣ ಆತನಿಗೆ 'ಕೃಷ್ಣಾ' ಎಂಬ ಹೆಸರು ಇಡಲಾಗಿದೆ. ದೇವರು ಮನುಷ್ಯನಾಗಿ ಮೊದಲು ಬಂದಾಗ ಆತನಿಗು ಕೂಡಾ ಹೆಸರು ಇರುವುದು ಸಹಜವೇ. ಆದರೇ ಆತನ ಹೆಸರಿನ ಮೊದಲು ಭಗವಾನ್ ಎಂದು ಹೇಳಲಾಗಿದೆ. ನಂತರ ಬಂದಿರುವ ಭಗವಂತನ ಹೆಸರಿನ ನಂತರ ಭಗವಾನ್ ಎಂದು ಹೇಳಲಾಗಿದೆ. ಗತ ಚರಿತ್ರೆಯನ್ನು ಗಮನಿಸಿದರೇ ತ್ರೇತಾಯುಗದಲ್ಲಿ ಮೊಟ್ಟಮೊದಲು ಬಂದ ದೇವರ ಅವತಾರದ ಹೆಸರಿನ ಮೊದಲು 'ಭಗವಾನ್' ಎಂದು ಹೇಳಲಾಗಿದೆ. ನಂತರ ದ್ವಾಪರ ಯುಗದಲ್ಲಿ ಬಂದ ದೇವರ ಅವತಾರಕ್ಕೆ ಹೆಸರಿನ ಕೊನೆಯಲ್ಲಿ ಅಂದರೇ ಹೆಸರಿನ ನಂತರ ಭಗವಾನ್ ಎಂದು ಹೇಳಿದ್ದಾರೆ. ಭಗವಾನ್ ಎಂದು ಮನುಷ್ಯನಾಗಿ ಇರುವ ದೇವರನ್ನು ತಿಳಿಯುವುದೇ ಬಹಳಕಷ್ಟ. ಭಗವಂತನನ್ನು ತಿಳಿಯುವುದೇ ದುಸ್ಸಾಧ್ಯವಾದ ಕೆಲಸವಾಗಿರುವಾಗ ಅವರು ಮೊದಲನೆಯವರಾ, ನಂತರದವರಾ ಎಂದು ನಿರ್ಣಯಿಸಿ ಹೇಳುವುದು ಬಹಳಬಹಳ ಕಷ್ಟ. ದೇವರು ಭಗವಂತನಾಗಿ ಇರುವಾಗ ಆತನನ್ನು ಕಂಡುಕೊಳ್ಳಲಾರೆವೆಂದು ತಿಳಿದುಹೋಗಿದೆ. ಆದರೇ ದೇವರು ಮನುಷ್ಯನಾಗಿ ಭೂಮಿಮೇಲಕ್ಕೆ ಬಂದು ಹೋದ ನಂತರ ಆತನನ್ನು ಜ್ಞಾನ ಸಂಪನ್ನರಾದವರು ತಿಳಿದಿದ್ದಾರೆ. ಕೆಲವು ಕೋಟಿಗಳ ಜನಸಂಖ್ಯೆಯಲ್ಲಿ ಅಪರೂಪವಾಗಿ ಸಂಪೂರ್ಣ ಜ್ಞಾನಿಗಳಾದವರು ಗತದಲ್ಲಿ ಬಂದಿರುವವನು ಭಗವಂತನು ಎಂದು ನಿರ್ಣಯಿಸಿ ಹೇಳುತ್ತಿದ್ದಾರೆ.

ಹಾಗೆ ಸಂಪೂರ್ಣ ಜ್ಞಾನಧನಿಕರಾದವರು ದ್ವಾಪರ ಯುಗದಲ್ಲಿ ಕೃಷ್ಣನನ್ನು ಕಂಡುಕೊಂಡಿದ್ದಾರೆ. ಆ ದಿನ ಆತನು ಇರುವಾಗ ಕೃಷ್ಣನು ಇಂಥವನು ಎಂದು ತಿಳಿಯದಿದ್ದರೂ, ಆತನು ಹೋದ ನಂತರ ಕೃಷ್ಣನು ಸಾಧಾರಣ ಮನುಷ್ಯನಲ್ಲ ಎಂದು ಆತನು ಭಗವಂತನೆಂದು ಈ ದಿನ ಹೇಳಿಕೊಳ್ಳುತ್ತಿದ್ದಾರೆ. ಅದೂ ಜ್ಞಾನದಲ್ಲಿ ಪೂರ್ತಿ ಸಂಪನ್ನರಾದವರು ಹೇಳುತ್ತಿದ್ದಾರೆ ಹೊರತು ಉಳಿದ ಪ್ರಜೆಗಳು ಯಾರೂ ಹೇಳುತ್ತಿಲ್ಲ. ಈ ದಿನ ಅಜ್ಞಾನಿಗಳಾದ ಪ್ರಜೆಗಳು ಕೃಷ್ಣನನ್ನು ಸಾಧಾರಣ ಮನುಷ್ಯನಾಗಿ ಲೆಕ್ಕಿಸುತ್ತಾ ಆತನು ಜಾರನು, ಚೋರನೆಂದು

ಹೇಳುತ್ತಿದ್ದಾರೆ. ದೇವರು ಭಗವಂತನಾಗಿ ಮನುಷ್ಯನ ಶರೀರವನ್ನು ಧರಿಸಿ ಬಂದಾಗ ಆತನು ಸರ್ವಸಾಧಾರಣ ಮನುಷ್ಯನಾಗಿಯೇ ಪ್ರಜೆಗಳ ಮಧ್ಯದಲ್ಲಿ ಕಾಲವನ್ನು ಕಳೆಯುತ್ತಾನೆ. ಕೃಷ್ಣನು ಹಾಗೆಯೇ ಇರುತ್ತಾ ತನ್ನ ಜೀವನದಲ್ಲಿ ಕೇವಲ ಒಂದು ಸಂದರ್ಭದಲ್ಲಿ ಸಂಪೂರ್ಣವಾದ ಜ್ಞಾನವನ್ನು ಭಗವದ್ಗೀತೆಯಾಗಿ ಹೇಳಿದ್ದಾನೆ. ಒಂದು ದಿನ ಅದೂ ಕೆಲವು ನಿಮಿಷಗಳು ಮಾತ್ರವೇ ಜ್ಞಾನವನ್ನು ಹೇಳಿ, ಉಳಿದ 126 ವರ್ಷಗಳು ಸಾಧಾರಣ ಮನುಷ್ಯನಾಗಿಯೇ ಜಾರ, ಚೋರ ಕೆಲಸಗಳು ಎಲ್ಲರಿಗೂ ತಿಳಿಯುವಂತೆ, ತನ್ನನ್ನು ಭಗವಂತನಾಗಿ ಯಾರೂ ಗುರುತಿಸದಹಾಗೆ ಪ್ರವರ್ತಿಸಿ ಹೋಗಿದ್ದಾನೆ. ಅದರಿಂದ ಯಾರೂ ಆತನನ್ನು ಗುರುತಿಸುವುದಕ್ಕೆ ಅವಕಾಶವಿಲ್ಲದೇ ಹೋಗಿದೆ. ಜ್ಞಾನಿಗಳು ಸಹಿತ ಕೃಷ್ಣನನ್ನು ಗುರುತಿಸಲಾರದೇ ಹೋಗಿದ್ದಾರೆ. ಕೃಷ್ಣನು ಭೂಮಿಮೇಲೆ ಇದ್ದ ಸಮಯದಲ್ಲಿ ಕೃಷ್ಣನನ್ನು ಗುರುತಿಸಲಾರದೇ ಹೋದರೂ ಈ ದಿನ ನಮ್ಮ ದೃಷ್ಠಿಯಲ್ಲಿ ಕೃಷ್ಣನು ದೇವರ ಅವತಾರವಾದ ಭಗವಂತನಾಗಿ ತಿಳಿಯಲ್ಪಟ್ಟಿದ್ದಾನೆ. ನನಗೆ ತಿಳಿಯುವ ಮೊದಲು ಜ್ಞಾನ ಸಂಪನ್ನರಾದವರಿಗೆ ತಿಳಿಯುವುದರಿಂದ ಅವರು ಮೊದಲೇ ಕೃಷ್ಣನನ್ನು ಭಗವಾನ್ ಎಂಬ ಹೆಸರಿನಿಂದ ಕರೆಯುತ್ತಾ **"ಶ್ರೀಕೃಷ್ಣ ಭಗವಾನ್"** ಎಂದು ಕರೆದಿದ್ದಾರೆ.

ಕೃಷ್ಣನ ಹೆಸರಿನ ನಂತರ ಭಗವಾನ್ ಎಂದು ಹೇಳಲ್ಪಟ್ಟಿರುವುದರಿಂದ ಆತನಿಗಿಂತಲೂ ಮೊದಲು ಬಂದಿರುವ ಭಗವಂತನು ಇನ್ನೊಬ್ಬರು ಇದ್ದಾರೆ. ಮೊಟ್ಟಮೊದಲು ಬಂದಿರುವ ಭಗವಂತನ ನಂತರ ಬಂದಿರುವ ಭಗವಂತನು ಕೃಷ್ಣನಾಗಿರುವುದರಿಂದ ಆತನ ಹೆಸರಿನ ಹಿಂದೆ ಭಗವಾನ್ ಎಂದು ಇರುವಂತೆ ತಿಳಿಯುತ್ತಿದೆ. ಮೊದಲು ಬಂದಿರುವ ಭಗವಂತನು ಯಾರು? ಎಂಬ ಪ್ರಶ್ನೆ ಇದರಿಂದ ಬರುತ್ತಿದೆ. ಮೊದಲ ಭಗವಂತನನ್ನು ಕುರಿತು ತಿಳಿಯುವುದಕ್ಕಿಂತ ಮೊದಲು ದ್ವಾಪರಯುಗದಲ್ಲಿ ಬಂದಿರುವ ಭಗವಂತನನ್ನು ಅಂದರೇ ಕೃಷ್ಣನನ್ನು ಕುರಿತು ಸ್ವಲ್ಪ ತಿಳಿದುಕೊಳ್ಳೋಣ. ಕೃಷ್ಣನು ತನ್ನ ಜೀವನದಲ್ಲಿ ಒಂದುಬಾರಿಯೇ ಆತ್ಮ ಜ್ಞಾನವನ್ನು ಹೇಳಿದರೂ, ತನ್ನನ್ನು ಕುರಿತು "ನಾನು ದೇವರು" ಎಂದು

ತನ್ನ ಬೋಧನೆಯಲ್ಲಿ ಪ್ರಕಟಿಸಿಕೊಂಡಿದ್ದಾನೆ. ತನ್ನನ್ನೇ ಮುಗಿಯಿರೆಂದು ಕೂಡಾ ಹೇಳಿದ್ದಾನೆ. ಭಗವದ್ಗೀತೆ ಬೋಧನೆಯಲ್ಲಿ "ನಾನು ಸರ್ವಜೀವರಾಶಿಗಳಿಗೆ ದೇವರಾಗಿ ಕೂಡಾ ಮಾನವ ಅವತಾರದಲ್ಲಿ ಮನುಷ್ಯರ ಮಧ್ಯದೊಳಗೆ ಬಂದಿದ್ದೇನೆ. ಆದರೂ ಮೂರ್ಖರಾದ ಮನುಷ್ಯರು ಮೂಢರಾಗಿ ನನ್ನನ್ನು ಅವಮಾನಿಸುತ್ತಿದ್ದಾರೆ" ಎಂದು ಕೂಡಾ ಹೇಳಿದ್ದಾನೆ. ಈ ವಿಧವಾಗಿ ತನ್ನಲ್ಲಿನ ದೈವತ್ವವನ್ನು ಗುರುತಿಸಬೇಕೆಂಬ ಉದ್ದೇಶದಿಂದ ಕೃಷ್ಣನು ನಾನೇ ದೇವರೆಂದು ಪ್ರಕಟಿಸಿಕೊಂಡರೂ ಅಜ್ಞಾನಿಗಳು ಗುರುತಿಸಲಾರದೇ ಹೋಗಿದ್ದಾರೆ. ತಾವು ಗುರುತಿಸಲಾರದೇ ಹೋದರೂ ಗುರುತಿಸಿದ ಜ್ಞಾನಿಗಳು ಈತನೇ ಭಗವಂತನು ಎಂದು ಹೇಳಿದರೂ ಕೇಳದ ಮನುಷ್ಯರು ಕೃಷ್ಣನು ಮೋಸಗಾರನು, ಮಾಯಗಾರನು, ಜಾರತ್ವ ಹೊಂದಿರುವವನು, ಚೋರತ್ವವನ್ನು ಹೊಂದಿರುವವನು ಎಂದು ಹೇಳುತ್ತಿರುತ್ತಾರೆ. ಕೃಷ್ಣನು ಭಗವಂತನಾದರೂ ಪ್ರಜೆಗಳು ಮಾತ್ರ ಆತನನ್ನು ಸಾಧಾರಣ ಮನುಷ್ಯನಾಗಿಯೇ ಲೆಕ್ಕಿಸುತ್ತಿದ್ದಾರೆ ಹೊರತು ಇತರವಾಗಿ ನೋಡುತ್ತಿಲ್ಲ. ಕೃಷ್ಣನೇ ತ್ರೇತಾಯುಗದಲ್ಲಿ ರಾಮನಾಗಿ ಹುಟ್ಟಿದ್ದಾನೆಂದು ಬಹಳಜನ ಸ್ವಾಮೀಜಿಗಳು ಹೇಳುತ್ತಿರುತ್ತಾರೆ. ಅದರ ಪ್ರಕಾರವೇ ಉಳಿದವರೆಲ್ಲರೂ ರಾಮನು ಕೃಷ್ಣನು ಒಬ್ಬರೇಯೆಂದು ಹೇಳುತ್ತಿದ್ದಾರೆ.

ತ್ರೇತಾಯುಗದಲ್ಲಿ ಶ್ರೀರಾಮನು ಒಳ್ಳೆಯ ನಡೆತೆಯುಳ್ಳವನು. ಆತನ ಜೀವನದಲ್ಲಿ ಅನೇಕ ಕಷ್ಟಗಳನ್ನು ಎದುರಿಸಿದ್ದಾನೆ. 16 ಇಲ್ಲವೇ 17 ವರ್ಷಗಳಿಗೇ ಅರಣ್ಯ ವಾಸಕ್ಕೆ ಹೋಗಿದ್ದಾನೆ. 14 ವರ್ಷಗಳವರೆಗು ಅರಣ್ಯವಾಸವನ್ನು ಮಾಡಿದ್ದಾನೆ. ತನ್ನ 30ನೇ ವಯಸ್ಸಿನಲ್ಲಿ ರಾವಣನೊಂದಿಗೆ ಯುದ್ಧ ಮಾಡಿದ್ದಾನೆ. ನಂತರ ಅಯೋಧ್ಯೆಗೆ ಬಂದರೂ ತಿರುಗಿ ತನ್ನ ಹೆಂಡತಿಯಾದ ಸೀತೆಯನ್ನು ಕಾಡಿಗೆ ಕಳಿಸಿದನು. ನಂತರ ಸೀತೆ ಇಲ್ಲದೇ ಒಂಟಿ ಜೀವನವನ್ನು ಕಳೆದನು. ತನಗೆ 46 ವರ್ಷಗಳಿರುವಾಗ ತನ್ನ ಕುಮಾರರಾದ ಲವಕುಶರನ್ನು ಮತ್ತು ಹೆಂಡತಿ ಸೀತೆಯನ್ನು ಭೇಟಿಯಾಗುವುದು ನಡೆಯಿತು. ಆಗ ಸೀತೆಯನ್ನು ಮರಳಿ ಅಯೋಧ್ಯೆಗೆ ಬರಬೇಕೆಂದು ಕರೆದಾಗ ಸೀತೆ ನಿರಾಕರಿಸಿದಳು. ನಂತರದ

ಜೀವನವನ್ನು ಕೂಡಾ ಹೆಂಡತಿ ವಿಯೋಗದಿಂದ ಬಾಧಾಕರವಾಗಿ ಕಳೆದನು. ಶ್ರೀರಾಮನು ಎಲ್ಲೂ ಆತ್ಮಜ್ಞಾನವನ್ನು ಹೇಳಿದಂತೆ ಚರಿತ್ರೆ ಇಲ್ಲ. ರಾಮನು ಜ್ಞಾನವನ್ನು ಹೇಳದಿದ್ದರೂ ರಾಮನನ್ನು ದೇವರೆಂದು ಪ್ರಜೆಗಳೆಲ್ಲರೂ ಹೇಳುವುದು ನಡೆಯುತ್ತಿದೆ. ರಾಮನು ಕೃಷ್ಣನು ಇಬ್ಬರೂ ಒಬ್ಬರೇ ಎನ್ನುವವರು ರಾಮನನ್ನು ದೇವರೆಂದು ಹೇಳುತ್ತಾ ಕೃಷ್ಣನನ್ನು ಕಳ್ಳ, ಮೋಸಗಾರ, ಹೆಂಗಸರ ಹಿಂದೆ ತಿರುಗುವವನು ಎಂದು ಹೇಳುತ್ತಿರುತ್ತಾರೆ. ರಾಮನು ದೇವರು ಆಗಿರುವಾಗ, ಕೃಷ್ಣನು ಕೂಡಾ ದೇವರೇ ಆಗುತ್ತಾನೆ ಅಲ್ಲವೇ! ರಾಮರಾಮ ಕೃಷ್ಣಕೃಷ್ಣ ಎನ್ನುತ್ತಾ ಹಾಡುಗಳು ಹಾಡುವವರು ಕೂಡಾ ರಾಮನನ್ನು ದೇವರನ್ನು ಮಾಡಿ ಕೃಷ್ಣನನ್ನು ಕಳ್ಳನನ್ನಾಗಿ ಮಾಡಿದ್ದಾರೆ. ಕಳ್ಳರೆಲ್ಲರೂ ಕೃಷ್ಣನನ್ನು ನಮ್ಮ ವೃತ್ತಿ ದೇವರೆಂದು ಹೇಳುತ್ತಿದ್ದಾರೆ. ರಾಮನನ್ನು ಆಕಾಶದಷ್ಟು ಎತ್ತಿದವರು ಕೃಷ್ಣನನ್ನು ಪೂರ್ತಿ ಕೆಳಗೆ ಹಾಕಿದಂತೆ ಮಾತನಾಡುತ್ತಿದ್ದಾರೆ.

ಇಲ್ಲಿಯವರೆಗು ದೇವರು ಭೂಮಿಮೇಲೆ ಮಾನವ ಅವತಾರಗಳಲ್ಲಿ ಎಷ್ಟುಬಾರಿ ಬಂದಿದ್ದಾನೋ ಖಚಿತವಾಗಿ ಯಾರೂ ಹೇಳಲಾರರು. ಆದರೂ ತಿಳಿದಮಟ್ಟಿಗೆ ಶಾಸ್ತ್ರಬದ್ಧವಾದ ಆಧಾರದಿಂದ ಹೇಳಿದರೇ ಮೂರುಬಾರಿ ಬಂದಿದ್ದಾನೆಂದು ಹೇಳಬಹುದು. ಈದಿನ ನನಗೆ ಭಗವಂತನ ವಿಷಯ ಸ್ವಲ್ಪ ತಿಳಿದರೂ ತ್ರೇತಾಯುಗದಲ್ಲಿ ಇಂಥವನು ಭಗವಂತನೆಂದಾಗಲೀ, ದ್ವಾಪರ ಯುಗದಲ್ಲಿ ಇಂಥವನು ಭಗವಂತನೆಂದು, ಹಾಗೆಯೇ ಕಲಿಯುಗದಲ್ಲಿ ಇಂಥವನು ಭಗವಂತನಾಗಿ ಇದ್ದುಹೋಗಿದ್ದಾನೆ ಎಂದು ಸತ್ಯವನ್ನು ಹೇಳುವುದಕ್ಕೆ ಕೂಡಾ ಭಯಪಡಬೇಕಾಗಿ ಬರುತ್ತದೆ. ಹಾಗೆ ಯಾಕೆ ಭಯಪಡಬೇಕಾಗಿ ಬರುತ್ತಿದೆ ಯೆಂದರೇ ಇಂದಿನ ಪ್ರಜೆಗಳು ಗತದಲ್ಲಿ ಬಂದಿರುವ ಮೂವರು ಭಗವಂತರನ್ನು ಗುರುತಿಸದೇ ಅವರನ್ನು ನೀಚರು, ದುರ್ಮಾರ್ಗರು, ಕಳ್ಳರಾಗಿ ಹೇಳಿಕೊಳ್ಳುತ್ತಿದ್ದಾರೆ. ಹಾಗೆ ಅವರು ಯಾರನ್ನಾದರೇ ಕೆಟ್ಟವರನ್ನಾಗಿ ಹೇಳಿಕೊಳ್ಳುತ್ತಿದ್ದಾರೋ ಅವರನ್ನು ನಾನು ಭಗವಂತರು ಎಂದು ಹೇಳಿದರೇ ಪ್ರಜೆಗಳಲ್ಲಿ ಅಜ್ಞಾನಿಗಳಾದವರಿಗೆ ಪೂರ್ತಿ ವಿರುದ್ಧವಾಗಿ ಹೇಳಿದಂತಾಗುತ್ತಿದೆ. ದ್ವಾಪರ ಯುಗದಲ್ಲಿ ಇದ್ದ ಕೃಷ್ಣನು,

ತ್ರೇತಾಯುಗದಲ್ಲಿ ಶ್ರೀರಾಮನಾಗಿ ಇದ್ದಾನೆಂದು ಬಹಳಜನ ಹೇಳುತ್ತಿದ್ದರೂ ಕೊನೆಗೆ ಕೃಷ್ಣನನ್ನು ಕೆಟ್ಟ ವ್ಯಕ್ತಿಯಾಗಿಯೇ ಹೇಳುತ್ತಿದ್ದಾರೆ.

ಕಲಿಯುಗದಲ್ಲಿ ಎರಡುಸಾವಿರ ವರ್ಷಗಳ ಕೆಳಗೆ ದೇವರು ಭಗವಂತನಾಗಿ ಬಂದಿದ್ದಾನೆಂದು, ಹಾಗೆ ಬಂದಿರುವ ಭಗವಂತನೇ ಯೇಸು ಎಂದು ಹೇಳಿದರೇ ಕ್ರೈಸ್ಥರಲ್ಲಿ ಕೂಡಾ ಕೆಲವರು ವಿರೋಧಿಸುತ್ತಿದ್ದಾರೆ. ಕೆಲವರು ನಿಜವೆಂದು ಸಂತೋಷಿಸುತ್ತಿದ್ದಾರೆ. ಇತರ ಮತಗಳವರಾದರೇ ಪೂರ್ತಿ ವಿರೋಧಿಸುತ್ತಿದ್ದಾರೆ. ಹಿಂದೂಗಳಾದರೇ ಯೇಸು ಹೆಸರು ಹೇಳಿದರೇ ಉರಿದುಬೀಳುತ್ತಿದ್ದಾರೆ. ಅವರು ಸ್ವಮತಾಭಿಮಾನದಿಂದ ಇದ್ದೂ ಪರಮತವನ್ನು ದ್ವೇಷಿಸುವವರಾಗಿ ಇರುವುದರಿಂದ ಯೇಸು ಎಂಬ ಮಾತನ್ನು ಕೇಳುತ್ತಲೇ ಅಲರ್ಜಿ ಬಂದವರಹಾಗೆ ವಿರುದ್ಧ ಭಾವನೆಯನ್ನು ವ್ಯಕ್ತ ಪಡಿಸುತ್ತಿದ್ದಾರೆ. ಯೇಸುನನ್ನು ಭಗವಂತನೆಂದರೇ ಯಾರೂ ಒಪ್ಪಿಕೊಳ್ಳುವುದಿಲ್ಲ. ಪ್ರಜೆಗಳ ದೃಷ್ಠಿಗೆ ಕಾಣಿಸಿ ತಮ್ಮನ್ನು ಪ್ರಜೆಗಳು ತಿಳಿಯುವ ನಿಮಿತ್ತ ತಮ್ಮನ್ನು ತಾವು ದೇವರೆಂದು ಹೇಳಿಕೊಂಡರೂ, ಪ್ರಜೆಗಳು ಅವರನ್ನು ಒಪ್ಪಿಕೊಳ್ಳದಿರುವಾಗ ನಾನು ದೇವರೆಂದು ಏನೂ ಹೇಳದವನು, ಪ್ರಜೆಗಳಲ್ಲಿ ಪೂರ್ತಿ ಕೆಟ್ಟವನಾಗಿ ಪ್ರಚಾರವಾದವನನ್ನು, ನಾನು ಭಗವಂತನೆಂದರೇ ಪ್ರಜೆಗಳು ಒಪ್ಪಿಕೊಳ್ಳದೇ ಹೋಗುವುದೆ ಅಲ್ಲದೇ ಹೇಳಿರುವ ನನ್ನನ್ನು ಅನೇಕ ತೊಂದರೆಗಳಿಗೆ ಗುರಿ ಮಾಡುತ್ತಿದ್ದಾರೆ. ನಾನು ಹಿಂದುವಾಗಿದ್ದರೂ ಕೂಡಾ ಅವರು ನನ್ನನ್ನು ಹಿಂದೂ ಅಲ್ಲ ಪರ ಮತಸ್ಥನೆಂದು ಹೇಳುತ್ತಿದ್ದಾರೆ. ನಾನು ಜ್ಞಾನವನ್ನು ಹೇಳುತ್ತಿದ್ದರೂ ನನ್ನನ್ನು ಅಜ್ಞಾನಿ ಎನ್ನುತ್ತಿದ್ದಾರೆ.

**ಪ್ರಶ್ನೆ :– ದ್ವಾಪರ ಯುಗದಲ್ಲಿ ಕೃಷ್ಣನನ್ನು ಭಗವಂತನೆಂದು ಕೆಲವರು ಹೇಳಿದ್ದಾರೆ. ಹೇಳುವುದೇ ಅಲ್ಲದೇ ವ್ಯಾಸನು ಭಗವದ್ಗೀತೆಯಲ್ಲಿ ಕೃಷ್ಣನನ್ನು ಭಗವಂತನಾಗಿ ಹೇಳುತ್ತಾ ಭಗವಂತನು ಹೀಗೆ ಹೇಳಿದ್ದಾನೆ (ಭಗವಾನುವಾಚ) ಎಂದು ಹೇಳಿದ್ದಾನೆ. ಆದ್ದರಿಂದ ಕೃಷ್ಣನು ಭಗವಂತನೆಂದು ಹೇಳುವುದಕ್ಕೆ ಸ್ವಲ್ಪ ಅವಕಾಶವಿದ್ದರೂ ಕೆಲವರು ಹಿಂದೂಗಳೇ ಕೃಷ್ಣನನ್ನು ದೇವರಾಗಿ ಒಪ್ಪಿಕೊಳ್ಳುತ್ತಿಲ್ಲ. ಯೇಸು ವಿಷಯಕ್ಕೆ ಬಂದರೇ**

**ನೀವು ಯೇಸು ಭಗವಂತನೆಂದು ಹೇಳುವ ಮಾತನ್ನು ಕ್ರೈಸ್ಥರೇ ಒಪ್ಪಿಕೊಳ್ಳುತ್ತಿಲ್ಲ. ಯೇಸು ದೇವರ ಕುಮಾರನೇ ಹೊರತು, ದೇವರು ಅಲ್ಲ ಎಂದು ಹೇಳುತ್ತಿದ್ದಾರೆ. ಯೇಸು ದೇವರ ಕುಮಾರನಾಗಿರುವುದರಿಂದ, ಪ್ರಜೆಗಳು ಕೂಡಾ ದೇವರ ಕುಮಾರರೇ ಆಗುವುದರಿಂದ ಪ್ರಜೆಗಳು ನಮಗೆ ಯೇಸು ಸೋದರನಾಗಿ ಇದ್ದಾನೆಂದು ಕ್ರೈಸ್ಥರು ಬಹಳಜನ ಹೇಳುತ್ತಿದ್ದಾರೆ. ಬಹಳ ಕಡಿಮೆ ಜನ ಮಾತ್ರ ನಿಮ್ಮ ಮಾತನ್ನು ಸತ್ಯವೇ ಎನ್ನುತ್ತಿದ್ದಾರೆ. ಉಳಿದ ಕ್ರೈಸ್ಥರೆಲ್ಲಾ ಯೇಸುನನ್ನು ದೇವರ ಕುಮಾರನಾಗಿಯೇ ಹೇಳುತ್ತಿದ್ದಾರೆ ಹೊರತು ದೇವರಾಗಿ ಒಪ್ಪಿಕೊಳ್ಳುತ್ತಿಲ್ಲ. ಹಾಗಿರುವಾಗ ಕ್ರೈಸ್ಥ ಮತದಲ್ಲಿಯೇ ಯೇಸುನನ್ನು ಭಗವಂತನಾಗಿ ಒಪ್ಪಿಕೊಳ್ಳದಿರುವಾಗ ನೀವು ಹೇಳಿರುವ ದ್ವಾಪರ ಯುಗ ಕೃಷ್ಣನನ್ನು, ಕಲಿಯುಗ ಯೇಸುನನ್ನು ಭಗವಂತನಾಗಿ ವಿಶ್ವಾಸಿಸದಿರುವಾಗ ಯಾರೂ ಇಲ್ಲಿಯತನಕ ತ್ರೇತಾಯುಗದಲ್ಲಿ ಭಗವಂತನು ಬಂದಿದ್ದಾನೆಂದು ಹೇಳದಿದ್ದರೂ ಯಾರನ್ನೋ ನೀವು ಭಗವಂತನಾಗಿ ಹೇಳಿದರೇ ಪ್ರಜೆಗಳು ನಂಬುತ್ತಾರಾ?**

**ಉತ್ತರ :-** ನಂಬಿಕೆ ಎನ್ನುವುದು ಮುಖ್ಯವಲ್ಲ. ನಂಬಿಕೆ ಎನ್ನುವುದು ಸತ್ಯವಾಗಬಹುದು, ಅಸತ್ಯವಾಗಬಹುದು. ಕೆಲವರು ನಂಬಿದರೇ ಅದು ಸತ್ಯ, ನಂಬದೇ ಹೋದರೇ ಅಸತ್ಯವೆಂದು ಹೇಳುವುದಕ್ಕೆ ಅವಕಾಶವಿಲ್ಲ. ನಂಬಿಕೆಯ ಮೇಲೆ ಆಧಾರಪಟ್ಟು ಸತ್ಯವು ಇರುವುದಿಲ್ಲ. ಆದ್ದರಿಂದ ಕೆಲವರು ಹಿರಿಯರು ಹೀಗೆ ಹೇಳಿದ್ದಾರೆ. **"ಅಸತ್ಯವನ್ನು ಸಾವಿರಜನ ಹೇಳಿದರೂ ಅದು ಸತ್ಯವಲ್ಲ. ಸತ್ಯವನ್ನು ಸಾವಿರ ಜನ ಅಲ್ಲಗಳೆದರೂ ಅದು ಅಸತ್ಯವಲ್ಲ."** ಈ ಮಾತನ್ನು ಅನುಸರಿಸಿ ಪ್ರಜೆಗಳ ನಂಬಿಕೆಯ ಮೇಲೆ ಸತ್ಯವು ಆಧಾರಪಟ್ಟಿಲ್ಲ. ಸತ್ಯವನ್ನು ಯಾರು ಒಪ್ಪಿಕೊಳ್ಳದೇ ಹೋದರೂ ಅದು ಎಂದಿಗೂ ಸತ್ಯವಾಗಿಯೇ ಇರುತ್ತದೆ ಆದರೇ ಅಸತ್ಯವಾಗಿ ಬದಲಾಗುವುದಕ್ಕೆ ಅವಕಾಶವಿಲ್ಲ. ಕೋಳಿಮೊಟ್ಟೆಯನ್ನು ಇದು ಕೋಳಿಮೊಟ್ಟೆ ಅಲ್ಲ ಎಂದು ಎಷ್ಟುಜನ ಹೇಳಿದರೂ ಅದು ಕೋಳಿಮೊಟ್ಟೆಯಾಗಿಯೇ ಇರುತ್ತದೆ ಹೊರತು ಹಾವಿನ ಮೊಟ್ಟೆಯಾಗಿಯೋ, ಇತರ ಪಕ್ಷಿ ಮೊಟ್ಟೆಯಾಗಿಯೋ ಬದಲಾಗುವುದಿಲ್ಲ ಅಲ್ಲವೇ! ಹಾಗೆಯೇ

ಹಸುವಿನ ಹಾಲನ್ನು ಕೆಲವರು ತಿಳಿಯದೆ ಕತ್ತೆಯ ಹಾಲು ಎಂದು ಹೇಳಿದಷ್ಟುಮಾತ್ರಕ್ಕೆ ಅವು ಹಸುವಿನ ಹಾಲು ಎನ್ನುವುದು ಸತ್ಯವಾಗಿಯೇ ಇರುತ್ತದೆ. ಅದೇ ವಿಧವಾಗಿ ಕತ್ತೆಯ ಹಾಲನ್ನು ಹಸುವಿನ ಹಾಲು ಎಂದು ಹೇಳಿದರೂ ಅವು ಎಂದಿಗೂ ಹಸುವಿನ ಹಾಲಲ್ಲ. ಅದೇ ವಿಧವಾಗಿ ಪ್ರಜೆಗಳ ನಂಬಿಕೆಯನ್ನು ಅನುಸರಿಸಿ ಸತ್ಯಾಸತ್ಯಗಳು ಆಧಾರಪಟ್ಟಿರುವುದಿಲ್ಲ. ಯೇಸುನನ್ನು ದೇವರ ಕುಮಾರನೆಂದು ದೈವಗ್ರಂಥದಲ್ಲಿ ಹೇಳಿದ್ದಾರೆಂದು ಕೆಲವರು ಹೇಳುತ್ತಿದ್ದಾರೆ. ಅದರ ಪ್ರಕಾರ ಯೇಸು ದೇವರಲ್ಲ ಎಂದು ಕೆಲವರು ಹೇಳುತ್ತಿದ್ದಾರೆ. ಯಾರ ಇಷ್ಟ ಅವರದ್ದು, ಯಾರ ನಂಬಿಕೆ ಅವರದ್ದು. ಯೇಸುನನ್ನು ದೇವರಲ್ಲವೆಂದು ಅವರು ಹೇಳುವುದರಿಂದ ಆತನು ದೇವರಾಗದೇ ಹೋಗುವು ದಿಲ್ಲ. ಹಾಗೆಯೇ ಕೃಷ್ಣನನ್ನು ಬಹಳಜನ ಆತನು ಮಾಡಿರುವ ಕೆಲಸಗಳನ್ನು ಅನುಸರಿಸಿ ಮೋಸಗಾರನೆಂದು ಹೇಳಿದ್ದಾರೆ. ಹಾಗೆಯೇ ಆತನು ಹೇಳಿರುವ ಜ್ಞಾನವನ್ನು ಅನುಸರಿಸಿ ಆತನನ್ನು ದೇವರೆಂದೇ ಹೇಳಬಹುದು ಅಲ್ಲವೇ! ಯೇಸುನನ್ನಾಗಲೀ, ದ್ವಾಪರಯುಗದಲ್ಲಿನ ಕೃಷ್ಣನನ್ನಾಗಲೀ ಭಗವಂತನೆಂದು ಪ್ರಜೆಗಳು ನಂಬದೇ ಹೋದಷ್ಟು ಮಾತ್ರಕ್ಕೆ ಅವರು ಮತ್ತೊಬ್ಬರಾಗಿ ಬದಲಾಗುವುದಕ್ಕೆ ಅವಕಾಶವಿಲ್ಲ. ತ್ರೇತಾಯುಗದಲ್ಲಿ ಭಗವಂತನನ್ನು ಕುರಿತು ಇಲ್ಲಿಯವರೆಗು ಯಾರೂ ಹೇಳದಿದ್ದರೂ, ತ್ರೇತಾಯುಗದಲ್ಲಿ ರಾಮನನ್ನು ಅಂದರೇ ದಶರಥ ಪುತ್ರನನ್ನು ಪ್ರಜೆಗಳು ದೇವರೆಂದು ಕರೆಯುತ್ತಿದ್ದಾರೆ. ಅವರ ನಂಬಿಕೆ ಅವರದ್ದು. ಅವರ ಮಾತನ್ನು ಅಲ್ಲಗಳೆದರೂ, ಅವರ ಮಾತನ್ನು ಹೌದೆಂದರೂ ರಾಮನು ರಾಮನಾಗಿಯೇ ಇರುತ್ತಾನೆ. ರಾಮನು ದೇವರಾದರೇ ಆತನು ದೇವರಾಗಿಯೇ ಇರುತ್ತಾನೆ. ಒಂದುವೇಳೆ ಆತನು ದೇವರು ಅಲ್ಲದೇ ಹೋದರೇ ದೇವರಲ್ಲದೇನೇ ಇರುತ್ತಾನೆ. ಅಷ್ಟೇ ಹೊರತು ನಮ್ಮ ಉದ್ದೇಶ ಅಲ್ಲಿ ಏನೂ ಕೆಲಸ ಮಾಡುವುದಿಲ್ಲ. ಆದ್ದರಿಂದ ಬಹಳಜನ ರಾಮನನ್ನು ದೇವರೆಂದು ಹೇಳುತ್ತಿದ್ದರೇ ನಾನು ಅಲ್ಲಗಳೆಯಲಾರೆ. ರಾಮನು ದೇವರೇ ಆಗಿರಬಹುದು. ಎಲ್ಲರೂ ನಂಬಿದಹಾಗೆಯೇ ನಾನು ಕೂಡಾ ನಂಬುತ್ತಿದ್ದೇನೆ. ರಾಮನ ಕಾಲದಲ್ಲಿ ರಾಮನಿಗೆ ಪ್ರತ್ಯರ್ಥಿ ಒಬ್ಬರು ಇದ್ದರು. ಆತನ ಹೆಸರೇ

ರಾವಣಬ್ರಹ್ಮ. ರಾವಣಬ್ರಹ್ಮ ಮಹಾ ಜ್ಞಾನಿಯೆಂದು, ತ್ರಿಕಾಲ ಜ್ಞಾನಿಯೆಂದು ಕೆಲವರು ಜ್ಞಾನಿಗಳು ಹೇಳುವುದನ್ನು ಕೇಳಿದ್ದೇನೆ. ರಾವಣನು ಅಷ್ಟು ದೊಡ್ಡ ಜ್ಞಾನಿ ಯಾಗಿರುವಾಗ ರಾಮನು ದೇವರೆಂದು ತಿಳಿಯಲಾರದೇ ಹೋಗಿದ್ದಾನಾ? ಯಾವ ಜ್ಞಾನವಿಲ್ಲದ ಸಾಧಾರಣ ಮನುಷ್ಯರು ಕೂಡಾ ರಾಮನನ್ನು ದೇವರೆಂದು ತಿಳಿದು ಹೇಳುತ್ತಿರುವಾಗ ಎಷ್ಟೋ ಜ್ಞಾನವಿರುವ ರಾವಣನು ರಾಮನನ್ನು ಯಾಕೆ ಗುರುತಿಸಲಾರದೇ ಹೋದನು? ಎಷ್ಟೋಜನ ಪ್ರಜೆಗಳು ವಿಶ್ವಾಸಿಸಿದ ನಂತರ ಆತನು ಯಾಕೆ ವಿಶ್ವಾಸಿಸಲಿಲ್ಲ?

**ಪ್ರಶ್ನೆ :– ರಾವಣಬ್ರಹ್ಮ ಮಹಾಜ್ಞಾನಿಯೆಂದು ಕೆಲವರು ಹೇಳುವುದು ನಾವು ಕೂಡಾ ಕೇಳಿದ್ದೇವೆ. ಅಷ್ಟು ಜ್ಞಾನಿಯಾದವನು ಪ್ರಜೆಗಳಲ್ಲಿ ಒಳ್ಳೆಯವನಾಗಿ ಲೆಕ್ಕಿಸಲ್ಪಡಲಿಲ್ಲ. ಅದಕ್ಕೆ ಕಾರಣ ಎಲ್ಲರೂ ಒಂದೇ ಒಂದು ಹೇಳುತ್ತಿದ್ದಾರೆ. ಅದೇ 'ಸೀತೆಯನ್ನು ರಾವಣನು ಅಪಹರಿಸಿಕೊಂಡು ಹೋಗಿದ್ದಾನೆ' ಎಂದು ಹೇಳುತ್ತಿದ್ದಾರೆ. ಆ ಕೆಲಸವನ್ನು ರಾವಣನು ಮಾಡದೇ ಹೋದರೇ ಆತನನ್ನು ಪ್ರಜೆಗಳು ಒಳ್ಳೆಯವನಾಗಿ ಗುರುತಿಸುತ್ತಿದ್ದರೇನೋ?**

**ಉತ್ತರ :–** ದ್ವಾಪರಯುಗದಲ್ಲಿನ ಕೃಷ್ಣನು, ಕಲಿಯುಗದಲ್ಲಿನ ಯೇಸು ರಾವಣನು ಮಾಡಿದಹಾಗೆ ಇತರರ ಹೆಂಡತಿಯರನ್ನು ಅಪಹರಿಸಲಿಲ್ಲ ಅಲ್ಲವೇ! ಆದರೂ ಅವರನ್ನು ಪ್ರಜೆಗಳು ಒಳ್ಳೆಯವರೆಂದು ಹೇಳುತ್ತಿಲ್ಲ. ಕೃಷ್ಣನನ್ನು, ಯೇಸುನನ್ನು ಕೆಟ್ಟವರಾಗಿಯೇ ಚಿತ್ರಿಸಿದ್ದಾರೆ ಅಲ್ಲವೇ! ಯಾವುದೋ ಒಂದು ನೆಪದಿಂದ ಒಳ್ಳೆಯವರನ್ನು ಕೂಡಾ ಕೆಟ್ಟದಾಗಿ ಹೇಳುವುದು ಭೂಮಿಮೇಲೆ ಪ್ರಜೆಗಳಿಗೆ ಅಭ್ಯಾಸವಾಗಿ ಹೋಗಿದೆ. ಹಾಗೆಯೇ ಯಾವ ಒಳ್ಳೆಯ ಕೆಲಸ ಮಾಡದಿದ್ದರೂ ಕೆಲವರನ್ನು ಒಳ್ಳೆಯವರಾಗಿ ಹೇಳುತ್ತಿರುತ್ತಾರೆ.

**ಪ್ರಶ್ನೆ :– ಪ್ರಜೆಗಳಲ್ಲಿ ಎಷ್ಟೋಜನ ಬುದ್ಧಿವಂತರಿದ್ದಾರೆ ಅಲ್ಲವೇ ಅವರು ಕೂಡಾ ರಾವಣನನ್ನು ಕೆಟ್ಟದಾಗಿ, ರಾಮನನ್ನು ಒಳ್ಳೆಯದಾಗಿ ಹೇಳುತ್ತಿದ್ದಾರೆ. ಅದರಲ್ಲಿ ಸತ್ಯವೆಷ್ಟು ಅಸತ್ಯವೆಷ್ಟು ಎಂದು ಆಲೋಚಿಸಿದರೇ ಅವರು ಸತ್ಯಕ್ಕಿಂತ ಅಸತ್ಯವನ್ನೇ**

**ಹೆಚ್ಚಾಗಿ ಹೇಳುತ್ತಿದ್ದಾರೆಂದು ತಿಳಿದಿದೆ. ಮನುಷ್ಯರಿಗೆ ಒಂದು ಕೆಟ್ಟ ಅಭ್ಯಾಸವಿದೆ. ಯಾರಾದರೂ ಒಬ್ಬ ಸ್ವಲ್ಪ ಹೆಸರುವಾಸಿಯಾದವನು ಏನು ಹೇಳಿದರೇ ಅದು ನಿಜವೆಂದೇ ನಂಬಿ ಆತನು ಹೇಳಿರುವ ವಿಷಯವನ್ನೇ ಪ್ರಜೆಗಳು ಕೂಡಾ ಹೇಳುತ್ತಿರುತ್ತಾರೆ. ಯಾರಾದರೂ ತಾವು ಕೇಳಿದ ವಿಷಯದಲ್ಲಿ ನಿಜವೆಷ್ಟು, ಸುಳ್ಳೆಷ್ಟು ಎಂದು ಆಲೋಚಿಸುವುದಿಲ್ಲ. ರಾವಣನು ಸೀತೆಯನ್ನು ಕರೆದುಕೊಂಡು ಹೋಗಿರುವುದು ವಾಸ್ತವವೇ, ಆದರೇ ಆಕೆಯನ್ನು ಆತನು ಯಾವ ಉದ್ದೇಶದಿಂದ ಕರೆದುಕೊಂಡು ಹೋಗಿದ್ದಾನೆಂದು ಸ್ವಲ್ಪವೂ ನೋಡದೇ ಇದ್ದಾರೆ. ಇತರರು ಹೇಳಿರುವುದನ್ನೇ ನಂಬಿ ರಾವಣನು ಒಳ್ಳೆಯವನಲ್ಲ, ಸೀತೆ ಮೇಲೆ ಕಾಮದಿಂದ ಸೀತೆಯನ್ನು ಬಲವಂತವಾಗಿ ಕರೆದುಕೊಂಡು ಹೋಗಿದ್ದಾನೆ ಎಂದು ಹೇಳುತ್ತಿದ್ದಾರೆ. ರಾವಣನು ಸೀತೆ ಮೇಲೆ ಕೆಟ್ಟ ಅಭಿಪ್ರಾಯ ಹೊಂದಿ ಆಕೆಯನ್ನು ಕರೆದುಕೊಂಡು ಹೋಗಿದ್ದಾನಾ ಇಲ್ಲವಾ? ಇಲ್ಲದೇ ಹೋದರೇ ಯಾವ ಉದ್ದೇಶದಿಂದ ಕರೆದುಕೊಂಡು ಹೋಗಿದ್ದಾನೆ? ಎಂಬ ಪ್ರಶ್ನೆ ಈದಿನ ನಮಗೆ ಬಂದಿದೆ. ನಾನು ಪ್ರಜೆಗಳ ಮಾತನ್ನು ಕುರುಡನಂತೆ ನಂಬದೇ ಅದರಲ್ಲಿ ಸತ್ಯವಿದೆಯಾ, ಅಸತ್ಯವಿದೆಯಾ ಎಂದು ತಿಳಿಯಬೇಕೆಂದುಕೊಂಡಿದ್ದೇನೆ. ನೀವು ಇದ್ದದ್ದನ್ನು ಇದ್ದಹಾಗೆ ಹೇಳುತ್ತೀರೆಂಬ ವಿಶ್ವಾಸದಿಂದ ಸತ್ಯಸಮೇತವಾಗಿ ಈ ವಿಷಯವನ್ನು ತಿಳಿಸಬೇಕೆಂದು ಕೋರುತ್ತಿದ್ದೇನೆ?**

**ಉತ್ತರ :-** ರಾಮನು ದೇವರೆಂದು, ರಾವಣನು ರಾಕ್ಷಸನೆಂದು ಪ್ರಜೆಗಳು ಹೇಳುತ್ತಿದ್ದಾರೆ. ರಾಕ್ಷಸನು ಎಂದರೇ ದೇವತೆಗಳಿಗೆ ವಿರುದ್ಧವಾಗಿ ಮಾಡುವವನು, ದುರ್ಮಾರ್ಗನೆಂದು ಪ್ರಜೆಗಳ ಭಾವನೆ. ಪಂಡಿತರು ಕೂಡಾ ಪೂರ್ತಿ ಕೆಟ್ಟವನನ್ನು ರಾಕ್ಷಸನೆಂದು ಹೇಳುವುದು ನಡೆದಿದೆ. ರಾಮನು ಮನುಷ್ಯನೇ, ರಾವಣನು ಮನುಷ್ಯನೇ ಆದರೇ ರಾಮನು ದೇವರು ಹೇಗೆ ಆಗಿದ್ದಾನೋ, ರಾವಣನು ರಾಕ್ಷಸ ಹೇಗೆ ಆಗಿದ್ದಾನೋ ನನಗೆ ಮಾತ್ರ ತಿಳಿದಿಲ್ಲ. ಇತರರು ಹೇಳುತ್ತಿದ್ದರೇ ಕೇಳಿ, ಕೇಳಿರುವುದು ಸತ್ಯವಾ ಅಸತ್ಯವಾ ಎಂದು ಆಲೋಚಿಸದೆ ಎಲ್ಲರಹಾಗೆ ಮಾತನಾಡುವುದು ನನ್ನಿಂದ ಸಾಧ್ಯವಿಲ್ಲ. ಆದ್ದರಿಂದ ಕುರುಡನಂತೆ ನಾನು

ಯಾವುದನ್ನು ಹೇಳುವುದಿಲ್ಲ. ರಾಮನು, ರಾವಣನು ಒಂದೇ ಕಾಲದಲ್ಲಿ ನಿವಾಸಿಸಿದ್ದಾರೆ ಎನ್ನುವುದು ಮಾತ್ರ ವಾಸ್ತವ. ಕೃಷ್ಣನ ವಿಷಯದಲ್ಲಿ ನೋಡಿದರೇ ಪ್ರಜೆಗಳು ಮಾತನಾಡಿದ ಮಾತುಗಳಿಗೆ ನಡೆದಿರುವ ಸಂಘಟನೆಗಳಿಗೆ ಸಂಬಂಧ ವಿಲ್ಲದೇ ಇದೆ. ಕೃಷ್ಣನನ್ನು ಚಿಕ್ಕಮಗುವಿನಂತೆ ಚಿತ್ರಪಟವನ್ನು ತೋರಿಸಿದ್ದಾರೆ. ನಂತರ ಆತನು ಎಂದಿಗೂ ಯುವಕನಾಗಿಯೇ ಇದ್ದಹಾಗೆ ತೋರಿಸಿದ್ದಾರೆ. ಕೌರವರಿಗು ಪಾಂಡವರಿಗು ನಡೆದ ಭಾರತಯುದ್ಧದಲ್ಲಿ ಕೃಷ್ಣನ ವಯಸ್ಸು ಸುಮಾರು ತೊಂಭತ್ತಾರು (96) ವರ್ಷಗಳು. ಯುದ್ಧ ನಡೆದ ಮೂವತ್ತು (30) ವರ್ಷಗಳಿಗೆ ಆತನು ಮರಣಿಸುವುದು ನಡೆದಿದೆ. ಆದರೇ ಯುದ್ಧ ಸಮಯದಲ್ಲಿ ಕೃಷ್ಣನ ಚಿತ್ರವನ್ನು ಯುವಕನಾಗಿ ಇರುವಹಾಗೆ ತೋರಿಸುವುದು ನಡೆದಿದೆ. ವಾಸ್ತವವಾಗಿ ವೃದ್ಧಾಪ್ಯ ವಯಸ್ಸಿನಲ್ಲಿ ರಥಸಾರಥ್ಯವನ್ನು ಮಾಡಿದಂತೆ ಚರಿತ್ರೆ ಇರುವಾಗ, ಯುದ್ಧ ಸಮಯದಲ್ಲಿ ಕೃಷ್ಣನನ್ನು ಯುವಕನಾಗಿ ತೋರಿಸುವುದು ಪೂರ್ತಿ ಅಸತ್ಯವನ್ನು ತೋರಿಸಿದ ಹಾಗೆಯೇ ಅಲ್ಲವೇ!

ಈ ವಿಧವಾಗಿ ಎಷ್ಟೋ ವಿಷಯಗಳಲ್ಲಿ ಅಸತ್ಯವನ್ನು ಕೆಲವರು ರಚನಕಾರರು, ಪಂಡಿತರು ಪ್ರಚಾರ ಮಾಡುತ್ತಿರುವಾಗ ಅದನ್ನು ಕೇಳಿದ ಪ್ರಜೆಗಳು ವಿಚಕ್ಷಣೆಯನ್ನು ಕಳೆದುಕೊಂಡವರಾಗಿ ಅವರ ಮಾತನ್ನೇ ಸತ್ಯವೆಂದು ನಂಬಿ ಅದನ್ನೇ ಒಬ್ಬರಿಗೊಬ್ಬರು ಹೇಳಿಕೊಳ್ಳುತ್ತಿರುವಾಗ ಪೂರ್ತಿ ಅಸತ್ಯ ಪ್ರಚಾರ ನಡೆದುಹೋಗುತ್ತಿದೆ. ಕೃಷ್ಣನ ವಿಷಯದಲ್ಲಿ ಆತನು ಯಾವ ವಯಸ್ಸಿನಲ್ಲಿ ಯಾವ ಕೆಲಸವನ್ನು ಮಾಡಿದ್ದಾನೆಂದು ಆಲೋಚಿಸದೇ ಪ್ರಚಾರ ಮಾಡಿದಂತೆ, ರಾವಣನ ಕಾಲದಲ್ಲಿ ಕೂಡಾ ರಾವಣನು ಯಾವ ವಯಸ್ಸಿನಲ್ಲಿ ಯಾವ ಕೆಲಸವನ್ನು ಮಾಡಿದ್ದಾನೆಂದು ತಿಳಿಯದೇ ಎಲ್ಲ ಕೆಲಸಗಳು ಯುಕ್ತ ವಯಸ್ಸು ಇರುವಾಗ ಮಾಡಿದಂತೆ ಬರೆದುಕೊಳ್ಳುವುದು, ಚಿತ್ರಿಸಿಕೊಳ್ಳುವುದು, ಹೇಳಿಕೊಳ್ಳುವುದರಿಂದ ರಾವಣನ ವಿಷಯದಲ್ಲಿ ಕೂಡಾ ಅಸತ್ಯ ಪ್ರಚಾರ ನಡೆದುಹೋಗಿದೆಯೆಂದು ತಿಳಿದಿದೆ. ರಾವಣನ ಕಾಲದಲ್ಲಿ ಕೆಲವು ಸಂಘಟನೆಗಳು ನಡೆದಿರುವವು ವಾಸ್ತವವೇ. ಆದರೇ ಅವು ರಾವಣನಿಗೆ ಯಾವ ವಯಸ್ಸು ಇರುವಾಗ ನಡೆದಿವೆಯೆಂದು

ಆಲೋಚಿಸದೆ ಎಲ್ಲ ಕೆಲಸಗಳು ಒಂದೇ ವಯಸ್ಸಿನಲ್ಲಿ ಮಾಡಿದಹಾಗೆ ಹೇಳಿಕೊಳ್ಳುವುದು ದೊಡ್ಡ ತಪ್ಪು. ಅದೇ ತಪ್ಪನ್ನೇ ಎಲ್ಲರೂ ಹೇಳಿಕೊಳ್ಳುತ್ತಾ, ಕೆಲವರಾದರೂ 'ಯಾವುದು ಸತ್ಯ?' ಎಂದು ಆಲೋಚಿಸದೆ ಹೋಗಿರುವುದು ಇನ್ನೂ ದೊಡ್ಡ ತಪ್ಪು.

ರಾವಣನಿಗೆ ಕೆಟ್ಟ ಹೆಸರು ಬಂದಿರುವುದು 'ಸೀತೆಯನ್ನು ಅಪಹರಿಸಿದ್ದಾನೆ' ಎಂಬ ಸಂಘಟನೆಯಲ್ಲಿಯೇ. ಆ ಸಂಘಟನೆ ನಡೆದಿರುವುದು ವಾಸ್ತವವೇ. ಆದರೇ ಆತನು ಯಾವ ವಯಸ್ಸಿನಲ್ಲಿ, ಯಾವ ಉದ್ದೇಶದಿಂದ ಆ ಕೆಲಸವನ್ನು ಮಾಡಿದ್ದಾನೆಂದು ಯಾರೂ ಸ್ವಲ್ಪವಾದರೂ ಆಲೋಚಿಸಲಿಲ್ಲ. ಅದೇ ವಿಧವಾಗಿ 'ಸೀತೆ ಸ್ವಯಂವರಕ್ಕೆ ರಾವಣನು ಹೋಗಿ ಶಿವಧನಸ್ಸನ್ನು ಎತ್ತಲಾರದೇ ಅಪಜಯವನ್ನು ಹೊಂದಿದ್ದಾನೆಂದು' ಹೇಳುವುದು ಕೂಡಾ ಮುಖ್ಯವಾಗಿ ಕೇಳುತ್ತಿರುವ ಸಮಾಚಾರವೇ. ರಾವಣನು ಸೀತೆ ಸ್ವಯಂವರದ ನಂತರ 14 ವರ್ಷಗಳಿಗೆ ಸೀತೆಯನ್ನು ತನ್ನ ವಿಮಾನದಲ್ಲಿ ಕರೆದುಕೊಂಡು ಹೋದಂತೆ ಹೇಳುತ್ತಿದ್ದಾರೆ.  ಸೀತೆ ಸ್ವಯಂವರಕ್ಕೆ ಜನಕನು ಬಹಳಜನ ಮದುವೆಯಾಗದ ಯುವರಾಜರಿಗೆ ಇಲ್ಲವೇ ರಾಜಕುಮಾರರಿಗೆ ಆಹ್ವಾನ ಕಳುಹಿಸಿದ್ದಾನೆ. ಸಹಜವಾಗಿ ಯಾವ ತಂದೆಯು, ಮದುವೆ ಆದವನಿಗೆ ತನ್ನ ಮಗಳನ್ನು ಕೊಟ್ಟು ಮದುವೆ ಮಾಡಬೇಕೆಂದುಕೊಳ್ಳುವುದಿಲ್ಲ. ಆದ್ದರಿಂದ ಮದುವೆಯಾಗಿದ್ದ ರಾವಣನಿಗೆ ಜನಕನು ಸ್ವಯಂವರ ಆಹ್ವಾನವನ್ನು ಕಳುಹಿಸಿದ್ದಾನೆ ಎನ್ನುವುದು ಪೂರ್ತಿ ಅವಾಸ್ತವ. ಸೀತೆ ಸ್ವಯಂವರ ಸಮಯಕ್ಕೆ ರಾವಣಬ್ರಹ್ಮನಿಗೆ ಮದುವೆಯಾದ ಕುಮಾರನಿದ್ದನು. ರಾವಣನ ಮಗನಿಗೆ ಮಗನಿರುವಾಗ ರಾವಣನು ತನ್ನ ಮೊಮ್ಮಗನ ಸಮೇತವಾಗಿ, ಮಗನ ಸಮೇತವಾಗಿ ಲಂಕದಲ್ಲಿ ಇದ್ದನು. ಸೀತೆ ಸ್ವಯಂವರ ಸಮಯಕ್ಕೆ ರಾವಣನ ವಯಸ್ಸು ಸುಮಾರು 85 ವರ್ಷಗಳು ಇರಬಹುದು. ಆ ವಯಸ್ಸಿನವನಿಗೆ ಅವನಿಗೆ ಸೀತೆ ತಂದೆ ಜನಕನು ಆಹ್ವಾನವನ್ನು ಕಳುಹಿಸಿದ್ದಾನೆ ಎನ್ನುವುದು ಎಷ್ಟು ಅನುಚಿತವೋ ನೀವು ಸ್ವಲ್ಪ ಬುದ್ಧಿಯನ್ನು ಉಪಯೋಗಿಸಿ ಆಲೋಚಿಸಿರಿ.

ಸ್ವಲ್ಪ ಬುದ್ಧಿಯನ್ನು ಉಪಯೋಗಿಸಿ ನೋಡಿದರೂ ರಾವಣನು ಸೀತೆ ಸ್ವಯಂವರಕ್ಕೆ ಹೋಗಿದ್ದನು ಎನ್ನುವುದು ಪೂರ್ತಿ ಅಸತ್ಯ. ಹಾಗೆಯೇ ಜನಕನು ರಾವಣನಿಗೆ ಆಹ್ವಾನ ಕಳುಹಿಸಿದ್ದಾನೆ ಎನ್ನುವುದು ಕೂಡಾ ಪೂರ್ತಿ ಅಸತ್ಯ.

ಅಂದಿನ ಕಾಲದಲ್ಲಿ ಸಮುದ್ರವನ್ನು ದಾಟುವುದಕ್ಕೆ ಯಾವ ಸೌಕರ್ಯವಿಲ್ಲ. ಒಂದುವೇಳೆ ಜನಕನು ರಾವಣನಿಗೆ ಆಹ್ವಾನ ಕಳುಹಿಸಿದ್ದಾನೆಂದರೂ, ಅದನ್ನು ತೆಗೆದುಕೊಂಡು ಸಮುದ್ರವನ್ನು ದಾಟಿಹೋಗಿ ಕೊಡುವವರು ಯಾರೂ ಇಲ್ಲ. ಜನಕನು ಆಹ್ವಾನವನ್ನು ಕಳುಹಿಸದಿದ್ದರೂ ಕರೆಯದ ಪ್ರಸಂಗಕ್ಕೆ ಬಂದಹಾಗೆ ರಾವಣನೇ ಸೀತೆ ಸ್ವಯಂವರವನ್ನು ತಿಳಿದುಕೊಂಡು ಬಂದಿದ್ದಾನೆಂದು ಕೆಲವರು ಹೇಳುತ್ತಿರುತ್ತಾರೆ. ರಾವಣನು ಸೀತೆಯನ್ನು ಮದುವೆ ಮಾಡಿಕೊಳ್ಳುವುದಕ್ಕೆ ಸೀತೆ ಮೇಲಿನ ವ್ಯಾಮೋಹದಿಂದ ಬಂದಿದ್ದಾನೆಂದು ಕೂಡಾ ಕೆಲವರು ಹೇಳುತ್ತಿರುತ್ತಾರೆ. ಹಾಗೆ ಬಂದವನು ಸ್ವಯಂವರದಲ್ಲಿ ಸೀತೆ ಎತ್ತಿರುವ ಶಿವಧನಸ್ಸನ್ನು ಎತ್ತಲಾರದೇ ಧನಸ್ಸನ್ನು ಮೈಮೇಲೆಹಾಕಿಕೊಂಡು ಅವಮಾನ ಪಾಲಾಗಿದ್ದಾನೆಂದು ಕೆಲವರು ರಚನಕಾರರು ರಾಮಾಯಣದಲ್ಲಿ ಹೇಳಿದ್ದಾರೆ. ಆದರೇ ರಚನಕಾರರು ಸತ್ಯವನ್ನು ಬರೆದಿದ್ದಾರಾ? ಅಸತ್ಯವನ್ನು ಬರೆದಿದ್ದಾರಾ? ಎಂದು ಸ್ವಲ್ಪ ವಿಚಕ್ಷಣ ಬುದ್ಧಿಯಿಂದ ನೋಡಿದರೇ ರಾವಣನು ಶಿವಧನಸ್ಸನ್ನು ಎತ್ತಲಾರದೇ ಹೋಗಿದ್ದಾನೆಂದು ಹೇಳುವುದು ಪೂರ್ತಿ ಅಸತ್ಯವಾಗಿ ತಿಳಿಯುತ್ತಿದೆ. ರಾವಣನು ಶಿವಧನಸ್ಸನ್ನು ಎತ್ತಲಾರದೇ ಹೋಗಿದ್ದಾನೆನ್ನುವುದು ಪೂರ್ತಿ ಅಸತ್ಯವೆನ್ನುವುದಕ್ಕೆ ಎರಡು ಆಧಾರಗಳಿವೆ. ಸೀತೆ ಸ್ವಯಂವರಕ್ಕೆ ಮೊದಲು ಅಂದರೇ ಸುಮಾರು ಕೆಲವು ವರ್ಷಗಳ ಪೂರ್ವವು ರಾವಣನು ಕೈಲಾಸ ಪರ್ವತಕ್ಕೆ ಶಿವನ ದರ್ಶನಕ್ಕಾಗಿ ಹೋದಾಗ ಕೈಲಾಸ ಪರ್ವತವನ್ನು ಎತ್ತಿ ತನ್ನ ತಲೆಮೇಲೆ ಇಟ್ಟುಕೊಂಡಹಾಗೆ, ಆಗ ಶಿವನನ್ನು, ಶಿವಧನಸ್ಸನ್ನು ಎತ್ತಿದಹಾಗೆ ಬರೆದ ರಚನಕಾರರು ಸೀತೆ ಸ್ವಯಂವರದಲ್ಲಿ ಶಿವಧನಸ್ಸನ್ನು ಎತ್ತಲಿಲ್ಲ ಎನ್ನುವುದು ಅಸತ್ಯವನ್ನು ಬರೆದಂತೆ ಅಲ್ಲವೇ!? ಎರಡನೆಯ ಆಧಾರವೇನೆಂದರೆ! ಸೀತೆ ಎತ್ತಿರುವ ಶಿವಧನಸ್ಸನ್ನು ಎತ್ತಲಾರದವನು ಸೀತೆಯನ್ನು ಹೇಗೆ ಎತ್ತಿ ತನ್ನ

ವಿಮಾನದಲ್ಲಿ ಇಟ್ಟಿದ್ದಾನೆ? ಎನ್ನುವುದು ಪ್ರಶ್ನೆ ಆಗಬಹುದು. ಸೀತೆಯನ್ನು ಎತ್ತಿಕೊಂಡು ಹೋಗಿದ್ದಾನೆನ್ನುವುದು ಸತ್ಯವೇ ಆಗುವುದರಿಂದ ಶಿವಧನಸ್ಸನ್ನು ಎತ್ತಲಿಲ್ಲ ಎನ್ನುವುದು, ರಾವಣನು ಅಪಜಯ ಹೊಂದಿದ್ದಾನೆ ಎನ್ನುವುದು ಅಸತ್ಯ. ಇದನ್ನೆಲ್ಲವನ್ನೂ ನೋಡಿದರೇ ರಾವಣನನ್ನು ಕೆಟ್ಟವನಾಗಿ ಪ್ರಚಾರ ಮಾಡುವ ನಿಮಿತ್ತ ಸೀತೆ ಸ್ವಯಂವರದಲ್ಲಿ ರಾವಣನ ಪಾತ್ರವನ್ನು ಬರೆದಿದ್ದಾರೆ ಹೊರತು, ಅದು ಯಾವುದೂ ಸತ್ಯವಲ್ಲ ಎಂದು ತಿಳಿದುಹೋಗುತ್ತಿದೆ.

ರಾವಣನಿಗೆ ಪೂರ್ತಿ ಕೆಟ್ಟ ಹೆಸರು ತಂದಿರುವುದು 'ಕಾಡಿನಲ್ಲಿ ರಾಮನು ಇಲ್ಲದ ಸಮಯದಲ್ಲಿ ಸೀತೆಯನ್ನು ರಾವಣನು ಕರೆದುಕೊಂಡುಹೋಗಿ ಲಂಕದಲ್ಲಿ ಇಟ್ಟಿದ್ದಾನೆ' ಎನ್ನುವುದು. ಆ ಮಾತಿಗೆ ಬಂದರೇ ಅದು ನಡೆದಿರುವುದು ವಾಸ್ತವವೇ. ಆದರೇ ರಾವಣನು ಯಾವ ಸಂದರ್ಭದಲ್ಲಿ ಹಾಗೆ ಮಾಡಿದ್ದಾನೆ? ಯಾವ ವಯಸ್ಸಿನಲ್ಲಿ ಮಾಡಿದ್ದಾನೆ? ಏತಕ್ಕಾಗಿ ಮಾಡಿದ್ದಾನೆ? ಎಂದು ಆಲೋಚಿಸದೆ ನಡೆದ ಕಾರ್ಯವನ್ನು ಕೆಟ್ಟದಾಗಿ ಪ್ರಚಾರ ಮಾಡಿದ್ದಾರೆ. ರಾವಣನ ಮೇಲೆ ಕೋಪದಿಂದ ಅಂದಿನ ರಾಮಾಯಣವನ್ನು ಬರೆದವರು ರಾವಣನು ಸೀತೆಯನ್ನು ಕರೆದುಕೊಂಡು ಹೋಗುವುದನ್ನು ಪೂರ್ತಿ ಕೆಟ್ಟ ಕೆಲಸವಾಗಿ ಚಿತ್ರೀಕರಿಸಿ ಬರೆದಿದ್ದಾರೆ. ಆ ದಿನ ರಾವಣನು, ರಾಮನು ನಿವಾಸಿಸುವ ಕಾಡಿಗೆ ಬಂದಿರುವುದು ನಿಜವೇ ಆದರೂ, ರಾವಣನು ಮಾರುವೇಷದಲ್ಲಿ ಬರಲಿಲ್ಲ. ರಾವಣನು ರಾವಣನಾಗಿಯೇ ಬಂದಿದ್ದಾನೆ. ತಾನು ರಾವಣಬ್ರಹ್ಮನೆಂದು ಸೀತೆಗೆ ತಿಳಿಸಿದ್ದನು. ಸೀತೆಯನ್ನು ತನ್ನ ಪುತ್ರಿಯ ಹಾಗೆ ಲಂಕಕ್ಕೆ ಆಹ್ವಾನಿಸಿದನು. ನಂತರ ರಾಮನು ಕೂಡಾ ಲಂಕಗೆ ಬರುತ್ತಾನೆಂದು ಹೇಳಿ, ಸೀತೆಯನ್ನು ಒಪ್ಪಿಸಿ ಲಂಕಕ್ಕೆ ಕರೆದುಕೊಂಡು ಹೋದನು. ಸೀತೆ ಎತ್ತರದಲ್ಲಿರುವ ವಿಮಾನವನ್ನು ಹತ್ತಲಾರಳು ಎಂದು ಆಕೆಯನ್ನು ತಾಕದಂತೆ ಆಕೆ ನಿಂತುಕೊಂಡ ಮಣ್ಣಿನಗಡ್ಡೆ ಯೊಂದಿಗೆ ಸಹ ಎತ್ತಿ ತನ್ನ ವಿಮಾನದಲ್ಲಿ ಇಟ್ಟಿದ್ದನು. ಅಲ್ಲಿಂದ ನೇರವಾಗಿ ಲಂಕಕ್ಕೆ ಹೋದನು. ಲಂಕೆಯಲ್ಲಿ ಸೀತೆಗೆ ಯಾವ ಬಾಧೆ ಇಲ್ಲದಹಾಗೆ ಎಲ್ಲ ಸೌಕರ್ಯಗಳಿರುವ ಅಶೋಕವನದಲ್ಲಿ ಇಟ್ಟನು. ಸೀತೆಗೆ ಸೇವೆ ಮಾಡುವ

ನಿಮಿತ್ತ ಸುಮಾರು 20 ಜನ ಸ್ತ್ರೀಯರನ್ನು ಆಕೆ ಹತ್ತಿರವಿಟ್ಟನು. ತನ್ನ ನಗರಕ್ಕೆ ಸುಮಾರು ಎಂಟು ಕಿಲೋಮೀಟರುಗಳ ದೂರದಲ್ಲಿರುವ ಅಶೋಕವನಕ್ಕೆ ಹತ್ತು ದಿನಗಳಿಗೆ ಒಂದುಬಾರಿ ಸತಿಸಮೇತವಾಗಿ ಹೋಗಿ ಬರುತ್ತಿದ್ದನು. ಅಲ್ಲಿಗೆ ಹೋದ ರಾವಣನು ತಂದೆಯಹಾಗೆ ಸೀತೆಯನ್ನು ಮಾತನಾಡಿಸುತ್ತಿದ್ದನು. ರಾವಣನ ಹೆಂಡತಿ ಮಂಡೋಧರಿ ದೇವಿ ತನ್ನ ಗಂಡ ಸೀತೆಯನ್ನು ಕಾಡಿನಲ್ಲಿ ನೋಡಲಾರದೆ, ಅಲ್ಲಿ ಆಕೆ ಪಡುವ ಕಷ್ಟಗಳನ್ನು ನೋಡಲಾರದೆ ಸ್ವಲ್ಪಕಾಲ ವಾದರೂ ತನ್ನ ಸಮಕ್ಷಮದಲ್ಲಿ ಸುಖವಾಗಿ ಇರಬೇಕೆಂದು ಲಂಕೆಗೆ ತಂದಹಾಗೆ ಹೇಳುತ್ತಿದ್ದಳು. ಹೆತ್ತ ಮಗಳನ್ನು ಮಾತನಾಡಿಸಿದಹಾಗೆ ಮಾತನಾಡಿಸಿ ಅಲ್ಲಿರುವ ಸೇವಕಿಯರೆಲ್ಲರಿಗು ಸೀತೆಗೆ ಯಾವ ಕೊರತೆ ಇಲ್ಲದೆ, ಎಂತಹ ಅಸೌಕರ್ಯ ಉಂಟಾಗದೇ ನೋಡಿಕೊಳ್ಳಿರೆಂದು ಹೇಳಿ ಬರುತ್ತಿದ್ದರು. ಅಲ್ಲಿಯವರೆಗು ಕಾಡಲ್ಲಿ ಸಿಕ್ಕ ಹಣ್ಣು ಹಂಪಲುಗಳು, ಕಂದಗಡ್ಡೆಗಳು ತಿಂದ ಸೀತೆ, ಕೆಲವು ಸಮಯದಲ್ಲಿ ಕಾಯಾಗಲೀ, ಭೂಮಿಯಲ್ಲಿ ದೊರೆಯುವ ಗಡ್ಡೆಗಳಾಗಲೀ ದೊರೆಯದ ಸಮಯದಲ್ಲಿ ಎಷ್ಟೋ ಹೊತ್ತು ಉಪವಾಸ ಕಳೆದ ಸೀತೆ, ರಾವಣನ ಸಮಕ್ಷಮದಲ್ಲಿ ಲಂಕೆಯಲ್ಲಿ ಹೊಟ್ಟೆ ತುಂಬಾ ರುಚಿಕರವಾದ ಆಹಾರ ತಿನ್ನುತ್ತಿದ್ದಳು. ರಾವಣನ ಬಳಿಯಿದ್ದ ಹತ್ತು ತಿಂಗಳ ಕಾಲ ಸೀತೆ ಯಾವ ಕಷ್ಟಕ್ಕು ಗುರಿಯಾಗಲಿಲ್ಲ. ತವರು ಮನೆಯಲ್ಲಿ ಇದ್ದ ಹಾಗೆ ಇದ್ದಳು.

**ಪ್ರಶ್ನೆ :– ನೀವು ಹೇಳುವ ವಿಷಯವು ಇಲ್ಲಿಯವರೆಗು ಯಾರೂ ಹೇಳಲಿಲ್ಲ. ನೀವು ಹೇಳುವ ವಿಷಯ ಸ್ವಲ್ಪಮಟ್ಟಿಗೆ ಸತ್ಯವಾಗಿಯೇ ಕಾಣಿಸುತ್ತಿದೆ. ಇದಕ್ಕು ಮೊದಲು ನಾವು ಕೇಳಿರುವುದೆಲ್ಲ. ಅಸತ್ಯವೇಯೆಂದು ತೋಚುತ್ತಿದೆ. ಆದರೂ ಒಂದು ಪ್ರಶ್ನೆಯನ್ನು ನಾವು ಕೇಳುವುದು ತಪ್ಪುವುದಿಲ್ಲ. ರಾವಣನು, ರಾಮನು ಇಲ್ಲದ ಸಮಯದಲ್ಲಿ ಸೀತೆಯನ್ನು ಕರೆದುಕೊಂಡುಹೋಗುವುದು ಯಾಕೆ?**

**ಉತ್ತರ :–** ರಾಮನನ್ನು ತನ್ನ ಲಂಕಕ್ಕೆ ಸೀತೆಯನ್ನು ಕಳುಹಿಸೆಂದು ಕೇಳಿದರೇ ರಾಮನು ಸೀತೆಯನ್ನು ಕಳುಹಿಸುವುದಿಲ್ಲ ಎಂಬ ಉದ್ದೇಶದಿಂದ ರಾಮನಿಗೆ ಹೇಳದೇ ರಾವಣನು ಸೀತೆಯನ್ನು ಲಂಕಕ್ಕೆ ಕರೆದುಕೊಂಡುಹೋದನು.

**ಪ್ರಶ್ನೆ :– ಸೀತೆ ಮೇಲಿನ ಕಾಮಗುಣದಿಂದ ಸೀತೆಯನ್ನು ಅನುಭವಿಸಬೇಕೆಂಬ ಕೆಟ್ಟ ಬುದ್ಧಿಯಿಂದ, ರಾವಣನು ಕಳ್ಳನಂತೆ ಬಂದು ಬಲವಂತವಾಗಿ ಸೀತೆಯನ್ನು ಎತ್ತಿಕೊಂಡು ಹೋಗಿದ್ದಾನೆಂದು ಎಲ್ಲರೂ ಹೇಳುತ್ತಿದ್ದಾರೆ. ರಾಮಾಯಣ ಚರಿತ್ರೆಯಲ್ಲಿ ಕೂಡಾ ಹಾಗೆಯೇ ಬರೆದಿದ್ದಾರೆ. ಇದಕ್ಕೆ ನೀವೇನು ಹೇಳುತ್ತೀರಿ?**

**ಉತ್ತರ :–** ಕೇಳುವ ಪ್ರಶ್ನೆ ಹೇಗಾದರೂ ಇರಬಹುದು. ಹೇಳುವ ಉತ್ತರ ಸಕ್ರಮವಾಗಿ ಇರಬೇಕೆನ್ನುವುದು ನನ್ನ ಉದ್ದೇಶ. ಯಾರ ಚಿಂತೆ ಅವರದು ಎಂದಂತೆ ಅವರು ಪ್ರಶ್ನೆಯನ್ನು ಕೇಳಬಹುದು ಅದಕ್ಕೆ ನಾನು ಸಮಾಧಾನವನ್ನು ಹೇಳುತ್ತಿದ್ದೇನೆ. ಆ ದಿನ ರಾಮಾಯಣ ಚರಿತ್ರೆಯನ್ನು ಬರೆದಿರುವ ರಚನಕಾರರು ಮೊದಲೇ ಒಂದು ನಿರ್ಣಯದಿಂದ ಇದ್ದು ರಾಮಾಯಣವನ್ನು ಬರೆಯುವುದು ನಡೆದಿದೆ. ರಾವಣನನ್ನು ಕೆಟ್ಟದಾಗಿ ಚಿತ್ರಿಸಿ, ಪ್ರಜೆಗಳಲ್ಲಿ ದುರ್ಮಾರ್ಗನನ್ನಾಗಿ ತೋರಿಸಬೇಕೆಂಬ ನಿರ್ಣಯದಿಂದ ಸತ್ಯವನ್ನು ಅಸತ್ಯವಾಗಿ ವಕ್ರೀಕರಿಸಿ ಬರೆದಿರುವುದೇ ರಾಮಾಯಣವು. ರಾಮಾಯಣ ಎಂಬ ಹೆಸರಿನಲ್ಲೇ ಆ ವಿಷಯವು ಕಾಣಿಸುತ್ತಿದೆ. **ರಾಮ ಎಂದರೇ ಅಯೋಧ್ಯ ರಾಮನು ಎಂದು, ಆಯಣ ಎಂದರೇ ಒಂದುಕಡೆ ಎಂದು ಹೇಳಬಹುದು. ರಾಮ+ಆಯಣ= ರಾಮಾಯಣ ಅಂದರೇ ರಾಮನ ಕಡೆ ಹೇಳಿರುವುದೆಂದು ಅರ್ಥ**. ಅಂದರೇ ರಾಮನನ್ನು ಒಳ್ಳೆಯದಾಗಿ, ರಾಮನ ಕಡೆ ಹೇಳಿರುವುದೆಂದು ಅರ್ಥ. ರಾಮನನ್ನು ಒಳ್ಳೆಯದಾಗಿ ಹೇಳಿದರೇ ರಾಮನೊಂದಿಗೆ ಯುದ್ಧ ಮಾಡಿದ ರಾವಣನನ್ನು ಕುರಿತು ಕೆಟ್ಟದಾಗಿ ಹೇಳಿದ್ದಾರೆ.

ಸೀತೆ ಮೇಲೆ ಕೆಟ್ಟ ಉದ್ದೇಶದಿಂದ ಆಕೆಯನ್ನು ಅನುಭವಿಸಬೇಕೆಂದು ಲಂಕಕ್ಕೆ ಸೀತೆಯನ್ನು ಎತ್ತಿಕೊಂಡು ಹೋಗಿದ್ದಾನೆಂದು ಹೇಳುವುದು ಪೂರ್ತಿ ಅಸತ್ಯವೆಂದು ಹೇಳೋದು ತಪ್ಪುವುದಿಲ್ಲ. ಏಕೆಂದರೇ! ಸೀತೆಯನ್ನು ರಾವಣನು ಕರೆದುಕೊಂಡು ಹೋದಾಗ ರಾವಣನ ವಯಸ್ಸು ಸುಮಾರು 99 ವರ್ಷಗಳು. ಆ ವಯಸ್ಸಿನಲ್ಲಿ ಆತನಿಗೆ ಕೆಟ್ಟ ಬುದ್ಧಿ, ಕಾಮಗುಣ ಇದೆಯೆಂದು ಹೇಳಿಕೊಳ್ಳುವುದು

ಪೂರ್ತಿ ಅಸತ್ಯ. ಹೇಳುವವರು ಹೇಗಾದರೂ ಹೇಳಬಹುದು. ಕೇಳುವವರಿಗೆ ವಿಚಕ್ಷಣೆ ಇರಬೇಕು. ರಾವಣನು ಮಹಾಬಲಶಾಲಿ ಆಗಿರುವುದರಿಂದ ಸೀತೆ ಎತ್ತರವಾದ ಪುಷ್ಪಕ ವಿಮಾನವನ್ನು ಹತ್ತಲಾರದೇ ಹೋದರೆ, ಸೀತೆಗೆ ಅಸೌಕರ್ಯ ಉಂಟಾಗದಂತೆ ಮಣ್ಣಿನಗಡ್ಡೆಯೊಂದಿಗೆ ಸಹ ವಿಮಾನದಲ್ಲಿ ಇಟ್ಟಿದ್ದಾ. ಅದನ್ನು ಕೂಡಾ ಕೆಟ್ಟದಾಗಿ ಚಿತ್ರೀಕರಿಸಿ ಸೀತೆಯನ್ನು ಮುಟ್ಟಿಕೊಂಡರೇ ರಾವಣನು ಸತ್ತುಹೋಗುತ್ತಾನೆಂದು, ಸುಟ್ಟುಹೋಗುತ್ತಾನೆಂದು ಆಕೆಯನ್ನು ಮುಟ್ಟಿಕೊಳ್ಳದೇ ಮಣ್ಣಿನ ಗಡ್ಡೆಯೊಂದಿಗೆ ಸಹ ಎತ್ತಿಕೊಂಡು ಹೋಗಿದ್ದಾನೆಂದು ಹೇಳುತ್ತಿರುತ್ತಾರೆ. ರಾವಣನು ಸೀತೆಯನ್ನು ಮುಟ್ಟಿಕೊಂಡರೇ ಸುಟ್ಟಿಹೋಗುವಾಗ, ಸೀತೆಯನ್ನು ಅನುಭವಿಸಬೇಕೆಂದು ಹೇಗೆ ಕರೆದುಕೊಂಡುಹೋಗುತ್ತಾನೆ? ಎಂಬ ಪ್ರಶ್ನೆಗೆ ಯಾರೂ ಉತ್ತರ ಹೇಳಲಾರರು. ರಾವಣನು ಸೀತೆಯನ್ನು ಲಂಕಕ್ಕೆ ಕರೆದುಕೊಂಡು ಬರುತ್ತೇನೆಂದು ತನ್ನ ಹೆಂಡತಿಯಾದ ಮಂಡೋದರಿ ದೇವಿಗೆ ಮೊದಲೇ ಹೇಳಿ ಬಂದಿದ್ದನು. ತನ್ನ ಸಾವು ರಾಮನ ಕೈಯಲ್ಲಿ ನಡೆಯಬೇಕೆಂದು, ತನ್ನ ಮರಣವು ಖಚಿತವಾಗಿ 100 ವರ್ಷಗಳಿಗೆ ಲಂಕೆಯಲ್ಲಿಯೇ ನಡೆಯುವುದೆಂದೂ, ತಾನು ಸಾಮಾನ್ಯ ಮಾನವನೇಯೆಂದು ಎಲ್ಲರೂ ತಿಳಿಯುವಂತೆ, ರಾಮನ ಕೈಯಲ್ಲಿ ತನ್ನ ಮರಣ ನಡೆಯುವುದೆಂದು ಮೊದಲೇ ತನ್ನ ಹೆಂಡತಿಗೆ ಹೇಳಿದ್ದಾನೆ. ರಾವಣನು ತನ್ನ ಕೈಯಲ್ಲಿ ಸಾಯುತ್ತಾನೆಂದು ರಾಮನಿಗೆ ತಿಳಿಯದು ಆದರೇ, ರಾಮನ ಕೈಯಲ್ಲಿ ಸಾಯುತ್ತೇನೆಂದು ಮೊದಲೇ ರಾವಣನಿಗೆ ತಿಳಿದಿತ್ತು. ಅಷ್ಟೇ ಅಲ್ಲದೇ ತನ್ನ ರಾವಣ ಜನ್ಮದ ನಂತರ ಬರುವ ಉಳಿದ ಎರಡು ಜನ್ಮಗಳು ರಕ್ತಪಾತದಿಂದಲೇ ಮರಣಿಸಬೇಕಾಗಿದೆ. ಆದ್ದರಿಂದ ತನ್ನ ಮೊದಲ ಜನ್ಮವಾದ ರಾವಣ ಜನ್ಮ ರಕ್ತಪಾತದಿಂದಲೇ ನಡೆಯುವಾಗ, ಅದನ್ನು ಅನುಸರಿಸಿ ಅದರಹಾಗೆ ಆಯುಧಗಳಿಂದಲೇ ರಕ್ತಪಾತ ನಡೆದು ಉಳಿದ ಎರಡು ಜನ್ಮಗಳು ಮರಣ ಹೊಂದಬೇಕಾಗಿದೆ. ಆದ್ದರಿಂದ ರಾಮನ ಕೈ ಬಾಣ ಚುಚ್ಚಿಕೊಂಡು, ರಕ್ತ ಹೊರಗೆ ಬರುವುದರಿಂದ ಮರಣಿಸುತ್ತೇನೆಂದು ತ್ರಿಕಾಲ ಜ್ಞಾನಿಯಾದ ರಾವಣನು ಮುಂದೆ ನಡೆಯುವ ಸಮಾಚಾರವನ್ನು ಮೊದಲೇ ತನ್ನ ಹೆಂಡತಿಗೆ ಹೇಳಿದ್ದಾನೆ.

**ಪ್ರಶ್ನೆ :– ಈ ವಿಷಯವನ್ನು ರಾಮಾಯಣದಲ್ಲಿ ಎಲ್ಲೂ ಬರೆಯಲಿಲ್ಲವೇ?**

**ಉತ್ತರ :–** ರಾವಣನನ್ನು ಕೆಟ್ಟದಾಗಿ ಹೇಳುವುದೇ ರಾಮಾಯಣ (ರಾಮನ ಕಡೆ) ಉದ್ದೇಶವಾಗಿರುವಾಗ ನಡೆದ ಸತ್ಯವನ್ನು ಯಾಕೆ ಹೇಳುತ್ತಾರೆ? ಸತ್ಯವನ್ನು ಕೂಡಾ ಅಸತ್ಯವಾಗಿ ಹೇಳುವುದೇ ರಾಮಾಯಣ. ಅದರಲ್ಲಿ ರಾವಣಾಯಣ ಸ್ವಲ್ಪವಾದರೂ ಇಲ್ಲ. ಆದ್ದರಿಂದ ರಾವಣನನ್ನು ಕುರಿತು ಹೇಳಿರುವ ಅಸತ್ಯಗಳೇ ಅದರಲ್ಲಿ ಇವೆ. ಚೆನ್ನಾಗಿ ಅರ್ಥವಾಗಬೇಕೆಂದರೇ ರಾಮಾಯಣವನ್ನು ಕುರಿತು ಮತ್ತೊಂದುಬಾರಿ ಹೇಳುವೆನು ಕೇಳು. ಉತ್ತರಾಯಣ, ದಕ್ಷಿಣಾಯಣದ ಹಾಗೆ ರಾಮಾಯಣವಿದೆ. 'ಆಯಣ' ಎಂದರೇ 'ಒಂದು ಕಡೆಯೆಂದು' ಅರ್ಥ ಹೇಳಿಕೊಂಡಿದ್ದೇವೆ. ಉತ್ತರಾಯಣ ಎಂದರೇ ಉತ್ತರದ ಕಡೆಯೆಂದು, ದಕ್ಷಿಣಾಯಣ ಎಂದರೇ ದಕ್ಷಿಣದ ಕಡೆಯೆಂದು ಹೇಳಬಹುದು. ಸೂರ್ಯನು ಉತ್ತರದ ಕಡೆ ಇರುವಾಗ ಉತ್ತರಾಯಣ ಎಂದೂ, ಸೂರ್ಯನು ದಕ್ಷಿಣದ ಕಡೆ ಇರುವಾಗ ದಕ್ಷಿಣಾಯಣ ಎಂದೂ ಹೇಳಿದಹಾಗೆ, ಗ್ರಂಥಕರ್ತ ರಾಮನ ಕಡೆ ಇರುವವನಾಗಿ ರಾಮನನ್ನು ಒಳ್ಳೆಯದಾಗಿ ಹೇಳುತ್ತಾ, ರಾಮನ ಕಡೆಗೇ ಗ್ರಂಥ ಪ್ರಶಂಸಿಸಿದಹಾಗೆ ಹೇಳುವುದನ್ನು 'ರಾಮಾಯಣ' ಎಂದು ಹೇಳೋದು ತಪ್ಪೋಲ್ಲ. ರಾಮಾಯಣದಲ್ಲಿ ಒಂದು ಕಡೆ ಪ್ರಶಂಸೆ ಹೊರತು ಎರಡೂ ಕಡೆ ಸಮಾನವಾಗಿ ಇದ್ದದ್ದನ್ನು ಇದ್ದಹಾಗೆ ಬರೆಯಲಿಲ್ಲ. ರಾವಣನು ಎಷ್ಟೋ ದೊಡ್ಡ ಕೆಲಸಗಳನ್ನು ಮಾಡಿದರೂ ಅವೆಲ್ಲವೂ ಕೆಟ್ಟ ಕೆಲಸಗಳಾಗಿ ವಕ್ರೀಕರಿಸಿ, ರಾಮನು ಮಾಡಿರುವ ಕೆಲಸಗಳನ್ನು ಮಾತ್ರ ಪ್ರಶಂಸಿಸಿ ಬರೆಯುವು ದನ್ನು ನಾಳೆ ಯಾರಾದರೂ ತಪ್ಪು ಹಿಡಿಯುತ್ತಾರೆಂದು ಮೊದಲೇ ನಾವು ರಾಮನ ಕಡೆಗೇ ಬರೆದಿದ್ದೇವೆ ಎಂದಂತೆ ಗ್ರಂಥದ ಹೆಸರು 'ರಾಮಾಯಣ' ಎಂದು ಇಟ್ಟಿದ್ದಾರೆ. ಇಲ್ಲಿಯವರೆಗೂ ರಾಮಾಯಣ ಗ್ರಂಥದ ಹೆಸರಿನಲ್ಲಿ ಇಷ್ಟು ರಹಸ್ಯವಿರುವಹಾಗೆ ಯಾರಿಗೂ ತಿಳಿದಿಲ್ಲ. ರಾವಣನು ಯಾವ ಒಳ್ಳೆಯ ಕೆಲಸವನ್ನು ಮಾಡಿದರೂ ಅದು ಕೆಟ್ಟದಾಗಿ, ಹಾಗೆಯೇ ರಾಮನು ಯಾವ ಕೆಟ್ಟ ಕೆಲಸ ಮಾಡಿದರೂ ಅದನ್ನು ಒಳ್ಳೆಯದಾಗಿ ವರ್ಣಿಸಿ ಹೇಳಿರುವುದೇ ರಾಮಾಯಣ.

ಸೂರ್ಯನಿಗೆ ಉತ್ತರ, ದಕ್ಷಿಣ ಎರಡೂ ಸಮಾನವೇ. ಆದ್ದರಿಂದ ಉತ್ತರಾಯಣದಲ್ಲಿ ಸ್ವಲ್ಪಕಾಲ, ನಂತರ ದಕ್ಷಿಣಾಯಣದಲ್ಲಿ ಸ್ವಲ್ಪ ಕಾಲ ಇರುತ್ತಿದ್ದಾನೆ. ಸೂರ್ಯನು ಉತ್ತರಾಯಣದಲ್ಲಿ ಇರುವಾಗ ದಕ್ಷಿಣವು ಕೆಟ್ಟದೆಂದು ಹೇಳಲಿಲ್ಲ. ದಕ್ಷಿಣದ ಕಡೆ ಹೋಗದೇ ಇರುವುದಿಲ್ಲ. ಹಾಗೆಯೇ ರಾಮನ ಕಡೆ ಗ್ರಂಥಕರ್ತ ಹೇಳಿದಾಗ ರಾಮನನ್ನು ಕುರಿತಾದ ಒಳ್ಳೆಯ ವಿಷಯಗಳು ಮಾತ್ರವೇ ಹೇಳದೇ ರಾವಣನ ಕೆಟ್ಟ ವಿಷಯಗಳನ್ನು ಹೇಳುವುದರಿಂದ ರಾಮಾಯಣವು ಪಕ್ಷಪಾತ ವೈಖರಿಯಿಂದ ಬರೆದಿರುವುದೇ ಹೊರತು ಇದ್ದದ್ದನ್ನು ಇದ್ದಹಾಗೆ ಬರೆಯಲಿಲ್ಲ. ರಾಮನನ್ನು ದೇವರನ್ನಾಗಿ ವರ್ಣಿಸಿ ಹೇಳಿದ್ದಾರೆ. ಅದಕ್ಕೆ ಯಾರೂ ಅಲ್ಲಗಳೆಯಲಾರರು. ಅಷ್ಟಕ್ಕೇ ನಿಲ್ಲದೇ ರಾವಣನನ್ನು ರಾಕ್ಷಸನನ್ನಾಗಿ ವರ್ಣಿಸಿ ಹೇಳಿದ್ದಾರೆ. ರಾವಣನನ್ನು ಕುರಿತು ಹಾಗೆ ಹೇಳಬೇಕಾದ ಅವಶ್ಯಕತೆ ಇಲ್ಲ, ಆದರೂ ರಾವಣನನ್ನು ಕೆಟ್ಟದಾಗಿ, ರಾಮನನ್ನು ಒಳ್ಳೆಯದಾಗಿ ಹೇಳುವುದರಿಂದ ಒಂದುಕಡೆ ಪ್ರಶಂಸೆ ಹೊರತು ಬೇರೆ ಇಲ್ಲದಿರುವುದರಿಂದ ಗ್ರಂಥದ ಹೆಸರು ರಾಮಾಯಣವಾಗಿ ಹೇಳಿದ್ದಾರೆ. ನಾವು ರಾಮನನ್ನು ಕೆಟ್ಟದಾಗಿ ಹೇಳದೇ ಎಲ್ಲರೂ ರಾಮನನ್ನು ದೇವರೆನ್ನುವುದನ್ನು ಅಲ್ಲಗಳೆಯದೇ, ರಾವಣನನ್ನು ಕುರಿತು ಮಾತ್ರ ಬರೆಯುತ್ತಿದ್ದೇವೆ. ಸತ್ಯಾಸತ್ಯಗಳನ್ನು ತಿಳಿಸುವ ನಿಮಿತ್ತ ಈ ಗ್ರಂಥವನ್ನು ಬರೆಯುತ್ತಿದ್ದೇವೆ. ಆದಕಾರಣ ಇತರರಿಗೆ ತಿಳಿಯದ ಎಷ್ಟೋ ವಿಷಯಗಳನ್ನು ನಾವು ಹೇಳಬೇಕಾಗಿ ಬಂದಿದೆ. ರಾವಣನು ತನ್ನ ಮರಣವನ್ನು ಕುರಿತು ಮೊದಲೇ ತಿಳಿಸಿದ್ದಾನೆ. ಅಷ್ಟೇಅಲ್ಲದೇ ತನ್ನ ಆಯುಸ್ಸು ನೂರು ವರ್ಷಗಳೆಂದು ಕೂಡಾ ಹೇಳಿದ್ದಾನೆ. ಇವು ಯಾರಿಗೂ ತಿಳಿಯದ ವಿಷಯಗಳೇ. ಆದ್ದರಿಂದ ನಾನು ಆ ವಿಷಯಗಳನ್ನು ಹೊರಗಿಡಬೇಕಾಗಿ ಬಂದಿದೆ. ಯಾರಿಗೂ ತಿಳಿಯದ ವಿಷಯಗಳಿದ್ದರೇನೇ ನಾನು ಗ್ರಂಥವನ್ನು ಬರೆಯುತ್ತೇನೆ ಆದರೇ, ತಿಳಿದ ವಿಷಯಗಳಿದ್ದರೇ ನಾನು ಪ್ರತ್ಯೇಕಿಸಿ ರಾಮನನ್ನು ಕುರಿತು ಗ್ರಂಥವನ್ನು ಬರೆಯಬೇಕಾದ ಅವಶ್ಯವಿಲ್ಲ. ನನ್ನಿಂದ ಬರೆಯಲ್ಪಟ್ಟ ಪ್ರತೀ ಗ್ರಂಥವು ಸ್ವಲ್ಪ ಪ್ರತ್ಯೇಕತೆಯನ್ನು ಹೊಂದಿ, ಯಾರಿಗೂ ತಿಳಿಯದ ಹೊಸ ವಿಷಯಗಳನ್ನು ಹೇಳುತ್ತಿರುವೆನು. ಆದ್ದರಿಂದ ಸೀತೆ ವಿಷಯದಲ್ಲಾಗಲೀ, ರಾವಣನ ವಿಷಯ

ದಲ್ಲಾಗಲೀ ಇಲ್ಲಿನಯರೆಗೂ ಯಾರಿಗೂ ತಿಳಿಯದ ಹೊಸ ಕೋನಗಳನ್ನು ತಿಳಿಸುತ್ತಿದ್ದೇನೆ. ಆ ಪದ್ಧತಿ ಪ್ರಕಾರ **"ರಾವಣನ ಮರಣವು"** ಪೂರ್ತಿ ಪ್ರತ್ಯೇಕತೆಯನ್ನು ಹೊಂದಿದೆ. ರಾವಣನು ತ್ರೇತಾಯುಗದಲ್ಲಿಯೇ ಅಲ್ಲದೇ ದ್ವಾಪರ ಯುಗದಲ್ಲಿಯೂ, ಕಲಿಯುಗದಲ್ಲಿಯೂ ಹುಟ್ಟಬೇಕಾಗಿದೆ. ಹಾಗೆ ಹುಟ್ಟುವಾಗ ಕೂಡಾ ಆತನ ಮರಣವು ದ್ವಾಪರ, ಕಲಿಯುಗಗಳಲ್ಲಿ ಕೂಡಾ ಪ್ರತ್ಯೇಕತೆ ಹೊಂದಿದೆ. ರಾವಣನು ನಂತರ ಹುಟ್ಟುವನೆಂದು ಎಲ್ಲರಿಗೂ ಹೊಸದಾಗಿ, ಕಣ್ತೆರೆಸಿದಂತೆ ಇದ್ದರೂ ನಮ್ಮ ಮಾತು ನೂರಕ್ಕೆ ನೂರು ಪಾಲು ಸತ್ಯ.

**ಪ್ರಶ್ನೆ :– ರಾಮನು ದೇವರು ಆದಕಾರಣ ಆತನು ನಂತರ ಯುಗಗಳಲ್ಲಿ ಅವತರಿಸಬಹುದು. ಆದರೇ ರಾವಣನು ನಂತರ ಅವತರಿಸಿದ್ದಾನೆ ಎನ್ನುವುದು ನಮಗೆ ಅಸತ್ಯವಾಗಿ ಕಾಣಿಸುತ್ತಿದೆ. ರಾಮನು ನಂತರ ಜನ್ಮದಲ್ಲಿ ಕೃಷ್ಣನಾಗಿ ಹುಟ್ಟಿದ್ದಾನೆ ಎಂದು ಎಲ್ಲರೂ ಹೇಳುತ್ತಿರುತ್ತಾರೆ. ದ್ವಾಪರ ಯುಗದಲ್ಲಿ ಕೃಷ್ಣನಾಗಿ ಹುಟ್ಟಿರುವ ರಾಮನು, ಕಲಿಯುಗದಲ್ಲಿ ಕಲ್ಕಿ ಭಗವಾನ್‌ಆಗಿ ಹುಟ್ಟುವನೆಂದು ಪುರಾಣಗಳಲ್ಲಿ ಹೇಳಿದ್ದಾರೆ. ವಿಷ್ಣುವಿನ ದಶಾವತಾರಗಳಲ್ಲಿ ರಾಮನು, ಕೃಷ್ಣನು, ಕಲ್ಕಿ ಎಂದು ಪುರಾಣಗಳಲ್ಲಿ ಹೇಳಲಾಗಿದೆ. ಆದ್ದರಿಂದ ರಾಮನು ದ್ವಾಪರ ಯುಗದಲ್ಲಿ ಕೃಷ್ಣನಾಗಿ ಹುಟ್ಟಿದ್ದಾನೆಂದು, ಕಲಿಯುಗದಲ್ಲಿ ಕಲ್ಕಿಯಾಗಿ ಹುಟ್ಟುವನೆಂದು ನಾವು ಕೇಳಿದ್ದೇವೆ. ಅಷ್ಟೇ ಹೊರತು ರಾವಣನು ದ್ವಾಪರ, ಕಲಿಯುಗಗಳಲ್ಲಿ ಹುಟ್ಟುವನೆಂದು ನೀವು ಹೊರತುಪಡಿಸಿ ಯಾರೂ ಹೇಳಲಿಲ್ಲ. ಯಾವ ಗ್ರಂಥದಲ್ಲಿಯೂ ಬರೆಯಲಿಲ್ಲ. ನಿಮ್ಮ ಮಾತನ್ನು ನಾವು ಹೇಗೆ ನಂಬಬೇಕು?**

**ಉತ್ತರ :–** ನಾನು ನನ್ನ ಮಾತನ್ನು ನಂಬಬೇಕೆಂದು ಎಲ್ಲೂ ಹೇಳಲಿಲ್ಲ. ಯಾರು ನಂಬಿದರೂ, ನಂಬದೇ ಹೋದರೂ ಸತ್ಯವನ್ನು ತಿಳಿಸುತ್ತೇನೆಂದು ಹೇಳುತ್ತಾ ನಡೆದಿರುವ ಸತ್ಯವನ್ನು ತಿಳಿಸಿದ್ದೇನೆ. ಗತದಲ್ಲಿ ಕೂಡಾ ಯಾರ ಊಹೆಗು ತಿಳಿಯದ ಕೆಲವು ದೈವ ರಹಸ್ಯಗಳನ್ನು ಕೂಡಾ ತಿಳಿಸುವುದು

ನಡೆದಿದೆ. ನಮ್ಮ ರಚನೆಗಳಲ್ಲಿನ **"ಕೃಷ್ಣ ಮೂಸ"** ಗ್ರಂಥದಲ್ಲಿ ಎಷ್ಟೋ ಬ್ರಹ್ಮರಹಸ್ಯಗಳನ್ನು ತಿಳಿಸಿದ್ದೇವೆ. ನೀವು ವಿಷ್ಣುವಿನ ದಶಾವತಾರಗಳನ್ನು ತಿಳಿಸಿದ್ದೀರಿ. ನಾನು ದೇವರ ಒಂದು ಅವತಾರಗಳನ್ನು ಕುರಿತು ತಿಳಿಸುತ್ತಿದ್ದೇನೆ. ದೇವರಿಗೆ ಎಷ್ಟು ಅವತಾರಗಳೋ ಮೊದಲು ಹೇಳುವುದಕ್ಕೆ ಸಾಧ್ಯವಿಲ್ಲ. ಏಕೆಂದರೇ! ದೇವರು ಭೂಮಿಮೇಲೆ ಧರ್ಮಗಳಿಗೆ ಮುಪ್ಪು ಏರ್ಪಟ್ಟಾಗ ಅವತರಿಸುತ್ತಾನೆ. ಆದ್ದರಿಂದ ದೇವರಿಗೆ ಇಷ್ಟು ಅವತಾರಗಳೆಂದು ಹೇಳಲಾರೆವು.

**ಪ್ರಶ್ನೆ :– ನೀವು ರಾವಣನನ್ನು ದೇವರೊಂದಿಗೆ ಸಮಾನವಾಗಿ ಹೇಳುತ್ತಿದ್ದೀರಿ ಅಲ್ಲವೇ! ರಾಮನು ಲಂಕಕ್ಕೆ ಬಂದಾಗ ಆತನು ಸೀತೆಯನ್ನು ರಾಮನಿಗೆ ಒಪ್ಪಿಸದೆ ರಾಮನೊಂದಿಗೆ ಯುದ್ಧ ಯಾಕೆ ಮಾಡಿದ್ದಾನೆ?**

**ಉತ್ತರ :–** ಸೀತೆಗಾಗಿ ರಾಮನು ಲಂಕಕ್ಕೆ ಬರಬೇಕೆಂದು, ತನ್ನೊಂದಿಗೆ ಯುದ್ಧ ಮಾಡಬೇಕೆಂದು, ಆ ಯುದ್ಧದಲ್ಲಿ ತಾನು ಮರಣಿಸುತ್ತೇನೆಂದು ಮೊದಲೇ ಭವಿಷ್ಯತ್ತನ್ನು ರಾವಣನು ಹೇಳಿದ್ದಾನೆ. ತ್ರಿಕಾಲ ಜ್ಞಾನಿಯಾದ ರಾವಣನು ದೊಡ್ಡ ಜ್ಯೋತಿಷ್ಯನು. ಆತನನ್ನು ಮೀರಿದ ಜ್ಯೋತಿಷ್ಯನು ಇಲ್ಲ. ಆದ್ದರಿಂದ ಸೀತೆಯನ್ನು ನೆಪವಾಗಿ ತೋರಿಸಿ ಯಾವುದೋ ಒಂದು ಕಾರಣದಿಂದ ರಾಮನೊಂದಿಗೆ ಯುದ್ಧ ಮಾಡಿದ್ದಾನೆ. ರಾಮನ ಕೈಯಲ್ಲಿ ಮರಣಿಸಿದಂತೆ ಲೋಕಕ್ಕೆ ತಿಳಿಯುವಂತೆ ಮಾಡಿದ್ದಾನೆ. ರಾವಣನು ರಾಮನ ಕೈಯಲ್ಲಿ ಮರಣಿಸಿರುವುದರಿಂದ ರಾಮನೇ ಹೆಚ್ಚೆಂದೂ, ರಾವಣನು ಕಡಿಮೆಯೆಂದು ಪ್ರಜೆಗಳಿಗೆ ತಿಳಿದಿದೆ. ರಾವಣನು ತನ್ನನ್ನು ಕುರಿತು ಕಡಿಮೆ ಮಾಡಿಕೊಂಡು ರಾಮನ ಕೈಯಲ್ಲಿ ಮರಣಿಸುವುದು ರಾಮಾಯಣಕ್ಕೆ ದೊಡ್ಡ ಅವಕಾಶ ಸಿಕ್ಕಿದೆ. ಅದರಿಂದ ರಾವಣನನ್ನು ದುರ್ಮಾರ್ಗನನ್ನಾಗಿ ಚಿತ್ರಿಸಿದ್ದಾರೆ.

**ಪ್ರಶ್ನೆ :– ಸೀತೆಯನ್ನು ರಾಮನಿಗೆ ಒಪ್ಪಿಸದೆ ಸೀತೆಗಾಗಿ ಯುದ್ಧಕ್ಕೆ ಸಜ್ಜಾಗುವುದು ದುರ್ಮಾರ್ಗ ಅಲ್ಲವೇ?**

**ಉತ್ತರ :–** ರಾಮನು ಗಂಡನಾದ್ದರಿಂದ ರಾವಣ ಯುದ್ಧದ ನಂತರ ಸೀತೆ

ರಾಮನ ಹಿಂದೆಬಂದಿದ್ದಾಳೆ. ರಾಮನನ್ನು ಕುರಿತು ಸೀತೆ ಸ್ವಲ್ಪವೂ ಅನುಮಾನಪಡಲಿಲ್ಲ. ಆದರೇ ರಾಮನು ಸೀತೆಯನ್ನು ಅನುಮಾನಿಸಿ ಅಗ್ನಿ ಪರೀಕ್ಷೆ ಮಾಡಿಸಿದನು. ಸೀತೆಯನ್ನು ಅಗ್ನಿ ಪರೀಕ್ಷೆಗೆ ಗುರಿಮಾಡಿದಾಗ ತನ್ನ ಗಂಡನಿಗೆ ತನ್ನಮೇಲೆ ನಂಬಿಕೆ ಇಲ್ಲವಲ್ಲ ಎಂದು ಸೀತೆ ಎಷ್ಟೋ ಬಾಧೆಪಟ್ಟಿದ್ದಾಳೆ. ತನ್ನನ್ನು ಮಗಳಂತೆ ಎಂತಹ ಕೊರತೆ ಇಲ್ಲದೇ ನೋಡಿಕೊಂಡ ರಾವಣನು ಮರಣಿಸಿರುವುದರಿಂದ ಸೀತೆ ಬಹಳ ಬಾಧೆಪಟ್ಟು ತಪ್ಪದೇ ರಾಮನಹಿಂದೆ ಬಂದಿದ್ದಾಳೆ. ಹಾಗೆ ರಾಮನ ಹಿಂದೆ ಬಂದಿರುವ ಸೀತೆ ರಾವಣನು ಕೆಟ್ಟವನೆಂದು ಒಂದುಮಾತು ಕೂಡಾ ಹೇಳಲಿಲ್ಲ. ರಾಮನು ತನ್ನನ್ನು ಶೀಲ ಪರೀಕ್ಷೆ ಮಾಡುವುದರಿಂದ ರಾಮನು ಸ್ವಂತ ಹೆಂಡತಿಯನ್ನು ನಂಬದ ಅನುಮಾನವಿರುವವನೆಂದು ಕೆಟ್ಟದಾಗಿ ತನ್ನಲ್ಲಿ ತಾನು ಅಂದುಕೊಳ್ಳುವುದು ನಡೆದಿದೆ. ರಾವಣನು ಸೀತೆಗಾಗಿ ಯುದ್ಧಮಾಡಿದ್ದಾನೆ ಎನ್ನುವುದಕ್ಕಿಂತ 'ತನ್ನ ಮರಣಕ್ಕಾಗಿ' ರಾಮನೊಂದಿಗೆ ಯುದ್ಧಮಾಡಿದ್ದಾನೆ ಎನ್ನುವುದು ಒಳ್ಳೆಯದು. ನೂರು ವರ್ಷಗಳಿಗೆ ರಾಮನ ಕೈಯಲ್ಲಿ ಮರಣಿಸಲ್ಪಡಬೇಕೆಂದು ಮೊದಲೇ ನಿರ್ಣಯ ಮಾಡಲಾಗಿದೆ. ಆ ನಿರ್ಣಯ ನೆರವೇರುವುದಕ್ಕೆ ಸೀತೆಯನ್ನು ನೆಪವಾಗಿ ತೋರಿಸಿ ಯುದ್ಧ ಮಾಡಿದ್ದಾನೆ ಹೊರತು, ಸೀತೆಗಾಗಿ ಯುದ್ಧ ಮಾಡಲಿಲ್ಲ. ನೂರು ವರ್ಷಗಳ ವಯಸ್ಸಿನಲ್ಲಿ ಸೀತೆಗಾಗಿ ಯುದ್ಧ ಮಾಡಿದ್ದಾನೆಂದು ಹೇಳುವುದು ಪೂರ್ತಿ ಅಸತ್ಯ. ರಾವಣನ ವಯಸ್ಸನ್ನು ಅನುಸರಿಸಿ ಸೀತೆಗಾಗಿ ಯುದ್ಧ ಮಾಡಿದ್ದಾನೆ ಎನ್ನುವುದು ಅನುಚಿತವಾದುದು. 'ತನ್ನ ಮರಣಕ್ಕಾಗಿ ಯುದ್ಧ ಮಾಡಿದ್ದಾನೆ' ಎನ್ನುವುದು ಸತ್ಯ. ಇದು ಪ್ರಜೆಗಳಿಗೆ ತಿಳಿಯದ ಸತ್ಯವಾದ್ದರಿಂದ ರಾವಣನು ಸೀತೆ ಮೇಲೆ ವ್ಯಾಮೋಹದಿಂದ, ಸೀತೆಗಾಗಿ ಯುದ್ಧ ಮಾಡಿದ್ದಾನೆಂದು ಅಂದುಕೊಂಡಿದ್ದಾರೆ. ರಾಮಾಯಣವನ್ನು ಬರೆದವರು ಈ ವಿಷಯವನ್ನು ಚೆನ್ನಾಗಿ ಉಪಯೋಗಿಸಿಕೊಂಡು ರಾವಣನನ್ನು ಪೂರ್ತಿ ಕೆಟ್ಟದಾಗಿ ಚಿತ್ರಿಸಿದ್ದಾರೆ.

**ಪ್ರಶ್ನೆ :– ನೂರು ವರ್ಷಗಳಿಗೆ ಮರಣವಿದೆಯೆಂದು ಭವಿಷ್ಯತ್ತು ತಿಳಿದ ರಾವಣನು**

**ಉಳಿದ ಕಾರಣಗಳನ್ನು ಉಂಟುಮಾಡಿಕೊಂಡು, ಉಳಿದವರ ಕೈಯಲ್ಲಿ ಮರಣಿಸಬಹುದಲ್ಲವೇ! ರಾಮನ ಕೈಯಲ್ಲಿಯೇ ಏಕೆ ಸಾಯಬೇಕು? ಇತರರೊಂದಿಗೆ ಯಾವುದೋ ಒಂದು ಕಾರಣದಿಂದ ಯುದ್ಧಮಾಡಿ ಇತರರ ಕೈಯಲ್ಲಿ ಸಾಯಬಹುದು. ತನ್ನ ಮರಣಕ್ಕಾಗಿ ಸೀತೆಯನ್ನು ಯಾಕೆ ತಂದುಕೊಳ್ಳಬೇಕು? ಕೊನೆಗೆ ರಾಮನ ಕೈಯಲ್ಲಿಯೇ ಯಾಕೆ ಸಾಯಬೇಕು? ಇದಕ್ಕೆ ಉತ್ತರ ಹೇಳುತ್ತೀರಾ?**

**ಉತ್ತರ :–** ನೀವು ಕೇಳುವ ಪ್ರತೀ ಪ್ರಶ್ನೆಗು ಉತ್ತರವನ್ನು ಹೇಳಬಲ್ಲೆನು. ರಾಮನ ಕೈಯಲ್ಲಿಯೇ ರಾವಣನು ಸಾಯುವುದಕ್ಕೆ ಬಲವಾದ ಕಾರಣವಿದೆ. ರಾವಣನು ಮೊದಲು ಹೇಗೆ ಮರಣಿಸಿದರೇ ಉಳಿದ ಎರಡು ಜನ್ಮಗಳಲ್ಲಿಯೂ ಹಾಗೆಯೇ ಮರಣಿಸಬೇಕೆಂಬ ನಿಯಮವಿದೆ. ಮೊದಲು ರಾವಣನು ರಕ್ತಪಾತದಿಂದಲೇ ಮರಣಿಸಬೇಕಾಗಿರುವುವದರಿಂದ ನಂತರ ಎರಡು ಜನ್ಮಗಳಲ್ಲಿ ರಕ್ತಪಾತದಿಂದಲೇ ಮರಣಿಸಬೇಕಾಗಿದೆ. ಅದೇ ವಿಧವಾಗಿ ರಾವಣನು ಮೊದಲು ಯಾರ ಕೈಯಲ್ಲಿ ಮರಣಿಸಿದರೇ ಎರಡನೆಯ ಜನ್ಮಗಳಲ್ಲಿ ಕೂಡಾ ಆತನ ಕೈಯಲ್ಲಿಯೇ ಮರಣಿಸಬೇಕಾಗಿರುತ್ತದೆ. ಇದೆಲ್ಲವೂ ಮೊದಲೇ ನಿರ್ಣಯ ಮಾಡಲ್ಪಟ್ಟ ಅನುಬಂಧ ವಿಧಾನವು. ರಾಮನು ರಾವಣನನ್ನು ಕೊಲ್ಲುವುದರಿಂದ ನಂತರದ ಎರಡನೆ ಜನ್ಮದಲ್ಲಿಯೂ ರಾಮನೇ ರಾವಣನನ್ನು ಕೊಲ್ಲಬೇಕಾಗಿರುತ್ತದೆ. ರಾಮನು ತ್ರೇತಾಯುಗದಲ್ಲಿ ರಾವಣನನ್ನು ಕೊಲ್ಲುವುದರಿಂದ ಎರಡನೆಯ ದ್ವಾಪರ ಯುಗದಲ್ಲಿ ಕೂಡಾ ರಾಮನೇ ರಾವಣನನ್ನು ಕೊಲ್ಲಬೇಕಾಗಿರುತ್ತದೆ. ತ್ರೇತಾಯುಗದಲ್ಲಿ ರಾಮನು ಬಾಣದಿಂದ ರಾವಣನನ್ನು ಕೊಲ್ಲುವುದರಿಂದ ದ್ವಾಪರ ಯುಗದಲ್ಲಿಯು ಕೂಡಾ ರಾಮನು ಬಾಣದಿಂದಲೇ ರಾವಣನನ್ನು ಕೊಲ್ಲಬೇಕಾಗಿರುತ್ತದೆ. ಆದರೇ ರಾಮನು, ರಾವಣನು ಇಬ್ಬರೂ ದ್ವಾಪರ ಯುಗದಲ್ಲಿ ಬೇರೆಬೇರೆ ಹೆಸರುಗಳಿಂದ ಹುಟ್ಟುವುದರಿಂದ ತ್ರೇತಾಯುಗದಲ್ಲಿ ನಡೆದ ಸಂಘಟನೆಗು, ದ್ವಾಪರ ಯುಗದಲ್ಲಿ ನಡೆದ ಸಂಘಟನೆಗು ಎಂತಹ ಹೋಲಿಕೆಗಳು ಇಲ್ಲದಿರುವುದರಿಂದ ರಾಮನು, ರಾವಣನು ದ್ವಾಪರ ಯುಗದಲ್ಲಿ ಹುಟ್ಟಿದ್ದಾರೆಂದು ಯಾರಿಗೂ ತಿಳಿದಿಲ್ಲ. ರಾಮನು ದ್ವಾಪರ ಯುಗದಲ್ಲಿ ಕೃಷ್ಣನಾಗಿ

ಹುಟ್ಟಿದ್ದಾನೆಂದು ಕೆಲವರು ಹೇಳುವುದರಿಂದ ರಾಮನು ದ್ವಾಪರಯುಗದಲ್ಲಿ ಹುಟ್ಟಿದ್ದಾನೆಂದು ಕೆಲವರು ನಂಬಬಹುದು. ಆದರೇ ಆಗ ನಡೆದಿರುವ ವಿಷಯವನ್ನು ಕುರಿತು ಸವಿವರವಾಗಿ ಯಾರಿಗೂ ತಿಳಿದಿಲ್ಲ. ಆ ತಿಳಿಯದ ವಿಷಯವನ್ನು ನಾನು ಹೊರತುಪಡಿಸಿ ಹೇಳುವವರು ಯಾರೂ ಇಲ್ಲ. ಏಕೆಂದರೇ! ತ್ರೇತಾಯುಗದಲ್ಲಿಯು ನಾನು ಇದ್ದೇನೆ, ಹಾಗೆಯೇ ದ್ವಾಪರ ಯುಗದಲ್ಲಿಯು ನಾನು ಇದ್ದೇನೆ. ನೀವು ಕೂಡಾ ಎರಡು ಯುಗಗಳಲ್ಲಿಯೂ ಇರುವುದೇ ಅಲ್ಲದೇ  ಈಗ ಕಲಿಯುಗದಲ್ಲಿಯೂ ಕೂಡಾ ಇದ್ದೀರ. ಆದರೇ ಹಿಂದಿನ ಜನ್ಮಗಳಲ್ಲಿ ಏನು ನಡೆದಿದೆಯೆಂದು ತಿಳಿಯದ ಸ್ಥಿತಿಯಲ್ಲಿ ಇದ್ದೀರ. ಎಲ್ಲರಹಾಗೆ ಅಲ್ಲದೇ ನನ್ನಲ್ಲಿ ಮಾತ್ರ ನನ್ನ ಆತ್ಮ ಆಗ ನಡೆದಿರುವ ವಿಷಯಗಳನ್ನು ಜ್ಞಾಪಕ ಮಾಡುವುದರಿಂದ ತ್ರೇತಾಯುಗದಲ್ಲಿಯೂ, ದ್ವಾಪರಯುಗದಲ್ಲಿಯೂ ನಡೆದ ವಿಷಯಗಳನ್ನು ಹೇಳುತ್ತಿದ್ದೇನೆ. ತ್ರೇತಾಯುಗದಲ್ಲಿನ ರಾಮನು, ದ್ವಾಪರ ಯುಗದಲ್ಲಿ ಯಾರಾಗಿ ಹುಟ್ಟಿದ್ದಾನೋ? ಹೇಗೆ ತನ್ನ ಬಾಣದಿಂದ ರಾವಣನನ್ನು ಕೊಂದಿದ್ದಾನೋ ನನಗೆ ತಿಳಿದಿದೆ. ಹಾಗೆಯೇ ತ್ರೇತಾಯುಗದಲ್ಲಿನ ರಾವಣನು ದ್ವಾಪರ ಯುಗದಲ್ಲಿ ಯಾವ ಹೆಸರಿನಿಂದ ಹುಟ್ಟಿದ್ದಾನೋ ಕೂಡಾ ನನಗೆ ತಿಳಿದಿದೆ. ರಾಮನಿಗೆ ತ್ರೇತಾಯುಗದಲ್ಲಿನ ಜ್ಞಾಪಕ ಇಲ್ಲದಿರುವುದರಿಂದ ದ್ವಾಪರ ಯುಗದಲ್ಲಿ ಹುಟ್ಟಿದರೂ ತಾನು ತ್ರೇತಾಯುಗದಲ್ಲಿ ರಾಮನು ಎಂದು ಆತನಿಗೆ ತಿಳಿದಿಲ್ಲ. ರಾವಣನಿಗೆ ತ್ರೇತಾಯುಗದಲ್ಲಿನ ಜ್ಞಾಪಕ, ದ್ವಾಪರ ಯುಗದಲ್ಲಿ ಕೂಡಾ ಇರುವುದರಿಂದ ತ್ರೇತಾಯುಗದಲ್ಲಿ ನಾನು ರಾವಣನಾಗಿ ಇದ್ದೇನೆಂದು ದ್ವಾಪರಯುಗದಲ್ಲಿ ಕೂಡಾ ಆತನಿಗೆ ತಿಳಿದಿದೆ.

**ಪ್ರಶ್ನೆ :– ಆದರೇ ನೀವು ರಾಮನನ್ನು ದೇವರಲ್ಲ ಎನ್ನುತ್ತೀರಾ?**

**ಉತ್ತರ :–** ನೀವು ಯಾರನ್ನು ದೇವರು ಎಂದರೂ ನಾನು ಅಲ್ಲಗಳೆಯುವುದಿಲ್ಲ. ಹಾಗಿರುವಾಗ ರಾಮನನ್ನು ದೇವರಲ್ಲ ಎಂದು ನಾನು ಹೇಗೆ ಹೇಳಬಲ್ಲೆನು. ನಾವೆಲ್ಲರು ರಾಮನು ದೇವರೆಂದರೂ, ರಾಮನು 'ನಾನು ದೇವರು' ಎಂದು ಒಪ್ಪಿಕೊಳ್ಳಬೇಕಲ್ಲವೇ! ರಾಮನು 'ನಾನೇ ದೇವರು' ಎಂದು ತನ್ನ ಜೀವನದಲ್ಲಿ

ಒಂದುಬಾರಿ ಕೂಡಾ ಹೇಳಲಿಲ್ಲ. ದೇವರಾದವನು ಹೊರಗೆ ಹೇಳಿಕೊಳ್ಳುವುದಿಲ್ಲ. ಮನುಷ್ಯರಾದ ನಾವೇ ರಾಮನು ದೇವರೆಂದು ಹೇಳುತ್ತಿದ್ದೇವೆ. ಎಲ್ಲರೂ ಹೇಳುತ್ತಿರುವುದರಿಂದ ನಾನೂ ಹೇಳುತ್ತಿದ್ದೇನೆಂದು ಉಳಿದ ಪ್ರಜೆಗಳು ಹೇಳುತ್ತಿದ್ದಾರೆ. ರಾಮನು ದೇವರಾ? ಎಂದು ನಾನು ಒಬ್ಬ ಮನುಷ್ಯನನ್ನು ಪ್ರಶ್ನಿಸಿದರೇ ದೇವರೋ ಅಲ್ಲವೋ ನನಗೆ ತಿಳಿದಿಲ್ಲ. ಎಲ್ಲರೂ "ದೇವರು ಎಂದಾಗ ನಾನು ಹೇಳದೇ ಹೋದರೇ ಚೆನ್ನಾಗಿರುವುದಿಲ್ಲ" ಎಂದು ಹೇಳಿದನು. ಆ ದಿನ ತ್ರೇತಾಯುಗದಲ್ಲಿರುವ ಪ್ರಜೆಗಳಿಗೆ, ರಾಮನನ್ನು ನೋಡಿದ ಪ್ರಜೆಗಳಿಗೆ ರಾಮನು ದೇವರೆಂದು ತಿಳಿದಿರಬಹುದು. ಆದರೇ ಇಂದಿನ ಪ್ರಜೆಗಳಿಗೆ ರಾಮನನ್ನು ಕುರಿತು ತಿಳಿಯದೇ ಹೋದರೂ ಹಿರಿಯರು ಬೋಧಿಸಿರುವ ಬೋಧನೆಗಳನ್ನು ಅನುಸರಿಸಿ ರಾಮನ ಮೇಲೆ ಭಕ್ತಿ ಹೊಂದಿ ರಾಮನನ್ನು ದೇವರೆಂದು ಹೇಳುತ್ತಿದ್ದಾರೆ. ಕೊನೆಗೆ ಭಕ್ತಿ ಇಲ್ಲದವನು ಕೂಡಾ ರಾಮನು ದೇವರೇಯೆಂದು ಹೇಳುತ್ತಿದ್ದಾನೆ. ಹಾಗೆ ಹೇಳದೇ ಹೋದರೇ ಪಕ್ಕದ ಪ್ರಜೆಗಳಿಂದ ನನಗೆ ತೊಂದರೆ ಎಂದು ಹೇಳುತ್ತಿದ್ದಾನೆ.

**ಪ್ರಶ್ನೆ :– ರಾಮನು ದೇವರಾಗಿರುವುದರಿಂದ ಸೀತೆ ಕೂಡಾ ರಾಮನ ಬಗ್ಗೆ ಎಷ್ಟೋ ಭಕ್ತಿಯಿಂದ ಇದ್ದಳು. ಪ್ರಜೆಗಳು ಕೂಡಾ ಭಕ್ತಿಯಿಂದ ಇದ್ದರು. ಆದ್ದರಿಂದ ರಾಮರಾಜ್ಯ ಬೇಕೆಂದು ಈ ದಿನ ಕೂಡಾ ಎಲ್ಲರೂ ಕೋರಿಕೊಳ್ಳುತ್ತಿದ್ದಾರೆ. ರಾವಣ ರಾಜ್ಯ ಬೇಕೆಂದು ಯಾರೂ ಕೋರಿಕೊಳ್ಳುವುದಿಲ್ಲ. ರಾಮನು ದೇವರೆನ್ನುವುದಕ್ಕೆ ಇದು ನಿರೂಪಣೆ ಅಲ್ಲವೇ?**

**ಉತ್ತರ :–** ಮಾತು ಮಾತಿಗು ರಾಮನು ದೇವರೆಂದು ಹೇಳುತ್ತಿರುವೆ. ಆ ಮಾತನ್ನು ನಾವು ಅಲ್ಲಗಳೆಯಲಿಲ್ಲ ಆದರೇ ಕೆಲವರು ಪ್ರಜೆಗಳು ಹೀಗೆ ಹೇಳುತ್ತಿದ್ದಾರೆ. ಅದಕ್ಕೆ ನೀವು ಏನು ಉತ್ತರ ಹೇಳಬಲ್ಲಿರ? ಇದು ನನ್ನ ಮಾತಲ್ಲ ಆದರೇ ಕೆಲವರು ಪ್ರಜೆಗಳ ಮಾತನ್ನು ಹೇಳುತ್ತಿದ್ದೇನೆ ನೋಡಿರಿ. **ರಾಮನು ದೇವರಾದರೇ ಆ ದಿನ ರಾಮನ ರಾಜ್ಯದಲ್ಲಿನ ಒಬ್ಬ ಅಗಸ ರಾಮನನ್ನು ಸೀತೆಯ ವಿಷಯದಲ್ಲಿ ಯಾಕೆ ದೂಷಿಸಿದ್ದಾನೆ? ಅಗಸನು ಹೇಳಿದ ಮಾತನ್ನು**

**ರಾಮನು ದೇವರಾಗಿದ್ದು ಯಾಕೆ ತೀವ್ರವಾಗಿ ಪರಿಗಣಿಸಿದನು. ಆಗ ಅಗಸನನ್ನು ದಂಡಿಸದೆ ಸೀತೆಯನ್ನು ಕಾಡಲ್ಲಿ ಯಾಕೆ ಬಿಟ್ಟುಹಾಕಿದನು? ಹದಿನಾರು ವರ್ಷಗಳು ಸೀತೆ ವಿಯೋಗದಿಂದ ಯಾಕೆ ಬಾಧೆಪಟ್ಟನು. ಕೊನೆಯಲ್ಲಿ ರಾಮನು ಸೀತೆಯನ್ನು ಭೇಟಿಯಾಗಿ ಮರಳಿ ತನ್ನ ಹಿಂದೆ ಅಯೋಧ್ಯೆಗೆ ಬರಬೇಕೆಂದು ಕರೆದಾಗ ನಿನ್ನೊಂದಿಗೆ ಸಂಸಾರ ಮಾಡುವುದಕ್ಕಿಂತ ಸಾಯುವುದು ಒಳಿತೆಂದು ಪರ್ವತದ ಮೇಲಿನಿಂದ ಹಾರಿ ಯಾಕೆ ಆತ್ಮಹತ್ಯೆ ಮಾಡಿಕೊಂಡಳು? ಹತ್ತು ತಿಂಗಳ ಕಾಲ ರಾವಣನ ಸನ್ನಿಧಾನದಲ್ಲಿ ಸೀತೆ ಇದ್ದರೂ ಎಂದೂ ಸಹ ರಾವಣನು ಕೆಟ್ಟವನೆಂದು ಒಂದುಮಾತು ಸಹ ಹೇಳಲಿಲ್ಲ ಅಲ್ಲವೇ! ಸೀತೆಯ ಲೆಕ್ಕದಲ್ಲಿ ರಾಮನು ಒಳ್ಳೆಯವನಾ? ರಾವಣನು ಒಳ್ಳೆಯವನಾ? ಎಂದು ಕೇಳುತ್ತಿದ್ದಾರೆ.** ಈ ದಿನ ರಾಮನಿಗೆ ವಿರುದ್ಧ ಸಂಘಗಳು ಕೂಡಾ ಏರ್ಪಟ್ಟು ರಾಮನನ್ನು ಕುರಿತು ಪ್ರಶ್ನಿಸುತ್ತಿವೆ. ಆದರೂ ಆದಿನ ಏನು ನಡೆದಿದೆಯೋ ಅದನ್ನೇ ಪರಿಗಣನೆಯೊಳಗೆ ತೆಗೆದುಕೊಳ್ಳಬೇಕೇ ಹೊರತು, ಯಾರು ಏನು ಹೇಳಿದರೇ ಅದರ ಹಿಂದೆ ಹೋಗಬಾರದು ಎನ್ನುವುದು ನನ್ನ ವಾದ.

**ಪ್ರಶ್ನೆ :– ರಾಮನು ದೇವರೆಂದು ಆ ದಿನ ತಿಳಿದುಕೊಳ್ಳದೇ ಹೋಗಿರುವುದರಿಂದ ರಾವಣನು ರಾಮನ ಕೈಯಲ್ಲಿ ಮರಣಿಸಿದ್ದಾನೆ. ರಾಮನು ದೇವರೆಂದು ರಾವಣನು ಯಾಕೆ ತಿಳಿಯಲಾರದೇ ಹೋಗಿದ್ದಾನೋ? ಬಹುಶಃ ಆತನಲ್ಲಿನ ಅಜ್ಞಾನವೇ ಆ ವಿಧವಾಗಿ ರಾಮನನ್ನು ದೇವರೆಂದು ಗುರಿತಿಸಲಾರದೇ ಹೋಗಿದೆ ಎಂದು ನಾವು ಹೇಳುತ್ತಿದ್ದೇವೆ. ಇದಕ್ಕೆ ನೀವು ಏನು ಹೇಳುತ್ತೀರಿ?**

**ಉತ್ತರ :–** ನೀವು ಎಷ್ಟು ಹೊತ್ತು ಇದ್ದರೂ ರಾಮನಕಡೆ ಮಾತನಾಡುತ್ತಿದ್ದೀರ. ನಾನು ಸತ್ಯವಾದಿ ಆದಕಾರಣ ನಾನು ರಾವಣನಕಡೆ ಮಾತನಾಡಬೇಕಾಗಿ ಬಂದಿದೆ. ನೀವು ಮಾತನಾಡುತ್ತಿರುವುದು ರಾಮನ ಆಯಣ, ನಾನು ಮಾತನಾಡುತ್ತಿರುವುದು ರಾವಣಾಯಣ. ರಾಮಾಯಣದ ಪ್ರಕಾರ ರಾಮನು ದೇವರೇ. ಆದರೇ ರಾವಣಾಯಣದ ಪ್ರಕಾರ ನೋಡಿದರೇ ರಾವಣನಿಗೆ ಹೆಸರಿನ ಕೊನೆಯಲ್ಲಿ ಬ್ರಹ್ಮ ಎಂದು ಎರಡಕ್ಷರಗಳು ಇವೆ. ರಾಮನಿಗೆ ಅಂಥಾದ್ದು

ಹೆಸರಿನ ಕೊನೆಯಲ್ಲಿ ಇಲ್ಲ. ಬ್ರಹ್ಮ ಎಂದರೇ ದೊಡ್ಡದೆಂದು ಅರ್ಥ. ಪ್ರಪಂಚದಲ್ಲಿ ಯಾವುದು ದೊಡ್ಡದೋ ಅದನ್ನು 'ಬ್ರಹ್ಮ' ಎನ್ನಬೇಕು. ಬ್ರಹ್ಮ ಎಂದರೇ ಎಲ್ಲದಕ್ಕೂ ದೊಡ್ಡವನಾದವನೆಂದು ಅರ್ಥ. 'ಎಲ್ಲದಕ್ಕು ದೊಡ್ಡವನಾದವನು ಯಾರು?' ಎಂದು ಆಲೋಚಿಸಿದರೇ ಈ ಪ್ರಪಂಚವನ್ನು ಸೃಷ್ಠಿಸಿರುವ ಪರಮಾತ್ಮನಿಗೇ ಆ ಹೆಸರು ವರ್ತಿಸುತ್ತದೆ. ರಾವಣನಿಗೆ ಆತನ ಹೆಸರಿನ ಪಕ್ಕದಲ್ಲಿ ಬ್ರಹ್ಮ ಎಂದು ಕೆಲವರು ಜ್ಞಾನಿಗಳು ಹೇಳಿದರೇ ಬಂದಿದೆ. ಕೆಲವರು ಜ್ಞಾನದಲ್ಲಿ ಸಂಪನ್ನ ರಾದವರು ತ್ರೇತಾಯುಗದಲ್ಲಿಯೇ ರಾವಣನನ್ನು ಗುರುತಿಸಿ, ಆತನನ್ನು ರಾವಣಬ್ರಹ್ಮ ಎಂದು ಹೆಸರು ಇಟ್ಟಿದ್ದಾರೆ. ಭೂಮಿಮೇಲೆ ದೈವಧರ್ಮಗಳು ಇಲ್ಲದೇ ಹೋಗಿ, ಅಧರ್ಮಗಳು ಹೆಚ್ಚಾದಾಗ ಬ್ರಹ್ಮ ಎನ್ನಲ್ಪಡುವ (ದೊಡ್ಡವ ಎನ್ನಲ್ಪಡುವ) ದೇವರು ಒಬ್ಬ ಮನುಷ್ಯನ ಆಕಾರದಲ್ಲಿ ಅವತರಿಸಿ ತನ್ನ ಜ್ಞಾನವನ್ನು ತಾನೇ ಬೋಧಿಸಿ ಧರ್ಮಗಳನ್ನು ನೆಲೆಗೊಳಿಸಿ ಹೋಗುತ್ತಾನೆ. ಕೃತಯುಗದಲ್ಲಿ ಹೇಳಿರುವ ದೈವಜ್ಞಾನವು ತ್ರೇತಾಯುಗ ಬರುವುದರೊಳಗೆ ಪ್ರಜೆಗಳ ಮಧ್ಯದಲ್ಲಿ ಇಲ್ಲದೇ ಹೋಗಿದೆ. ಆದ್ದರಿಂದ ತ್ರೇತಾಯುಗದಲ್ಲಿ ದೇವರು ಅವತರಿಸಿ, ತನ್ನ ಧರ್ಮಗಳನ್ನು ಜ್ಞಾನರೂಪದಲ್ಲಿ ಬೋಧಿಸಿ ಧರ್ಮಗಳನ್ನು ನೆಲೆಗೊಳಿಸಿದ್ದಾನೆ. ಆದರೂ ಆತನು ಭೂಮಿಮೇಲೆ ಇರುವಾಗ ಆತನನ್ನು ಯಾರೂ ಗುರುತಿಸಲಿಲ್ಲ.

ದೇವರು ಮನುಷ್ಯನಾಗಿ ಬಂದಾಗ ತನ್ನನ್ನು ಗುರುತಿಸದಂತೆ ದೇವರು ಮನುಷ್ಯನಹಾಗೆ ಪ್ರವರ್ತಿಸುತ್ತಿರುತ್ತಾನೆ. ಮನುಷ್ಯನ ಹಾಗೆ ಪ್ರವರ್ತಿಸುವ ದೇವರನ್ನು ಪ್ರಜೆಗಳು ನೋಡಿದರೂ, ಮನುಷ್ಯನ ಹಾಗಿರುವ ದೇವರು ದೈವಜ್ಞಾನವನ್ನು ಹೇಳಿದ್ದರೂ, ದೇವರು ಮನುಷ್ಯನಾಗಿ ಇರುವಾಗ ಆತನನ್ನು ಯಾವ ವಿಧವಾಗಿ ಕೂಡಾ ಗುರುತಿಸಲಾರರು. ದೇವರು ಜ್ಞಾನಿಗಳು ತನ್ನನ್ನು ಗುರುತಿಸುವುದಕ್ಕೆ ಅವಕಾಶಕೊಟ್ಟು, ತನ್ನ ಜ್ಞಾನವನ್ನು ಹೇಳಿದರೂ, ಬಹಳಜನ ಜ್ಞಾನಿಗಳು ಸಹಿತ ಆತನನ್ನು ಗುರುತಿಸಲಾರದೇ ಹೋಗಿದ್ದಾರೆ. ದೇವರು ಮನುಷ್ಯನ ರೂಪದಲ್ಲಿ ದೈವಜ್ಞಾನವನ್ನು ಹೇಳುವುದರಿಂದ, ಆತನು ಭೂಮಿಮೇಲೆ ಇಲ್ಲದೇ ಹೋದ ನಂತರ, ಕೆಲವರು ಜ್ಞಾನಿಗಳು ಬಂದು ಹೋಗಿರುವವನು

ಸಾಧಾರಣ ಮಾನವನಲ್ಲ, ದೇವರೇ ಮನುಷ್ಯನ ರೂಪದಲ್ಲಿ ಅವತರಿಸಿದ್ದಾನೆ ಎಂದು ಅಂದುಕೊಳ್ಳುವುದು ನಡೆದಿದೆ. ಅದರ ಪ್ರಕಾರ ಕೃಷ್ಣನು ಹೋದಮೇಲೆ ಕೆಲವರು **"ಕೃಷ್ಣನು ಮನುಷ್ಯನ ಅವತಾರದಲ್ಲಿರುವ ದೇವರು"** ಎಂದು ತಿಳಿದುಕೊಂಡರು. ಹಾಗೆ ತಿಳಿದು ತಾವು ತಿಳಿದ ವಿಷಯವನ್ನು ಹೊರಗೆ ಹೇಳಿದರೇ ಅಜ್ಞಾನಿಗಳಾದವರು ನಂಬದೇ ಹೋಗುವುದಲ್ಲದೇ ಅವರೇ ಕೃಷ್ಣನನ್ನು ಕೆಟ್ಟದಾಗಿ ಹೇಳುತ್ತಾ ಜಾರನು, ಚೋರನು ಎಂದು ಹೇಳಿದ್ದಾರೆ. ಈ ವಿಧವಾಗಿ ನನಗೆ ತಿಳಿದ ದೇವರ ಮೂರು ಜನ್ಮಗಳು ಬಹು ಅಪರೂಪವಾಗಿ ಕೆಲವರು ಜ್ಞಾನಿಗಳಾದವರು ಗುರುತಿಸಿದಾಗ, ಬಹಳಜನ ಪ್ರಜೆಗಳು ದೇವರ ಅವತಾರವನ್ನು ವಿಶ್ವಾಸಿಸಲಿಲ್ಲ. ಬಂದವನನ್ನು ದೇವರೆಂದು ಒಪ್ಪಿಕೊಳ್ಳದೆ ಹೋಗುವುದಲ್ಲದೇ, ಆತನನ್ನು ದುರ್ಮಾರ್ಗನನ್ನಾಗಿ ಚಿತ್ರಿಸಿ, ದೇವರ ಸ್ಥಾನದೊಳಗೆ ದೇವರು ಅಲ್ಲದವನನ್ನು ತಂದು, ಈತನೇ ದೇವರೆಂದು ಪ್ರಚಾರ ಮಾಡುವುದು ಕೂಡಾ ನಡೆದಿದೆ.

**ಪ್ರಶ್ನೆ :– ರಾಮನು ಭೂಮಿಮೇಲೆ ಇರುವಾಗ ರಾಮನನ್ನು ದೇವರನ್ನಾಗಿ ಬಹಳಜನ ಹೇಳುತ್ತಿದ್ದರೂ ರಾವಣನು ರಾಮನನ್ನು ದೇವರೆಂದು ವಿಶ್ವಾಸಿಸಲಾರದೇ ಹೋದನು. ಅದನ್ನು ಅನುಸರಿಸಿ ದೇವರು ಮನುಷ್ಯನಾಗಿ ಬಂದಾಗ ಕೆಲವರು ಈತನೇ ದೇವರೆಂದು ರಾಮನನ್ನು ತೋರಿಸಿದರೂ, ರಾವಣನು ಅಜ್ಞಾನಿ ಆದಕಾರಣ ರಾಮನನ್ನು ದೇವರೆಂದು ನಂಬಲಾರದೇ ಹೋಗಿದ್ದಾನೆಂದು ತಿಳಿಯುತ್ತಿದೆ. ರಾಮನನ್ನು ರಾವಣನು ದೇವರೆಂದು ಒಪ್ಪಿಕೊಳ್ಳದೇ ಹೋಗಿರುವುದರಿಂದ ರಾವಣನು ಪೂರ್ತಿ ಅಜ್ಞಾನಿ ಎಂದು ನೀವು ಒಪ್ಪಿಕೊಳ್ಳುತ್ತೀರಾ?**

**ಉತ್ತರ :–** ಪ್ರಜೆಗಳೆಲ್ಲರೂ ರಾಮನನ್ನು ದೇವರೆಂದರೂ, ಕೊನೆಗೆ ನಾಲ್ವರೊಂದಿಗೆ ನಾವು ಕೂಡಾ ರಾಮನು ದೇವರೆಂದೇ ಒಪ್ಪಿಕೊಂಡರೂ, ರಾವಣನು ಮಾತ್ರ ರಾಮನನ್ನು ದೇವರೆಂದು ಒಪ್ಪಿಕೊಳ್ಳಲಿಲ್ಲ. ಅಷ್ಟುಮಾತ್ರಕ್ಕೆ ರಾವಣನನ್ನು ಅಜ್ಞಾನಿ ಎನ್ನುವುದಕ್ಕೆ ಸಾಧ್ಯವಿಲ್ಲ. ರಾವಣನಿಗೆ ರಾಮನು ದೇವರೆಂದು, ಆತನೊಂದಿಗೆ ಯುದ್ಧ ಬೇಡವೆಂದು ಕೂಡಾ ಹೇಳಿದ್ದಾರೆ. ಆದರೂ ರಾವಣನು ತನಗೆ

ಹತ್ತಿರವಿರುವವರು ಆ ಮಾತನ್ನು ಹೇಳಿದರೂ ಅವರ ಮಾತನ್ನು ಕೂಡಾ ಕೇಳದೇ ಹೋಗುವುದಕ್ಕೆ, ರಾಮನು ದೇವರೆಂದು ಒಪ್ಪಿಕೊಳ್ಳದೇ ಹೋಗುವುದಕ್ಕೆ ಬಲವಾದ ಕಾರಣವಿದೆ. ಅದು ಏನೆಂದರೇ! ತಾನೇ ಸ್ವತಃವಾಗಿ ದೇವರಾಗಿದ್ದು, ಮಾನವ ಅವತಾರದಲ್ಲಿ ಬಂದಿರುವ ವಿಷಯವು ತನಗೆ ಜ್ಞಾಪಕ ಇರುವಾಗ ಇನ್ನೊಬ್ಬರನ್ನು ದೇವರೆಂದು ಅಂದುಕೊಳ್ಳುವುದಕ್ಕೆ ಅವಕಾಶವೇ ಇಲ್ಲ. ಆದ್ದರಿಂದ ರಾಮನ ವಿಷಯದಲ್ಲಿ ರಾವಣನು ಮೌನವಾಗಿ ಇದ್ದುಹೋದನು.

**ಪ್ರಶ್ನೆ :– ಏನು? ನೀನು ರಾವಣನನ್ನು ದೇವರೆಂದು ಹೇಳುತ್ತೀಯಾ?**

**ಉತ್ತರ :–** ನನ್ನ ಸ್ವಂತವಾಗಿ ರಾವಣನನ್ನು ದೇವರೆಂದು ನಾನು ನಾನು ಹೇಳದಿದ್ದರೂ, ಶಾಸ್ತ್ರಗಳ ಆಧಾರಗಳು ರಾವಣನನ್ನು ದೇವರೆಂದು ತಿಳಿಸುತ್ತಿವೆ. ದೇವತೆಗಳು ಎಷ್ಟೋಜನ ರಾವಣನನ್ನು ದೇವರೆಂದು ತಿಳಿದವರಾಗಿ, ರಾವಣನಿಗೆ ನಮಸ್ಕರಿಸಿದ್ದಾರೆ. ಅಷ್ಟೇಅಲ್ಲದೇ ರಾವಣನ ಹೆಸರಿನ ಕೊನೆಯಲ್ಲಿ **"ಬ್ರಹ್ಮ"** ಎಂಬ ಪದವನ್ನು ಸೇರಿಸಿ **'ರಾವಣಬ್ರಹ್ಮ'** ಎಂದು ಕರೆದಿದ್ದಾರೆ. ಬ್ರಹ್ಮ ಎಂದರೇ ಎಲ್ಲದಕ್ಕು, ಎಲ್ಲರಿಗೂ ದೊಡ್ಡವನಾದ ದೇವರೆಂದು ಮೊದಲೇ ಹೇಳಿಕೊಂಡಿದ್ದೇವೆ. 'ಬ್ರಹ್ಮ' ಎಂಬ ಹೆಸರು ಮನುಷ್ಯನಾಗಿರುವವನಿಗೆ ಬರುವುದು ಎಲ್ಲೂ ನಡೆಯಲಿಲ್ಲ. ಅದು ರಾವಣನಿಗೆ ಒಬ್ಬನಿಗೇ ದಕ್ಕಿದೆ. ಆತನ ನಂತರ ಬ್ರಹ್ಮ ಎಂದು ಯಾರ ಹೆಸರಿನ ಕೊನೆಯಲ್ಲಿ ಹೇಳಲ್ಪಡಲಿಲ್ಲ. 'ಬ್ರಹ್ಮ' ಎಂಬ ಪದವು ರಾವಣನಿಗೆ ಒಬ್ಬನಿಗೇ ಇರುವುದು ಗಮನಿಸುವಂತಹ ವಿಷಯವು. 'ಬ್ರಹ್ಮ' ಎಂಬ ಪದವೊಂದರ ವಿವರವನ್ನು ನೋಡಿದರೇ ಹೀಗಿದೆ.

ಬ್ರಹ್ಮ ಎಂದರೇ 'ದೇವರು' ಎಂದು ಅರ್ಥ. ರಾವಣಬ್ರಹ್ಮ ಎಂದರೇ **ರಾವಣನೇ ದೇವರೆಂದು** ಹೇಳುವುದು. ದೇವರು ಭೂಮಿಮೇಲೆ ಮನುಷ್ಯನಾಗಿ ಹುಟ್ಟಿದರೇ ಆತನನ್ನು ಭಗವಂತನೆಂದು ಕರೆಯಬೇಕು. ದೇವರೆಂದು ಕರೆಯಬಾರದು. 'ಭಗವಂತನು' ಎಂಬ ಪದವನ್ನು ಹೆಸರಿನ ಕೊನೆಯಲ್ಲಿ ಸೇರಿಸಿ ಹೇಳಬಹುದು. ಉದಾಹರಣೆಗೆ ಹೇಳಿದರೇ ಕೃಷ್ಣನ ಹೆಸರಿನ ಕೊನೆಯಲ್ಲಿ

ಭಗವಾನ್ ಎಂದು ಇದೆ. **'ಕೃಷ್ಣಭಗವಾನ್'** ಎನ್ನುವುದರಿಂದ **'ಕೃಷ್ಣನು ಮನುಷ್ಯನಾಗಿ ಬಂದಿರುವ ದೇವರೆಂದು'** ಹೇಳಬಹುದು. ಹಾಗೆಯೇ ದೇವರು ಮನುಷ್ಯನಾಗಿ ಬಂದರೇ ಆತನನ್ನು ಭಗವಾನ್ ಎಂದು ಕರೆದರೂ, ಆ ಪದವು ಹೆಸರಿನ ಕೊನೆಯಲ್ಲಿ ಇರಬೇಕು ಅಷ್ಟೇ ಹೊರತು ಬ್ರಹ್ಮ ಎಂಬ ಪದವನ್ನು ಆತನ ಹೆಸರಿನ ಕೊನೆಯಲ್ಲಿ ಇರಬಾರದು. ಆದರೇ ರಾವಣನು ದೇವರೇ ಆದರೂ, ಆತನ ಹೆಸರಿನ ಕೊನೆಯಲ್ಲಿ ಭಗವಾನ್ ಎಂದು ಇರಬೇಕು ಆದರೇ ಬ್ರಹ್ಮ ಎಂದು ಇರಬಾರದು. ಆದರೂ ರಾವಣನ ಹೆಸರಿನ ಕೊನೆಯಲ್ಲಿ ಬ್ರಹ್ಮ ಎಂದು ಇರುವುದಕ್ಕೆ ಸ್ವಲ್ಪ ಕಾರಣವಿದೆ. ಅದು ಏನೆಂದರೇ!

ಪ್ರಪಂಚದಲ್ಲಿ ಧರ್ಮಸಂಸ್ಥಾಪನೆಗಾಗಿ ದೇವರು ಮೊಟ್ಟಮೊದಲು ಯಾವಾಗ ಅವತರಿಸುತ್ತಾನೊ ಆಗ ಆತನು ಮೊಟ್ಟಮೊದಲು ಮನುಷ್ಯನಾಗಿ ಬಂದಿರುವ ದೇವರೆಂದು ತಿಳಿಯುವ ನಿಮಿತ್ತ ಮನುಷ್ಯನಾಗಿ ಬಂದಿರುವವನ ಹೆಸರಿನ ನಂತರ ಬ್ರಹ್ಮ ಎಂದು ಹೇಳಿದ್ದಾರೆ. ದೇವರು ಮನುಷ್ಯನಾಗಿ ಬಂದರೇ ಆತನನ್ನು ಪ್ರತ್ಯೇಕಿಸಿ ಭಗವಂತ ಎನ್ನಬೇಕೆಂದು, ಮೊದಲು ಭೂಮಿಮೇಲಕ್ಕೆ ಬಂದಿರುವ ದೇವರಿಗೆ ಮಾತ್ರ ಹೆಸರಿನ ಮೊದಲು 'ಭಗವಾನ್' ಎಂದು ಇರುವಹಾಗೆ ಆ ದಿನ ದೇವತೆಗಳು, ಗ್ರಹಗಳು, ಭೂತಗಳು ಎಲ್ಲರೂ ರಾವಣನಿಗೆ ನಮಸ್ಕರಿಸುವುದೇ ಅಲ್ಲದೇ **"ಭಗವಾನ್ ರಾವಣಬ್ರಹ್ಮ"** ಎಂದು ಕರೆದಿದ್ದಾರೆ. ಕೆಲವರು 'ರಾವಣಬ್ರಹ್ಮ' ಎಂದರೇ, ಇನ್ನೂ ಕೆಲವರು 'ಭಗವಾನ್ ರಾವಣ ಬ್ರಹ್ಮ' ಎಂದು ಹೇಳಿದ್ದಾರೆ. ಇದೆಲ್ಲವೂ ಓದುವವರಿಗೆ ಹೊಸದಾಗಿ, ವಿಚಿತ್ರವಾಗಿ ಇದ್ದರೂ ಇದು ನೂರಕ್ಕೆ ನೂರುಪಾಲು ನಡೆದ ಸತ್ಯ. ರಾವಣನು ಪ್ರಜೆಗಳಲ್ಲಿ ಆ ದಿನ, ಈ ದಿನ ಕೆಟ್ಟ ವ್ಯಕ್ತಿಯಾಗಿ ಪ್ರಚಾರವಾಗಿರುವಾಗ, ಒಂದುಬಾರಿ ಎಲ್ಲರೂ ಬೆಚ್ಚಿ ಬೀಳುವಹಾಗೆ **"ರಾವಣನು ದೇವರೆಂದು"** ಹೇಳುವುದು ದೊಡ್ಡ ಸಾಹಸವೇ ಆಗಿರುವಾಗ, ಆತನು ಮೊದಲು ಹುಟ್ಟಿರುವ ದೇವರ ಅವತಾರವೆಂದು ಗುರುತಿಸುವಂತೆ 'ಭಗವಾನ್ ರಾವಣ ಬ್ರಹ್ಮ' ಎಂದು ಹೇಳುವುದು ವಿಚಿತ್ರವಾಗಿ ಇರುತ್ತದೆ. ಅಷ್ಟೇ ಅಲ್ಲದೇ ಆತನು ಪ್ರಜೆಗಳ ಮಧ್ಯದಲ್ಲಿ

ಇರುವಾಗ ಆ ದಿನ ಲಂಕೆಯಲ್ಲಿ ತ್ರಿಕಾಲ ಜ್ಞಾನಿ ಎಂದು ಹೆಸರುವಾಸಿಯಾಗಿದ್ದನು. ಕಾಲ ಎಂದರೇ ದೇವರೆಂದು, ಪರಮಾತ್ಮ ಎಂದು ಹೇಳಬಹುದು. ದೇವರು ಮೂರು ವಿಧಗಳು ವಿಂಗಡಿಸಲ್ಪಟ್ಟಿದ್ದಾನೆ. ಪರಮಾತ್ಮ, ಆತ್ಮ, ಜೀವಾತ್ಮವಾಗಿ ಇರುವ ದೇವರನ್ನು ತ್ರಿಕಾಲ ಎಂದು ಕರೆದಿದ್ದಾರೆ. **'ತ್ರಿಕಾಲ' ಎಂದರೇ 'ಮೂರು ಆತ್ಮಗಳೆಂದು' ತಿಳಿಯಬೇಕು**. ಮೂರು ಆತ್ಮಗಳನ್ನು ತಿಳಿದಿರುವವನೆಂದು ರಾವಣನನ್ನು ಲಂಕೆಯಲ್ಲಿ ಆ ದಿನವೇ ತ್ರಿಕಾಲ ಜ್ಞಾನಿಯೆಂದು ಕರೆದಿದ್ದಾರೆ. ತ್ರಿಕಾಲ ಜ್ಞಾನಿ ಎಂದರೇ ಜೀವಾತ್ಮ, ಆತ್ಮ, ಪರಮಾತ್ಮ ಎಂಬ ಮೂರು ಆತ್ಮಗಳನ್ನು ತಿಳಿದವನೆಂದು ಅರ್ಥ.

ಭಗವದ್ಗೀತೆಯಲ್ಲಿ ವಿಶ್ವರೂಪವೆಂಬ ಅಧ್ಯಾಯದಲ್ಲಿ ಅರ್ಜುನನು ವಿಶ್ವರೂಪವಾಗಿ ಇರುವ ದೇವರನ್ನು "ನೀನು ಯಾರು" ಎಂದು ಪ್ರಶ್ನಿಸಿದಾಗ ಅದಕ್ಕೆ ಉತ್ತರವಾಗಿ **"ನಾನು ಕಾಲವು"** ಎಂದು 32ನೇ ಶ್ಲೋಕದಲ್ಲಿ **'ಕಾಲೋಸ್ಮಿ'** ಎಂದು ಹೇಳಿದ್ದಾನೆ. ಆ ಮಾತಿನ ಪ್ರಕಾರ ದೇವರು ಕಾಲವಾಗಿ ಇದ್ದಾನೆಂದು, ವಿಂಗಡಿಸಿ ನೋಡಿದರೇ ಮೂರು ಕಾಲಗಳಾಗಿ ಇದ್ದಾನೆಂದೂ, ಮೂರು ಕಾಲಗಳನ್ನೇ ಮೂರು ಆತ್ಮಗಳೆಂದು ಹೇಳುತ್ತಿದ್ದೇವೆಂದು, ಮೂರು ಆತ್ಮಗಳನ್ನು ತಿಳಿದಿರುವವನು ರಾವಣನಾಗಿರುವುದರಿಂದ ಆತನನ್ನು ತ್ರಿಕಾಲಜ್ಞಾನಿ ಎಂದು ಕರೆಯುವುದು ನಡೆದಿದೆ. ರಾಮನ ವಿಷಯವು ಪೂರ್ತಿ ನನಗೆ ತಿಳಿದಿಲ್ಲ ಆದರೇ, ರಾವಣನ ವಿಷಯವು ನನಗೆ ಪೂರ್ತಿಯಾಗಿ ತಿಳಿಯುವುದು. ಆದ್ದರಿಂದ ರಾವಣನನ್ನು **'ತ್ರಿಕಾಲ ಜ್ಞಾನಿ'** ಎಂದು, ಆತನನ್ನು **'ಬ್ರಹ್ಮ'** ಎಂದು ಮತ್ತು **'ಭಗವಾನ್'** ಎಂದು ತ್ರೇತಾಯುಗದಲ್ಲಿಯೇ ಹೇಳಲ್ಪಟ್ಟಿದ್ದಾನೆ. ತ್ರಿಕಾಲ ಎಂದರೇ! ಭೂತ, ಭವಿಷ್ಯತ್ತು, ವರ್ತಮಾನ ಕಾಲಗಳು ಎಂದು ಕೆಲವರು ಹೇಳುತ್ತಾ ರಾವಣನು ಭವಿಷ್ಯತ್ತು, ಭೂತ ಕಾಲಗಳನ್ನು ತಿಳಿದಿರುವವನೆಂದು ಹೇಳುತ್ತಿರುತ್ತಾರೆ. ಆ ಮಾತಿಗೆ ಬಂದರೇ ರಾವಣನು ಜ್ಯೋತಿಷ್ಯ ಶಾಸ್ತ್ರವನ್ನು ತಿಳಿದಿರುವವನು, ಆದಕಾರಣ ಆತನಿಗೆ ಭವಿಷ್ಯತ್ತು ತಿಳಿದಿದೆ. ಭೂತಕಾಲವೆಂದರೇ ನಡೆದು ಹೋಗಿರುವ ಕಾಲದಲ್ಲಿ ಯಾವಾಗ ಏನು ನಡೆದಿದೆ ಪೂರ್ತಿಯಾಗಿ

ಜ್ಞಾಪಕವಿರುವವನು. ಇತರರಿಗೆ ನಡೆದುಹೋಗಿರುವ ಕಾಲದಲ್ಲಿ ಪ್ರತಿಯೊಂದು ಜ್ಞಾಪಕವಿರುವುದಿಲ್ಲ. ಹಾಗೆಯೇ ಮುಂಬರುವ ಕಾಲದ ಬಗ್ಗೆಯೂ ತಿಳಿದಿಲ್ಲ. ಈ ಎರಡು ಕಾಲಗಳನ್ನು ರಾವಣನು ಚೆನ್ನಾಗಿ ತಿಳಿದಿರುವವನು ಆಗಿರುವುದರಿಂದ ಆತನನ್ನು ಪಂಚಾಗವನ್ನು ಚೆನ್ನಾಗಿ ತಿಳಿದಿರುವವನೆಂದು, ಒಳ್ಳೆಯ ಜ್ಯೋತಿಷ್ಯನೆಂದೂ, ಹೇಳಬಹುದು. ಆದ್ದರಿಂದ ಆ ಕಾಲದಲ್ಲಿ ರಾವಣನು ಜ್ಯೋತಿಷ್ಯ ಶಾಸ್ತ್ರವನ್ನು ತಿಳಿದಿರುವ ಪಂಡಿತನೆಂದು ಬಹಳಜನ ಹೇಳುತ್ತಿದ್ದರು. ಜ್ಯೋತಿಷ್ಯ ತಿಳಿದಿರುವುದರಿಂದ ತ್ರಿಕಾಲ ಜ್ಞಾನಿ ಎಂಬ ಹೆಸರು ಬರಲಿಲ್ಲ. ಭೂತ, ಭವಿಷ್ಯತ್ತು, ವರ್ತಮಾನ ಕಾಲಗಳನ್ನು ತಿಳಿದಿರುವುದರಿಂದ ಆತನನ್ನು ಜ್ಯೋತಿಷ್ಯ ಪಂಡಿತನೆಂದು ಕರೆದಿದ್ದಾರೆ. ತ್ರಿಕಾಲ ಜ್ಞಾನಿಗೆ ಭೂತ, ಭವಿಷ್ಯತ್ತು, ವರ್ತಮಾನ ಕಾಲಗಳಿಗೆ ಸಂಬಂಧವಿಲ್ಲ. ಮೂರು ಆತ್ಮಗಳ ವಿಷಯಗಳು ತಿಳಿದಿರುವುದರಿಂದ ಆತನಿಗೆ ತ್ರಿಕಾಲಜ್ಞಾನಿ ಎಂಬ ಹೆಸರಿದೆ. ಮೂರು ಆತ್ಮಗಳನ್ನು ತಿಳಿದವನು ತ್ರೇತಾಯುಗದಲ್ಲಿ ರಾವಣಬ್ರಹ್ಮ ಹೊರತುಪಡಿಸಿ ಯಾರೂ ಇಲ್ಲ. ಅಂದಿನ ಕಾಲದಲ್ಲಿ ಒಟ್ಟಾರೆ ಪ್ರಪಂಚದಲ್ಲಿ ಮೂರು ಆತ್ಮಗಳನ್ನು ತಿಳಿದವನು ಒಬ್ಬನೇ ಒಬ್ಬನು ಇದ್ದಾನೆ, ಆತನೇ ರಾವಣನು.

'ಭಗವಾನ್' ಎಂಬ ಹೆಸರು ರಾವಣನ ಹೆಸರಿನ ಮೊದಲು ಇರುವುದರಿಂದ "ಆತನು ಮನುಷ್ಯನ ರೂಪದಲ್ಲಿರುವ ದೇವರೆಂದು" ಹೇಳಬಹುದು. ಅಷ್ಟೇ ಅಲ್ಲದೆ ದೇವರ ಎರಡನೆಯ ಅವತಾರಕ್ಕು, ಆ ನಂತರ ಬರುವ ಅವತಾರಗಳಿಗು ಎಲ್ಲದಕ್ಕೂ ಹೆಸರಿನ ಕೊನೆಯಲ್ಲಿ 'ಭಗವಾನ್' ಎಂದು ಇರುವುದಾಗಿದೆ. ಆತನು (ರಾವಣನು) ಭಗವಾನ್ ಎಂದು ಪ್ರಜೆಗಳಿಗೆ ತಿಳಿಯುವ ಮೊದಲೇ ಪ್ರಜೆಗಳಲ್ಲಿ ಕೆಲವರು ಜ್ಞಾನಿಗಳು ರಾವಣನು ಪರಬ್ರಹ್ಮ ಸ್ವರೂಪವೆಂದು, ಅಂದರೇ ಪರಮಾತ್ಮನಾದ ದೇವರೆಂದು ತಿಳಿದು ದೇವರಿಗೆ ಮತ್ತೊಂದು ಹೆಸರಾದ 'ಬ್ರಹ್ಮ' ಎಂಬ ಪದವನ್ನು ರಾವಣ ಎಂಬ ಹೆಸರಿನ ಕೊನೆಯಲ್ಲಿ ಹೇಳುತ್ತಾ 'ರಾವಣಬ್ರಹ್ಮ' ಎನ್ನುತ್ತಿದ್ದರು. ಮೊದಲು ರಾವಣಬ್ರಹ್ಮನಾಗಿ ಪ್ರಚಾರವಾದ ರಾವಣನು ಸ್ವಲ್ಪಕಾಲದ ನಂತರ 'ಭಗವಾನ್ ರಾವಣಬ್ರಹ್ಮ'

ನಾಗಿ ಕರೆಯಲ್ಪಟ್ಟಿದ್ದಾನೆ. ಆತನು ದೇವರ ಅವತಾರವೆಂದು ಗ್ರಹಿಸಿದ ಜ್ಞಾನಿಗಳು ಭಗವಾನ್ ಎಂದು ಆತನನ್ನು ಕರೆದರೇ, ಕೆಲವರು ಹೇಳಿದ 'ಭಗವಾನ್ ರಾವಣಬ್ರಹ್ಮ' ಎಂಬ ಹೆಸರನ್ನು ಎಲ್ಲರೂ ಹೇಳದೆ ಮೊದಲಿನಿಂದ ಹೇಳುತ್ತಿರುವ ರಾವಣಬ್ರಹ್ಮ ಎಂಬ ಹೆಸರು ಇಂದಿಗೂ ಕರೆಯಲ್ಪಡುತ್ತಿದೆ. ಭೂಮಿಮೇಲೆ ಮನುಷ್ಯನಾಗಿ ಬಂದವರಲ್ಲಿ ಮೊದಲ ಭಗವಂತನು ರಾವಣನೇ ಆಗಿರುವುದರಿಂದ **"ಭಗವಾನ್ ರಾವಣ ಬ್ರಹ್ಮ"** ಆಗಿದ್ದಾನೆ.

ಮೊದಲು ಹೇಳಲ್ಪಟ್ಟ 'ಬ್ರಹ್ಮ', ನಂತರ ಸ್ವಲ್ಪ ಕಾಲಕ್ಕೆ ಆತನು ಮರಣಿಸಿದ ನಂತರ ಹೇಳಲ್ಪಟ್ಟ 'ಭಗವಾನ್' ಎರಡು ಹೆಸರುಗಳನ್ನು ಜ್ಞಾಪಕವಿಟ್ಟುಕೊಂಡು ರಾವಣ ಎಂದು ಎಲ್ಲಿ ಹೆಸರು ಬಂದರೂ, ಆ ಹೆಸರಿನ ಮೊದಲು "ಭಗವಾನ್" ಎಂದೂ, ಹೆಸರಿನ ನಂತರ 'ಬ್ರಹ್ಮ' ಎಂಬ ಎರಡು ಶಬ್ಧಗಳನ್ನು ಎಲ್ಲರು ನುಡಿಯುತ್ತಾ **"ಭಗವಾನ್ ರಾವಣಬ್ರಹ್ಮ"** ಎಂದು ಇಂದಿನಿಂದ ಹೇಳಿ ಕೊಳ್ಳೋಣ. ತಾನು ದೇವರೆಂದು ರಾವಣನಿಗೆ ಜ್ಞಾಪಕವಿದೆ. ತನ್ನ ಅವತಾರವನ್ನು ಕುರಿತು ತಾನು ತಿಳಿದರೂ, ತಾನು ಯಾವ ಉದ್ದೇಶದಿಂದ ಭೂಮಿಮೇಲಕ್ಕೆ ಬಂದಿದ್ದಾನೋ ಆ ಉದ್ದೇಶವು ನೆರವೇರುವಹಾಗೆ ತನ್ನ ಜೀವಿತ ಕಾಲದಲ್ಲಿ ನಡೆದುಕೊಂಡಿದ್ದಾನೆ. ದೇವರ ಅವತಾರ ಉದ್ದೇಶವು "ಧರ್ಮಸಂಸ್ಥಾಪನೆ ಮಾಡುವುದೇ." ಅಂದರೇ ಭೂಮಿಮೇಲೆ ಯಾರಿಗೂ ತಿಳಿಯದ ದೇವರ ಧರ್ಮಗಳನ್ನು ಬೋಧಿಸುವುದೇ. ಭಗವಾನ್ ರಾವಣಬ್ರಹ್ಮನ ನಂತರ ಕೃಷ್ಣ ಭಗವಾನ್‌ಆಗಿ, ಯೇಸು ಭಗವಾನ್‌ಆಗಿ ಆತನೇ ಬಂದಿದ್ದರೂ ಆ ಜನ್ಮಗಳ ಅವತಾರದಲ್ಲಿ ಕೇವಲ ಧರ್ಮಗಳನ್ನು ಬೋಧಿಸಿದ್ದಾನೆ ಆದರೇ, ಅಧರ್ಮಗಳನ್ನು ಆಚರಿಸುವವರನ್ನು ಶಿಕ್ಷಿಸಲಿಲ್ಲ. ಭಗವಾನ್ ರಾವಣಬ್ರಹ್ಮ ಕಾಲದಲ್ಲಿ ಅಧರ್ಮ ಗಳನ್ನು ಆಚರಿಸುವವರನ್ನು ಶಿಕ್ಷಿಸುವುದು ನಡೆದಿದೆ. **ಮೊಟ್ಟಮೊದಲ ಭಗವಂತನಾಗಿ ಬಂದಿರುವವನು ಭಗವಾನ್ ರಾವಣಬ್ರಹ್ಮ ಆಗಿರುವಾಗ, ಆತನ ಮುಖಾಂತರ ಮೊಟ್ಟಮೊದಲು ಜ್ಞಾನವನ್ನು ತಿಳಿದ ಶಿಷ್ಯನು ಜನಕನು.** ಜನಕನು ರಾಜನಾಗಿದ್ದು, ಭಗವಾನ್ ರಾವಣಬ್ರಹ್ಮನ ಬಳಿ ಧರ್ಮಗಳನ್ನು ತಿಳಿದುಕೊಂಡು, ಯಾವಾಗಲೂ

ಆಚರಿಸಲಾಗುವ ಕರ್ಮಯೋಗವನ್ನು ಆಚರಿಸಿ ಮೊಟ್ಟಮೊದಲು ಮೋಕ್ಷವನ್ನು ಹೊಂದಿದ್ದಾನೆ. ಆದ್ದರಿಂದ **ರಾವಣಬ್ರಹ್ಮನಂತಹ ಗುರುವು, ಜನಕರಾಜನಂತಹ ಶಿಷ್ಯನು ಇಲ್ಲವೆಂದು** ಆ ದಿನ ಹೇಳುತ್ತಿದ್ದರು.

**ಭೂಮಿಮೇಲೆ ಅಣಗಿಹೋಗಿರುವ ಧರ್ಮಗಳನ್ನು ತಿಳಿಸಿರುವ ಮೊದಲ ಭಗವಂತನು 'ಭಗವಾನ್ ರಾವಣಬ್ರಹ್ಮ' ಆಗಿರುವಾಗ, ಭೂಮಿಮೇಲೆ ಮೊದಲು ಮೋಕ್ಷ ಹೊಂದಿರುವವನು ಜನಕಮಹಾರಾಜ.** ಆದರೇ ಈ ವಿಷಯವು ಕೂಡಾ ಈದಿನ ಯಾರಿಗೂ ತಿಳಿಯದೆಂದೇ ಹೇಳಬಹುದು. ಅಷ್ಟೇ ಅಲ್ಲದೇ ರಾವಣನು ಭಗವಂತನೆಂದು ಕೂಡಾ ತಿಳಿದಿಲ್ಲ. ಈಗ ನಾನು ಹೇಳುವ ವಿಷಯಗಳೆಲ್ಲವೂ ಎಂದೂ ಕೇಳದ, ಯಾರೂ ಹೇಳದ ಹೊಸ ವಿಷಯಗಳಾಗಿ ಇರುತ್ತವೆ. ಜನಕ ಮಹಾರಾಜನ ಗುರುವು ಭಗವಾನ್ ರಾವಣಬ್ರಹ್ಮ ಆಗಿರುವಾಗ ತನ್ನ ಗುರುವನ್ನು ತನ್ನ ಮಗಳನ್ನು ಮದುವೆಯಾಗುವುದಕ್ಕೆ ಸ್ವಯಂವರಕ್ಕೆ ಕರೆದಿದ್ದಾನೆ ಎನ್ನುವುದು ನೂರುಪಾಲು ಅಸತ್ಯ. ಆದರೂ ವಿಚಕ್ಷಣ ಇಲ್ಲದ ಪ್ರಜೆಗಳು ಸೀತೆ ಸ್ವಯಂವರಕ್ಕು ಮೊದಲೆ ಬ್ರಹ್ಮ ಎಂದು ಕರೆಯಲ್ಪಟ್ಟ ರಾವಣನು ಬಂದಿದ್ದಾನೆಂದು ನಂಬುತ್ತಿದ್ದಾರೆ. ಸೀತೆ ಸ್ವಯಂವರ ಸಮಯಕ್ಕೆ ರಾವಣ ಬ್ರಹ್ಮನ ವಯಸ್ಸು 85 ವರ್ಷಗಳು. ಜನಕನಿಗೆ ಗುರುವಾಗಿರುವವನು ತನ್ನ ಶಿಷ್ಯನ ಮಗಳನ್ನು ವಿವಾಹವಾಗುವುದಕ್ಕೆ ಬಂದಿದ್ದಾನೆ ಎನ್ನುವುದು ಅಸತ್ಯವಾಗುವುದು. ಸೀತೆಯ ವಯಸ್ಸು (16) ಆಗಿರುವಾಗ ರಾವಣಬ್ರಹ್ಮನಿಗೆ ಮೊಮ್ಮಗಳೆಂದು ಹೇಳಬಹುದು. ತನ್ನ ತಂದೆಗೆ ಆಧ್ಯಾತ್ಮಿಕ ಗುರು ರಾವಣಬ್ರಹ್ಮ ನೆಂದು ತಿಳಿದ ಸೀತೆ, ರಾವಣಬ್ರಹ್ಮನ ಮೇಲೆ ಭಕ್ತಿ ಗೌರವವನ್ನು ಹೊಂದಿದ್ದಳು. ಕಾಡಲ್ಲಿ ಸೀತೆ ವನವಾಸದಲ್ಲಿ ರಾವಣಬ್ರಹ್ಮ ಕಾಣಿಸಿದಾಗ ಆತನ ದರ್ಶನ ದೊರೆತಿರುವುದಕ್ಕೆ ಸೀತೆ ಎಷ್ಟೋ ಸಂತೋಷ ಪಟ್ಟಿದ್ದಳು. ರಾವಣಬ್ರಹ್ಮನ ಮೇಲೆ ಎಷ್ಟೋ ಭಕ್ತಿ ವಿಶ್ವಾಸಗಳಿರುವ ಸೀತೆ, ರಾವಣಬ್ರಹ್ಮ ತನ್ನಹಿಂದೆ ಬರಬೇಕೆಂದು ಹೇಳಿದ ಕೂಡಲೇ ಸಂತೋಷಪಟ್ಟು ಆತನ ಹಿಂದೆ ಹೋದಳು. ಅಷ್ಟೇ ಹೊರತು ರಾವಣಬ್ರಹ್ಮ ಬಲವಂತವಾಗಿ ಸೀತೆಯನ್ನು ಕರೆದುಕೊಂಡು

ಹೋಗಲಿಲ್ಲ. ಸೀತೆ ರಾವಣ ಬ್ರಹ್ಮನವರ ನಾಯಕತ್ವದಲ್ಲಿ ಹತ್ತು ತಿಂಗಳ ಕಾಲವಿದ್ದರೂ ಯಾವದಿನವೂ ಯಾವ ಕೊರತೆ ಇಲ್ಲದೇ ಜೀವಿಸಿದ್ದಾಳೆ.

**ಪ್ರಶ್ನೆ :– ನೀವು 'ದ್ರಾವಿಡ ಬ್ರಾಹ್ಮಣ' ಎಂಬ ಗ್ರಂಥದಲ್ಲಿ ರಾವಣಬ್ರಹ್ಮ ಬ್ರಾಹ್ಮಣನೆಂದು ಬರೆದಿದ್ದೀರಿ. ಈ ದಿನ ಬಹಳಜನ ದಲಿತರು ರಾವಣನು ದಲಿತನೆಂದೂ, ತಮ್ಮವನೆಂದೂ ಹೇಳುತ್ತಿರುತ್ತಾರೆ. ಇದಕ್ಕೆ ನೀವು ಏನು ವಿವರಣೆ ಕೊಡುತ್ತೀರಿ.**

**ಉತ್ತರ :–** ನಾನು ಸತ್ಯವನ್ನೇ ಹೇಳುತ್ತೇನೆ. ಅಸತ್ಯವನ್ನು ಹೇಳುವುದಿಲ್ಲ. ಪ್ರತಿ ಮನುಷ್ಯ ಹುಟ್ಟಿದಾಗ ಕೆಳಗಿನವನಾಗಿಯೇ ಹುಟ್ಟುತ್ತಾನೆ. ನಂತರ ಮೇಲಿನವನು ಆಗಬಹುದು, ಆಗದೇ ಹೋಗಬಹುದು. 'ಕೆಳಗಿನವನು, ಮೇಲಿನವನು' ಎಂದು ಹೇಳಿದರೇ ನಿಮಗೆ ಅರ್ಥವಾಗದೇ ಹೋಗಬಹುದು. ಆದ್ದರಿಂದ ಈ ವಿಷಯವನ್ನು ಸ್ವಲ್ಪ ಸವಿವರವಾಗಿ ಹೇಳುವೆನು ಚೆನ್ನಾಗಿ ಬುದ್ಧಿಯನ್ನುಪಯೋಗಿಸಿ ವಿಚಕ್ಷಣೆ ಹೊಂದಿ ಕೇಳಬೇಕೆಂದು ಹೇಳುತ್ತಿದ್ದೇನೆ. ಪೂರ್ವವು ಅಂದರೇ ಪ್ರಪಂಚವು ಹುಟ್ಟಿ ಅದರಲ್ಲಿ ಮನುಷ್ಯರು ಹುಟ್ಟಿದಾಗ ಮನುಷ್ಯರಲ್ಲಿ ಕುಲಗಳಾಗಲೀ, ಮತಗಳಾಗಲೀ ಇಲ್ಲ. ಮಾನವ ಜಾತಿಯೆಲ್ಲಾ ಒಂದಾಗಿ ಇರುತ್ತಿತ್ತು. ಅಂತಹ ಸಮಯದಲ್ಲಿ ಸೂರ್ಯನ ಮೂಲಕ ಭೂಮಿಮೇಲೆ ಜ್ಞಾನವು ತಿಳಿಯಲ್ಪಟ್ಟಿದೆ. ಮೊದಲು 'ಮನುವು' ಎಂಬ ವ್ಯಕ್ತಿಗೆ ದೈವಜ್ಞಾನ ತಿಳಿದಾಗ ನಂತರ ಭೂಮಂಡಲ ವೆಲ್ಲವೂ ಕ್ರಮೇಣ ವಿಸ್ತರಿಸಿದೆ. ಆ ವಿಧವಾಗಿ ಪ್ರಪಂಚ ವ್ಯಾಪ್ತವಾಗಿ ಜ್ಞಾನವು ವ್ಯಾಪಿಸಿದರೂ ಅದರಲ್ಲಿ ಕೆಲವರು ಮಾತ್ರ ಜ್ಞಾನಿಗಳಾಗಿ ತಯಾರಾಗಿ ಉಳಿದವರೆಲ್ಲರು ಅಜ್ಞಾನಿಗಳಾಗಿಯೇ ಇದ್ದರು. ಆಗ ಜ್ಞಾನಿಗಳು, ಅಜ್ಞಾನಿಗಳು ಎಂದು ಮನುಷ್ಯರಲ್ಲಿ ಎರಡು ಗುಂಪುಗಳು ಏರ್ಪಟ್ಟಿವೆ. ಪ್ರಪ್ರಥಮವಾಗಿ ಮನುಷ್ಯರಲ್ಲಿ ಜ್ಞಾನ, ಅಜ್ಞಾನ ಎಂದು ಎರಡು ಗುಂಪುಗಳು ಏರ್ಪಟ್ಟಿರುವಾಗ ಜ್ಞಾನ ತಿಳಿದಿರುವವರು ಮೇಲಿನವರೆಂದು, ಜ್ಞಾನ ತಿಳಿಯದವರು ಕೆಳಗಿನವರೆಂದು ಹೇಳಲ್ಪಡುತ್ತಿದ್ದರು. ಜ್ಞಾನ ತಿಳಿದಿರುವವರು ಬಹಳ ಕಡಿಮೆ ಸಂಖ್ಯೆಯಲ್ಲಿ ಸಾವಿರಜನಕ್ಕೆ ಒಬ್ಬನು ಇರುವಾಗ, ಉಳಿದವರೆಲ್ಲರೂ ಅಜ್ಞಾನಿಗಳಾಗಿ ಇರುತ್ತಿದ್ದರು. ಸಾವಿರಜನಕ್ಕಾಗಲೀ, ಕೆಲವು ಸಾವಿರಜನಕ್ಕಾಗಲೀ ಒಬ್ಬ ಜ್ಞಾನಿ ಇರುವಾಗ

ಆತನನ್ನು ಅಜ್ಞಾನಿಗಳೆಲ್ಲರೂ ಜ್ಞಾನ ತಿಳಿದವನೆಂದು ಗೌರವಿಸುತ್ತಿದ್ದರು. ಅಪರೂಪವಾಗಿರುವ ಜ್ಞಾನಿಗಳು ಮೇಲಿನವರಾಗಿ ಇರುವಾಗ ಉಳಿದ ಜ್ಞಾನವಿಲ್ಲದವರೆಲ್ಲರೂ ಕೆಳಗಿನವರಾಗಿ ಇರುತ್ತಿದ್ದರು.

ಮೇಲಿನವರಾಗಿ ಇರುವ ಜ್ಞಾನಿಗಳು ಅಲ್ಲಲ್ಲಿ ಇದ್ದರೂ ಅವರು ಉಳಿದ ಪ್ರಜೆಗಳಿಗೆ ಜ್ಞಾನವನ್ನು ಬೋಧಿಸುವವರಾಗಿ ಇರುತ್ತಿದ್ದರು. ಜ್ಞಾನವನ್ನು ಬೋಧಿಸುವವರು ಉಳಿದ ಪ್ರಜೆಗಳಿಗೆ ಗುರುಗಳಾಗಿ ಇರುತ್ತಿದ್ದರು. ಗುರುಗಳಾಗಿ ಇದ್ದ ಬೋಧಕರನ್ನು ಪ್ರಜೆಗಳು ಗೌರವ ಭಾವದಿಂದ ಉನ್ನತವಾದ ಸ್ಥಾನವನ್ನು ಕೊಟ್ಟು ಅವರು ಕೆಳಗೆ ಕುಳಿತುಕೊಳ್ಳುತ್ತಿದ್ದರು. ಜ್ಞಾನಿಗಳಾದ ಬೋಧಕರು ಮೇಲೆ ಕುಳಿತುಕೊಂಡು ಅಜ್ಞಾನಿಗಳಾದ ಪ್ರಜೆಗಳು ಕೆಳಗೆ ಕುಳಿತುಕೊಳ್ಳುವುದರಿಂದ ಬೋಧಕರು ಕೆಳಗೆ ಕುಳಿತುಕೊಂಡ ಪ್ರಜೆಗಳನ್ನು ಮಾದಿಗರು ಎಂದು ಹೇಳುತ್ತಿದ್ದರು. ಸೃಷ್ಠಿ ಆದಿಯಲ್ಲಿ ಮೊದಲು ಭೂಮಿಮೇಲೆ ಜ್ಞಾನ ತಿಳಿದಾಗ ಈ ವಿಧವಾಗಿ ಮೇಲಿನವರು, ಕೆಳಗಿನವರೆಂದು ಎರಡು ಗುಂಪುಗಳು ಏರ್ಪಟ್ಟಾಗ! ಅದರಲ್ಲಿ ಮೇಲಿನವರು ಕೆಳಗಿನವರನ್ನು ನಮಗಿಂತ ಕೆಳಗಿನವರೆಂಬ ಭಾವನೆಯಿಂದ ಮಾದಿಗರು (ಕೆಳಗಿನವರು) ಎಂದು ಹೇಳುತ್ತಿದ್ದರು. ಆ ವಿಧವಾಗಿ ಮಾದಿಗರು ಎಂದು ಜ್ಞಾನಿಗಳಿಂದ ಕರೆಯಲ್ಪಟ್ಟವರು ಹೆಚ್ಚಾಗಿ ಇರುತ್ತಿದ್ದರು. ಈ ದಿನ ಕೂಡಾ ಮಾದಿಗರು ಎನ್ನುವವರು ಮನುಷ್ಯರಲ್ಲಿ ಇದ್ದರೂ ಅವರನ್ನು ಒಂದು ಕುಲವಾಗಿ ಲೆಕ್ಕಿಸಿ ಹೇಳುತ್ತಿದ್ದಾರೆ. ವಾಸ್ತವಕ್ಕೆ ಮಾದಿಗರು ಎನ್ನುವುದು ಒಂದು ಕುಲವಲ್ಲ. ಮೇಲಿನವರು, ಕೆಳಗಿನವರು ಎಂದು ಮನುಷ್ಯರು ಎರಡು ಗುಂಪುಗಳಾಗಿ ಕರೆಯಲ್ಪಟ್ಟ ನಂತರ ಸ್ವಲ್ಪ ಕಾಲಕ್ಕೆ ಕುಲಗಳು ಏರ್ಪಟ್ಟಿವೆ. ಕುಲಗಳೆಲ್ಲವು ಕೆಳಗಿನವರಾದ ಅಜ್ಞಾನಿಗಳಿಂದಲೇ ಏರ್ಪಟ್ಟಿವೆ. ಮೇಲಿನವರಿಂದ ಕುಲಗಳು ಏರ್ಪಡಲಿಲ್ಲ. ಕೆಳಗಿನವರು ಅನೇಕ ಕುಲಗಳಾಗಿ ಸೀಳಿಹೋಗಿರುವಾಗ, ಬಹಳ ಕಡಿಮೆ ಯಾಗಿರುವ ಮೇಲಿನವರು ತಮ್ಮದು ಬ್ರಾಹ್ಮಣ ಕುಲವೆಂದು ಹೇಳಿಕೊಂಡಿದ್ದಾರೆ. ಅದಕ್ಕೆ ವಿವರಣೆ ಕೊಡುತ್ತಾ ಬ್ರಹ್ಮಜ್ಞಾನವನ್ನು ತಿಳಿದವರು ಎಲ್ಲರೂ "ಬ್ರಾಹ್ಮಣರು" ಎಂದು ಹೇಳಿದ್ದಾರೆ. ಬ್ರಹ್ಮ ಅಂದರೇ ದೇವರು. ಬ್ರಹ್ಮ ಜ್ಞಾನ ಎಂದರೇ ದೈವಜ್ಞಾನವೆಂದು ಅರ್ಥ.

ಬ್ರಹ್ಮ ಜ್ಞಾನವನ್ನು ತಿಳಿದವರೆಲ್ಲರೂ ಒಂದು ಕುಲವಾಗಿ ಏರ್ಪಟ್ಟು ನಾವು ಮೇಲಿನವರೆನ್ನುತ್ತಾ ಉಳಿದವರನ್ನು ನಮ್ಮ ಕೆಳಗಿನವರೆಂದು ಹೇಳುತ್ತಿರುವಾಗ, ಕೆಳಗಿನವರಾದ ಅಜ್ಞಾನಿಗಳು ಸಮಾಜದಲ್ಲಿ ಅನೇಕ ಕೆಲಸಗಳನ್ನು ಮಾಡುತ್ತಾ ವೃತ್ತಿ ಪ್ರಕಾರ ಕುಲದ ಹೆಸರನ್ನು ಹೇಳಿಕೊಳ್ಳುತ್ತಾ ಹೋಗಿದ್ದಾರೆ. ಕಮ್ಮಾರ, ಕುಂಬಾರ, ಅಗಸ, ರೆಡ್ಡಿ, ಒಕ್ಕಲಿಗ, ಎಂದು ಎಷ್ಟೋ ಕುಲಗಳು ಏರ್ಪಟ್ಟಿವೆ. ಎಷ್ಟು ಕುಲಗಳಾಗಿ ಮನುಷ್ಯರು ಸೀಳಿಹೋದರೂ ಅವರೆಲ್ಲರೂ ಜ್ಞಾನ ತಿಳಿಯದವರಾಗಿರುವುದರಿಂದ ಅವರನ್ನೆಲ್ಲರನ್ನು ಮಾದಿಗ ಗುಂಪಿನವ ರೆಂದು ಹೇಳಬಹುದು. **ಬ್ರಹ್ಮ ಜ್ಞಾನವನ್ನು ತಿಳಿದವರು ಬ್ರಾಹ್ಮಣರು.** ಬ್ರಹ್ಮಜ್ಞಾನವನ್ನು ತಿಳಿಯದವರು ಮಾದಿಗರೆಂದು ಹೇಳುವುದಕ್ಕೆ ಅವಕಾಶವಿದೆ. ಆದರೂ ಕೆಳಗಿನವರಿಂದ ಎಷ್ಟೋ ಕುಲಗಳು ಸೀಳಿಹೋಗಿರುವಾಗ ಕೊನೆಗೆ ಕೆಲವರು ಯಾವ ಕುಲದೊಳಗೆ ಹೋಗದವರಾಗಿ ಮಾದಿಗರಾಗಿಯೇ ಉಳಿದಿದ್ದಾರೆ. ಈ ದಿನ ಅನೇಕ ಕುಲದವರಾಗಿ ಇರುವವರೆಲ್ಲರೂ 'ಮಾ ದಿಗ' ಎನ್ನುವ ಗುಂಪಿಗೆ ಸೇರಿರುವವರೇ. ಕೃತಯುಗದಲ್ಲಿಯೇ ಕುಲಗಳು ತಯಾರಾಗಿರುವಾಗ, ಕಲಿಯುಗದಲ್ಲಿ ಮತಗಳು ಕೂಡಾ ತಯಾರಾಗಿವೆ. ಕೃತಯುಗ, ತ್ರೇತಾಯುಗ, ದ್ವಾಪರಯುಗದಲ್ಲಿ ಕುಲಗಳು ಅನೇಕ ಇವೆ. ಕಲಿಯುಗದಲ್ಲಿ ಮಾದಿಗರಿಂದ ಇನ್ನು ಕೆಲವು ಕುಲಗಳು ಹುಟ್ಟಿಬಂದಿವೆ. ತ್ರೇತಾಯುಗದಲ್ಲಿಯೇ ವಾಲ್ಮೀಕಿಯಿಂದ ಬೇಡರಕುಲ ಇರುವಹಾಗೆ, ರಾಮನನ್ನು ದೂಷಿಸಿದ ಅಗಸನಿಂದ ಅಗಸರು ತ್ರೇತಾಯುಗದಲ್ಲಿಯೇ ಇರುವಹಾಗೆ ತಿಳಿಯುತ್ತಿದೆ. ಯಾವ ಯುಗದಲ್ಲಿ ಎಷ್ಟು ಕುಲಗಳು ಬಂದರೂ ಅವುಗಳಿಗೆ ಮೂಲಜನ್ಮ ಮಾದಿಗರು ಎನ್ನುವ ಗುಂಪಿನಿಂದಲೇ ಎಂದು ತಿಳಿಯಬೇಕು.

ಕಲಿಯುಗದಲ್ಲಿ ಮೂರು ಸಾವಿರ ವರ್ಷಗಳು ಕಳೆದ ನಂತರ ಅಂದರೇ ಇಲ್ಲಿಗೆ ಎರಡು ಸಾವಿರ ವರ್ಷಗಳ ಪೂರ್ವವು ಮಹಾಜ್ಞಾನಿಯಾದ ಯೇಸು ಜನ್ಮಿಸಿದ್ದಾನೆ. ಆತನು ಜ್ಞಾನಿ ಆಗಿರುವುದರಿಂದ ಆತನು ತನ್ನನ್ನು ತಾನು ಮೇಲಿನವನೆಂದೂ, ಜ್ಞಾನ ತಿಳಿಯದ ಎಲ್ಲ ಕುಲದವರನ್ನು ಕೆಳಗಿನ

ಮಾದಿಗರೆಂದು ಹೇಳಿದ್ದಾನೆ. ಈ ವಿಷಯವನ್ನು ಬೈಬಲ್ ಗ್ರಂಥದಲ್ಲಿ ಯೋಹಾನ್ ಸುವಾರ್ತೆಯಲ್ಲಿ 8ನೇ ಅಧ್ಯಾಯದಲ್ಲಿ 23ನೇ ವಚನದಲ್ಲಿ ಹೀಗೆ ಹೇಳಿದ್ದಾರೆ ನೋಡಿರಿ. **(ಯೋ, 8–23) "ನೀವು ಕೆಳಗಿನವರು, ನಾನು ಮೇಲಿರುವವನು, ನೀವು ಈ ಲೋಕಸಂಬಂಧಿಕರು, ನಾನು ಈ ಲೋಕ ಸಂಬಂಧಿಕನು ಅಲ್ಲ"** ಎಂದು ಹೇಳಿದ್ದಾನೆ. ಇದನ್ನನುಸರಿಸಿ ನೋಡಿದರೆ ಜ್ಞಾನಿಯಾದವನು ಯಾರಾದರೂ ಮೇಲಿನವನೇಯೆಂದು, ಜ್ಞಾನ ತಿಳಿಯದ ಯಾವ ಕುಲದವ ರಾದರೂ ಮಾದಿಗರೇಯೆಂದು ಸ್ಪಷ್ಟವಾಗಿ ತಿಳಿಯುತ್ತಿದೆ. ನಾನು ಇಲ್ಲಿಯವರೆಗು ಹೇಳಿರುವ 'ಮೇಲಿನವರು, ಕೆಳಗಿನವರು' ಎಂಬ ಸಮಾಚಾರಕ್ಕೆ ಯೇಸು ಹೇಳಿರುವ ವಾಕ್ಯವು ಸಾಕ್ಷಿಯಾಗಿದೆ. ಮೇಲಿನವರೆಲ್ಲರೂ ಬ್ರಾಹ್ಮಣರಾಗಿ ಭಾರತದೇಶದಲ್ಲಿ ಕರೆಯಲ್ಪಡುತ್ತಿದ್ದಾರೆ. ಬ್ರಾಹ್ಮಣ ಎಂಬ ಹೆಸರು ಇತರ ದೇಶಗಳಲ್ಲಿ ಇಲ್ಲದೇ ಹೋದರೂ ಮೇಲಿನವರೆಂಬ ಗುಂಪು ಇದೆಯೆಂದು ಕಲಿಯುಗ ದಲ್ಲಿಯೇ ಹೇಳಿರುವ ಯೇಸು ಪ್ರಭುವಿನ ಮಾತು ಸಾಕ್ಷಿಯಾಗಿದೆ.

ಈ ದಿನ ಭಾರತದೇಶದಲ್ಲಿ ಬ್ರಾಹ್ಮಣ ಕುಲವಿದೆ, ನಂತರ ಉಳಿದ ಕುಲಗಳಿವೆ. ಉಳಿದ ಎಷ್ಟು ಕುಲಗಳಿದ್ದರೂ ಬ್ರಾಹ್ಮಣ ಕುಲವೇ ಶ್ರೇಷ್ಠವೆಂದು ಹೇಳುತ್ತಿದ್ದಾರೆ. ಜ್ಞಾನಿಗಳಾದವರು ಆ ದಿನವಾಗಲೀ, ಈ ದಿನವಾಗಲೀ ಉಳಿದ ಕುಲಗಳಿಗಿಂತ ಶ್ರೇಷ್ಠರಾಗಿ ಹೇಳಲ್ಪಡುತ್ತಾ ಬ್ರಾಹ್ಮಣರಾಗಿ ಇದ್ದಾರೆ. ತ್ರೇತಾಯುಗದಲ್ಲಿ ರಾವಣಬ್ರಹ್ಮ ಮನುಷ್ಯನಾಗಿಯೇ ಹುಟ್ಟಿದಾಗ ಚಿಕ್ಕವಯಸ್ಸಿನಲ್ಲಿ ಜ್ಞಾನವಿಲ್ಲದವನಾಗಿ ಕಾಣಿಸಿದರೂ, ನಂತರ ಯುಕ್ತ ವಯಸ್ಸಿನಿಂದ ಜ್ಞಾನವನ್ನು ಹೇಳುತ್ತಿದ್ದಾನೆ ಆದಕಾರಣ ಆತನನ್ನು ಬ್ರಾಹ್ಮಣನಾಗಿಯೇ ಹೇಳಬಹುದು. ಸ್ವಲ್ಪಕಾಲ ಕಳೆದ ನಂತರ ಸುಮಾರು 25 ಇಲ್ಲವೇ 30 ವರ್ಷಗಳಿಂದ ರಾವಣಬ್ರಹ್ಮ, ಜ್ಞಾನವನ್ನು ಬೋಧಿಸುವ ಬೋಧಕನಾದ್ದರಿಂದ ಆತನನ್ನು ಬ್ರಾಹ್ಮಣನೆಂದು ಹೇಳುತ್ತಿದ್ದೇವೆ. ಯುಕ್ತವಯಸ್ಸು ಬರುವ ಮುನ್ನವೇ ಆತನು ಕೆಳಗಿನ ಗುಂಪಿಗೆ ಸೇರಿದವ ನಾದ್ದರಿಂದ ಆ ದಿನ ಮಾ ದಿಗ ಎಂಬ ಹೆಸರನ್ನು ಹೊಂದಿದವರೆಲ್ಲರೂ 'ರಾವಣನು ನಮ್ಮವನು' ಎಂದು ಹೇಳುತ್ತಿದ್ದರು. ಆದರೇ ಈ ದಿನ ಕೂಡಾ

ರಾವಣನು ನಮ್ಮವನು ಎನ್ನುವುದರಲ್ಲಿ ತಪ್ಪಿಲ್ಲ. ಒಂದುಕಾಲದಲ್ಲಿ ಸ್ವಲ್ಪ ವಯಸ್ಸು ಬರುವವರೆಗು ಮಾದಿಗನಾಗಿ ಇದ್ದ ರಾವಣನು ಬ್ರಾಹ್ಮಣನಾಗಿ ಇತರರಿಂದ ಕರೆಯಲ್ಪಟ್ಟಿದ್ದಾನೆಂಬ ವಿಷಯವು ಈ ದಿನ ಅಜ್ಞಾನಿಗಳಾಗಿರುವವರಿಗೆ ತಿಳಿದಿಲ್ಲ. ಕುಲಗಳ ವ್ಯವಸ್ಥೆ ಹೇಗೆ ಏರ್ಪಟ್ಟಿದೆಯೆಂದು ತಿಳಿಯದವರು ಇಂದಿಗೂ ಮಾದಿಗರಾಗಿ ಉಳಿದು ಹೋಗಿರುವವರು ರಾವಣನು ನಮ್ಮವನು ಎಂದು ಆ ದಿನ, ಈ ದಿನ ಹೇಳುತ್ತಲೇ ಇದ್ದಾರೆ. ಇದನ್ನೆಲ್ಲವನ್ನು ಗಮನಿಸಿದರೇ 30 ವರ್ಷಗಳ ನಂತರ ರಾವಣನು ಬ್ರಾಹ್ಮಣನೆಂದು ಹೇಳುತ್ತಿದ್ದೇನೆ. ಈ ವಿಷಯವನ್ನು ತಿಳಿಯದ ಕೆಳಗಿನವರು ಈ ದಿನ ದಲಿತರಾಗಿ ಕರೆಯಲ್ಪಡುತ್ತಿದ್ದರೂ ರಾವಣಬ್ರಹ್ಮ ನಮ್ಮವನು ಎನ್ನುತ್ತಿದ್ದಾರೆ. ಅವರು ಹಾಗೆ ಅನ್ನುವುದರಲ್ಲಿ ತಪ್ಪಿಲ್ಲ. ನಾನು 'ರಾವಣನು ಬ್ರಾಹ್ಮಣನು' ಎನ್ನುವುದರಲ್ಲಿ ಕೂಡಾ ತಪ್ಪಿಲ್ಲ. 30 ವರ್ಷಗಳ ವಯಸ್ಸಿನವರೆಗು ಒಂದು ಜಾತಿಯಾಗಿ (ಮಾದಿಗ ಜಾತಿಯಾಗಿ), 30 ವರ್ಷಗಳ ನಂತರ ಬ್ರಾಹ್ಮಣನಾಗಿ ಕರೆಯಲ್ಪಡುತ್ತಿದ್ದಾನೆ. ಒಂದು ಮನೆಯ ಮಗ ಸ್ವಲ್ಪಕಾಲದ ನಂತರ ಇನ್ನೊಂದು ಮನೆಗೆ ಅಳಿಯನಾಗಿದ್ದಾನೆ ಎಂದುಕೊಳ್ಳೋಣ. ಆಗ ಅಳಿಯ ಎಂದು ಕರೆಯಲ್ಪಡುತ್ತಾನೆ. ಆದರೇ ತವರು ಮನೆಯವರು ತಮ್ಮವನನ್ನು ಮಗ ಎಂದು ಕರೆಯುವುದರಲ್ಲಿ ತಪ್ಪಿಲ್ಲ. ಅತ್ತೆಯ ಮನೆಯವರು ಅಳಿಯ ಎಂದು ಕರೆಯುವುದರಲ್ಲಿ ತಪ್ಪಿಲ್ಲ. ಅದೇ ವಿಧವಾಗಿ ತವರು ಮನೆಯಂತಹ ಮಾದಿಗರು ರಾವಣನನ್ನು ನಮ್ಮವನು ಎನ್ನುವುದರಲ್ಲಿ ತಪ್ಪಿಲ್ಲ. ಹಾಗೆಯೇ ಮೇಲಿನವರು ನಮ್ಮ ಬ್ರಾಹಣನು ಎನ್ನುವುದರಲ್ಲಿ ತಪ್ಪಿಲ್ಲ. ಆದ್ದರಿಂದ ನಾನು 'ರಾವಣಬ್ರಹ್ಮ ಬ್ರಾಹ್ಮಣನು' ಎನ್ನುವುದರಲ್ಲಿ ತಪ್ಪಿಲ್ಲ. ಕೆಳಗಿನವರಾದ ದಲಿತರು 'ರಾವಣನು ನಮ್ಮವನು' ಎನ್ನುವುದರಲ್ಲಿ ಕೂಡಾ ತಪ್ಪಿಲ್ಲ.

**ಪ್ರಶ್ನೆ :– ಸುರರು ಎಂದರೇ ದೇವತೆಗಳೆಂದೂ, ಅಸುರರೆಂದರೇ ರಾಕ್ಷಸರೆಂದು ಬಹಳಜನ ಹೇಳುತ್ತಿರುತ್ತಾರೆ. ರಾವಣನು ಅಸುರ ಜಾತಿಯವನೆಂದೂ, ರಾಕ್ಷಸನೆಂದೂ ಹೇಳುತ್ತಿರುತ್ತಾರೆ. ನೀನು ಈಗ ಬ್ರಾಹ್ಮಣ ಎನ್ನುವುದು ಸರಿಹೋ ಗುತ್ತದಾ?**

**ಉತ್ತರ :–** ರಾವಣನು ಮೊದಲು ಚಿಕ್ಕವಯಸ್ಸಿನಲ್ಲಿ ಮಾದಿಗನಾದರೂ ವಯಸ್ಸು ಬೆಳೆದಂತೆಲ್ಲಾ ಹೊತ್ತಿಗೆ ಬ್ರಹ್ಮಜ್ಞಾನ ತಿಳಿದು ಬ್ರಾಹ್ಮಣನಾಗಿದ್ದಾನೆ. ಬ್ರಹ್ಮಜ್ಞಾನ ತಿಳಿದವನು ಶರೀರ ಎಲ್ಲದಕ್ಕು ಆತ್ಮ ಅಧಿಪತಿಯೆಂದು ತಿಳಿದಿರುತ್ತಾನೆ. ಶರೀರವು ಆತ್ಮ ಅಧೀನದಲ್ಲಿರುವಾಗ, ಶರೀರದಲ್ಲಿ ನಡೆಯುವ ಆತ್ಮ ಕೆಲಸಗಳಿಗೆ ಆತಂಕ ಉಂಟಾಗದಂತೆ ನೋಡಿಕೊಳ್ಳುವುದು ಜ್ಞಾನಿಯಾದವನು ಮಾಡಬೇಕಾದ ಕೆಲಸ. ಆತ್ಮ ಆಹಾರವನ್ನು ವಿನಿಯೋಗಿಸಿಕೊಂಡು, ಆಹಾರದಲ್ಲಿನ ಪೋಷಕ ಪದಾರ್ಥಗಳ ಮೂಲಕ ಶರೀರಕ್ಕೆ ಶಕ್ತಿಕೊಟ್ಟು ಕದಲಿಸುವುದು ಆತ್ಮ ಕೆಲಸವಾಗಿದೆ. ಆದ್ದರಿಂದ ಮನುಷ್ಯನಾದವನು ಜ್ಞಾನವನ್ನು ತಿಳಿದು ಆತ್ಮಗೆ ಅವಶ್ಯವಾದ ಆಹಾರವನ್ನು ಭುಜಿಸುತ್ತಾನೆ. ಅಷ್ಟೇ ಹೊರತು ಆಹಾರವಲ್ಲದ ಮತ್ತಿನ ಪದಾರ್ಥಗಳನ್ನಾಗಲೀ, ಮತ್ತಿನ ಪಾನೀಯವನ್ನಾಗಲೀ ಆಹಾರವಾಗಿ ಸ್ವೀಕರಿಸುವುದಿಲ್ಲ. ಒಂದುವೇಳೆ ಸ್ವೀಕರಿಸಿದರೇ ಅದು ಆತ್ಮಕ್ಕೆ ವಿನಿಯೋಗಪಡುವ ಶಕ್ತಿಯಾಗಿ ಅಲ್ಲದೇ, ಆತ್ಮ ಕೆಲಸಗಳಿಗೆ ಆತಂಕಪಡಿಸುವುದಾಗಿ ಇರುತ್ತದೆ. ಈ ದಿನ ಮತ್ತಿನ ಪದಾರ್ಥಗಳು ಎಷ್ಟೋ ಇದ್ದರೂ ಪೂರ್ವವು ಮತ್ತಿನ ಪದಾರ್ಥಗಳಿಗಿಂತ ಮತ್ತಿನ ಪಾನೀಯಗಳೇ ಹೆಚ್ಚಾಗಿ ಇರುತ್ತಿದ್ದವು. ಆ ಕಾಲದಲ್ಲಿ ಮತ್ತಿನ ಪಾನೀಯಗಳನ್ನು ಸುರಾಪಾನಗಳು ಎನ್ನುತ್ತಿದ್ದರು. ಸುರ ಎಂದರೇ ಮತ್ತು (ನಶೆ) ಎಂದು, ಪಾನ ಎಂದರೇ ಕುಡಿಯುವುದೆಂದು ಅರ್ಥವಿದೆ. ಸುರಾಪಾನ ಮಾಡುವುದು ಎಂದರೇ ಮತ್ತಿನ ಪಾನೀಯಗಳನ್ನು ಕುಡಿಯುವುದೆಂದು ಅರ್ಥ.

ಸುರ ಎಂದು ಮತ್ತಿನ ಪಾನೀಯಕ್ಕೆ ಹೆಸರು ಇಡುವುದರಲ್ಲಿ ಒಂದು ಅರ್ಥವಿದೆ. **ಸು** ಎಂದರೇ ಒಳ್ಳೆಯದೆಂದೂ, **ರ** ಎಂದರೇ ರಹಿತ (ಇಲ್ಲದೇ ಮಾಡುವುದು) ಎಂದು ಅರ್ಥ. ಅದರ ಪ್ರಕಾರ **'ಸುರ'** ಎಂದರೇ **'ಒಳ್ಳೆಯದನ್ನು ಇಲ್ಲದೇ ಮಾಡುವುದು'** ಎಂದು ಹೇಳಬಹುದು. ಈ ಅರ್ಥದ ಪ್ರಕಾರ ಸುರಾಪಾನ ಮಾಡಿದವನು ಅಂದರೇ ಮತ್ತಿನ ಪಾನೀಯವನ್ನು ಕುಡಿದವನು ಒಳ್ಳೆಯವನಾದರೂ ಕೆಟ್ಟವನಾಗಿ ಬದಲಾಗುವನು. ವಿಚಕ್ಷಣೆ ಇಲ್ಲದವನಾಗಿ ಒಳ್ಳೆಯದಾಗಿ ಪ್ರವರ್ತಿಸದೆ ಅಮಲಿನಲ್ಲಿ ಕೆಟ್ಟದನ್ನು ಮಾಡುವುದಕ್ಕೆ ಪ್ರಾರಂಭಿಸುವನು. ಆದ್ದರಿಂದ

ಮತ್ತು ಪಾನೀಯಗಳು ಸ್ವೀಕರಿಸಿದವನು ಒಳ್ಳೆಯವನಾದರೂ ಮತ್ತಿನಲ್ಲಿ ಕೆಟ್ಟವನಾಗಿ ಬದಲಾಗಿ ಕೆಟ್ಟದಾಗಿ ಮಾತನಾಡು ವುದು, ಕೆಟ್ಟದಾಗಿ ಪ್ರವರ್ತಿಸುವುದು ಮಾಡುತ್ತಾನೆ. ಅಷ್ಟೇ ಅಲ್ಲದೇ ಬಾಯಿಂದ ಮಾತು ತಡವರಿಸುತ್ತಾ ಬರುತ್ತಿರುತ್ತದೆ. ಹಾಗೆಯೇ ಮತ್ತನ್ನು ಕುಡಿದವನು ಸರಿಯಾಗಿ ನಡೆಯಲಾರದೆ ಹೋಗುವನು. ಆದ್ದರಿಂದ ಶರೀರದಲ್ಲಿ ನಡೆಯುವ ಆತ್ಮ ಮಾಡುವ ಕೆಲಸಗಳಿಗೆ ಆತಂಕ ಉಂಟುಮಾಡುವುದು ಮತ್ತಿನ ಒಂದು ಕೆಲಸವಾಗಿರುವುದರಿಂದ ಮತ್ತಿನ ಪಾನೀಯವನ್ನು ಸ್ವೀಕರಿಸಿದವನು ಆತ್ಮಕ್ಕೆ ಆತಂಕ ಉಂಟುಮಾಡಿದಂತೆಯೇ ಆಗುತ್ತದೆ. ಆದ್ದರಿಂದ ಮತ್ತನ್ನು ಕುಡಿಯುವವನು ಆತ್ಮಕ್ಕೆ ದ್ರೋಹ ಮಾಡಿದಂತಾಗುತ್ತದೆ. ಇವೆಲ್ಲವನ್ನು ಗ್ರಹಿಸಿದ ಹಿರಿಯರು ಮತ್ತನ್ನು **ಸುರ** ಎಂದು ಕರೆದಿದ್ದಾರೆ. ಸುರ ಎಂದರೇ ಒಳ್ಳೆಯದನ್ನು ಇಲ್ಲದೇ ಮಾಡುವುದೆಂದು ತಿಳಿದುಕೊಂಡಿದ್ದೇವೆ.

ಪೂರ್ವವು ಮತ್ತು ಪಾನೀಯಗಳನ್ನು ಕುಡಿಯುವವರನ್ನು ಸುರಾಪಾನ ಮಾಡುವವರೆಂದು ಹೇಳುತ್ತಿದ್ದರು. ಸುರಾಪಾನ ಮಾಡುವವರನ್ನು **ಸುರರು** ಎಂದು ಕರೆಯುತ್ತಿದ್ದರು. ಸುರಾಪಾನ ಮಾಡದವರನ್ನು ಅಂದರೇ ಮತ್ತನ್ನು ಕುಡಿಯದವರನ್ನು ಅಸುರರು ಎಂದು ಕರೆಯುತ್ತಿದ್ದರು. ಅಸುರರು ಎಂದರೇ ಕೆಟ್ಟದನ್ನು ಮಾಡದವರೆಂದು, ಸುರರು ಎಂದರೇ ಮತ್ತಿನಲ್ಲಿ ಕೆಟ್ಟದನ್ನು ಮಾಡುವವರೆಂದು, ಒಳ್ಳೆಯದು ಇಲ್ಲದವರೆಂದು ಹೇಳಬಹುದು. ಅಸಲಾದ ಸತ್ಯ ಹೀಗಿರುವಾಗ ಸುರರು ಎಂದರೇ ದೇವತೆಗಳೆಂದು, ಅಸುರರು ಎಂದರೇ ರಾಕ್ಷಸರೆಂದು ಹೇಳುವುದು ಪೂರ್ತಿ ತಪ್ಪಾಗಿ ಹೇಳಿದಂತಾಗುತ್ತದೆ. ದೇವತೆಗಳು ಸುರಾಪಾನವನ್ನು ಮಾಡುವವರು ಎಂದು, ಅಸುರರು ಎಂದರೇ ಸುರಾಪಾನವನ್ನು ಮಾಡದೆ ಇರುವವರೆಂದು ಅರ್ಥ. ಅಂಥಾದ್ದನ್ನು ರಾಕ್ಷಸರು ಕೆಟ್ಟವರೆಂದು, ದೇವತೆಗಳು ಒಳ್ಳೆಯವರೆಂದು ಹೇಳುವುದು ವಿಚಿತ್ರವಾಗಿದೆ. ವಾಸ್ತವವಾಗಿ ರಾವಣಬ್ರಹ್ಮ ಸುರಾಪಾನವನ್ನು ಮಾಡದಿರುವವನಾಗಿದ್ದನು. ಆದ್ದರಿಂದ ರಾವಣಬ್ರಹ್ಮನಿಗೆ ಒಳ್ಳೆಯ ಹೆಸರು ಪ್ರಜೆಗಳಲ್ಲಿ ಇಂದಿಗೂ ಇದೆ. ಎಷ್ಟೋಜನ

ರಾವಣಬ್ರಹ್ಮನನ್ನು ಕೆಟ್ಟವನೆಂದರೂ, ಸ್ವಲ್ಪಜನರಾದರೂ ಆತನನ್ನು ಒಳ್ಳೆಯವನೆಂದು ಅಭಿಮಾನಿಸುತ್ತಿದ್ದಾರೆ. ರಾವಣನು ಕೆಟ್ಟವನೆನ್ನುವ ಪ್ರಜೆಗಳ ಅಭಿಪ್ರಾಯವನ್ನು ಬದಲಾಯಿಸಿ ಒಳ್ಳೆಯವನೆಂದು ತಿಳಿಸುವ ನಿಮಿತ್ತ ಸುರರು (ದೇವತೆಗಳು) ಎಂದರೇ ಕೆಟ್ಟವರೆಂದು, ಅಸುರರು ಎಂದರೇ ಕೆಟ್ಟದ್ದು ಇಲ್ಲದವರೆಂದು ತಿಳಿಸುತ್ತಿದ್ದೇವೆ.

**ಪ್ರಶ್ನೆ :– ರಾವಣನು ಮಾಂಸಾಹಾರಿ ದೇವತೆಗಳು ಮಾಂಸಾಹಾರಿಗಳಲ್ಲ ಅಲ್ಲವೇ! ಮಾಂಸಾಹಾರಿ ಆಗಿರುವುದರಿಂದ ರಾವಣನನ್ನು ರಾಕ್ಷಸನೆಂದು ಹೇಳಬಹುದಲ್ಲವೇ! ಮಾಂಸಾಹಾರದಿಂದ ಆತನಲ್ಲಿ ರಾಕ್ಷಸ ಲಕ್ಷಣಗಳು ಇರಬಹುದು ಅಲ್ಲವೇ! ಮಾಂಸಾಹಾರವನ್ನು ತಿನ್ನದವರನ್ನು ದೇವತೆಗಳೆಂದೂ, ಮಾಂಸಾಹಾರವನ್ನು ತಿನ್ನುವವರನ್ನು ರಾಕ್ಷಸರೆಂದು ವಿಭಜಿಸಿ ಹೇಳಬಹುದು ಅಲ್ಲವೇ!**

**ಉತ್ತರ :–** ಸತ್ಯ ತಿಳಿಯುವವರೆಗು ಯಾರನ್ನು ಏನೆಂದುಕೊಂಡರೂ ಫರವಾಗಿಲ್ಲ. ಸತ್ಯವನ್ನು ತಿಳಿಯದವರು ನೀವು ಏನೆಂದರೂ ಫರವಾಗಿಲ್ಲ. ಸತ್ಯವನ್ನು ತಿಳಿದ ನಾವು ಹಾಗೆ ಹೇಳುವುದಕ್ಕೆ ಸಾಧ್ಯವಿಲ್ಲ. ಸಸ್ಯಾಹಾರ (ಶಾಖಾಹಾರ), ಮಾಂಸಾಹಾರ ಎಂದು ಎರಡು ವಿಧಗಳಾಗಿ ಆಹಾರವನ್ನು ವಿಭಜಿಸಲಾದ ಮಾತು ಸತ್ಯವೇ. ಆದರೆ ಮನುಷ್ಯರಿಗೆ ಯಾವುದು ಸಸ್ಯಾಹಾರ, ಯಾವುದು ಮಾಂಸಹಾರ ಎಂದು ತಿಳಿಯುತ್ತಿಲ್ಲ. ನಾವು ಈಗ ವಿವರವಾಗಿ ಹೇಳಿಕೊಂಡರೇ **"ಶಾಖೆ (ಕೊಂಬೆ)ಗಳಿಂದ ಹುಟ್ಟಿರುವುದು ಇಲ್ಲವೇ ಶಾಖೆಗಳಿಂದ ಬರುವುದನ್ನು ಶಾಖಾಹಾರ"** ಎನ್ನಬಹುದು. ಶಾಖೆಗಳು ಎಂದರೇ ಕೊಂಬೆಗಳೆಂದು ಅರ್ಥ. ಚಿಕ್ಕಗಿಡದ ಕೊಂಬೆಗಳಾಗಬಹುದು, ಗಿಡದಿಂದ ಅಥವಾ ವೃಕ್ಷದಿಂದ ಲಭ್ಯವಾಗುವ ಹಣ್ಣಾಗಲೀ, ಧಾನ್ಯವಾಗಲೀ ಆಗಬಹುದು. ಧಾನ್ಯ ಮೊದಲುಗೊಂಡು ಚಿಕ್ಕ ಬೀಜಗಳವರೆಗು, ಹಾಗೆಯೇ ಭೂಮಿಯಲ್ಲಿ ಗಡ್ಡೆಗಳು ಮೊದಲುಗೊಂಡು ನೆಲಗಡಲೆ (ಕಡಲೇ ಬೀಜ)ದವರೆಗು ಎಲ್ಲವೂ ಸಸ್ಯಾಹಾರಗಳೇ ಎಂದು ಹೇಳಬಹುದು.

ಮಾಂಸದಿಂದ ಬರುವ ಆಹಾರವನ್ನು ಮಾಂಸಹಾರವೆಂದು ಹೇಳಬಹುದು. ಪ್ರಾಣಿಗಳಿಂದಾಗಲೀ, ಪಕ್ಷಿಗಳಿಂದಾಗಲೀ, ಜಲಚರಗಳಾದ ಮೀನುಗಳು, ಕಪ್ಪೆಗಳು, ಆಮೆಗಳಿಂದಾಗಲೀ ಲಭ್ಯವಾಗುವ ಆಹಾರವನ್ನು ಪ್ರತ್ಯೇಕಿಸಿ ಹೇಳುವುದು ಏನೆಂದರೇ! ಪ್ರಾಣಿಗಳು ಸತ್ತುಹೋದಾಗ ಅವುಗಳ ಮಾಂಸವನ್ನು ಆಹಾರವಾಗಿ ತಿನ್ನಬಹುದು. ಹಾಗೆಯೇ ಪ್ರಾಣಿಗಳು ಬದುಕಿದ್ದಾಗ ಅವುಗಳ ಶರೀರದಲ್ಲಿ ಮಾಂಸದಿಂದ ತಯಾರಾದ ಹಾಲನ್ನು ಮಾಂಸಾಹಾರವಾಗಿ ಹೇಳಬಹುದು. ಗಿಡಗಳು ಶಾಖೆಗಳಿಂದ ತಯಾರಾದ ಕಾಳುಗಳು, ಗಿಡದಿಂದ ಸೋರಿರುವ ನೀರು, ಹಾಲನ್ನು ಆಹಾರವಾಗಿ ಉಪಯೋಗಿಸಿಕೊಳ್ಳುತ್ತಾ ಅವುಗಳನ್ನು ಸಸ್ಯಾಹಾರವಾಗಿಯೇ ಹೇಳುತ್ತಿದ್ದೇವೆ. ಹಾಗೆಯೇ ಪ್ರಾಣಿಯಿಂದ ತಯಾರಾಗಿ ಹೊರಗೆ ಬರುವ ಹಾಲು ಕೂಡಾ ಮಾಂಸಾಹಾರವಾಗಿ ಹೇಳಬಹುದು. ಆದರೇ ಬಹಳಜನ ಪ್ರಾಣಿಗಳ ಹಾಲನ್ನು ಸಸ್ಯಾಹಾರವಾಗಿ ಹೇಳುವುದು ಪೂರ್ತಿ ತಪ್ಪು. ಪ್ರಾಣಿಗಳ ಹಾಲು ಗಿಡದ ಶಾಖೆಗಳಿಂದ ತಯಾರಾಗಿ ಸೋರಲಿಲ್ಲ ಆದಕಾರಣ ಅವು ಶಾಖಾಹಾರವೆಂದು ಹೇಳುವುದಕ್ಕೆ ಸಾಧ್ಯವಿಲ್ಲ. ಯಾರಿಗೆ ತಿಳಿದರೂ, ತಿಳಿಯದೆ ಹೋದರೂ ಹಾಲು ಮಾಂಸಾಹಾರ ಎನ್ನುವುದು ಸತ್ಯ. ಗಿಡದ ಶಾಖೆಗಳಿಂದ ಸೋರಿರುವ ಹಾಲನ್ನು ಕೆಲವರು 'ಗಿಡದ ರಸ' (ನೀರಾ) ಎಂದು ಹೇಳುತ್ತಿದ್ದರು. ಗಿಡದ ಹಾಲು ಯಾವಾದರೂ ಔಷಧ ಗುಣ ಹೊಂದಿರುವ ಆಹಾರವಾಗಿ ಇರುವಾಗ, ಪ್ರಾಣಿಗಳಿಂದ ಸೋರಿರುವ ಹಾಲು ಕೂಡಾ ಔಷಧ ಗುಣಗಳಿರುವ ಆಹಾರವಾಗಿ ಇವೆ.

ಹಸುವಿನ ಹಾಲನ್ನು, ಎಮ್ಮೆಯ ಹಾಲನ್ನು ಉಳಿದ ಯಾವ ಪ್ರಾಣಿಗಳ ಹಾಲನ್ನಾದರೂ ಮಾಂಸಾಹಾರವಾಗಿ ಹೇಳಬಹುದು. ಅಷ್ಟೇ ಅಲ್ಲದೇ ಹಾಲಿನಿಂದ ತಯಾರಾದ ಗಿಣ್ಣ, ಬೆಣ್ಣೆ, ಮೊಸರು, ತುಪ್ಪ, ಮಜ್ಜಿಗೆ ಮೊದಲಾದವು ಯಾವಾದರೂ ಮಾಂಸಾಹಾರವಾಗಿಯೇ ಹೇಳಬಹುದು. ಗಿಡದ ಬೀಜಗಳಿಂದ ತಯಾರಾದ ಎಣ್ಣೆಗಳನ್ನು ಸಸ್ಯಾಹಾರವಾಗಿ ಹೇಳಬಹುದು. ಅದೇ ವಿಧವಾಗಿ ಎಣ್ಣೆಯಂತೆ ಉಪಯೋಗಪಡುವ ತುಪ್ಪವನ್ನು ಮಾಂಸಾಹಾರವಾಗಿ

ಹೇಳಬಹುದು. ಈ ವಿಧವಾಗಿ ಇರುವ ಸಸ್ಯಾಹಾರಗಳನ್ನು, ಮಾಂಸಾಹಾರಗಳನ್ನು ಬೆರೆಸಿ ಮನುಷ್ಯ ತಿನ್ನುವುದು, ಕುಡಿಯುವುದು ಮಾಡಿ ಜೀವಿಸುತ್ತಿದ್ದಾನೆ. ಕೆಲವರು ಪ್ರಾಣಿ ಮಾಂಸವನ್ನು ತಿನ್ನದೇ ಪ್ರಾಣಿಗಳ ಮಾಂಸದಿಂದ ತಯಾರಾಗಿ ಬಂದ ಹಾಲನ್ನು ಕುಡಿಯುತ್ತಾ, ಮೊಸರು, ಬೆಣ್ಣೆ, ತುಪ್ಪವನ್ನು ಆಹಾರವಾಗಿ ತೆಗೆದುಕೊಳ್ಳುತ್ತಾ ನಾವು ಸಸ್ಯಾಹಾರಿಗಳು ಎಂದು ಹೇಳುವುದು ಕಾಣಿಸುವ ಅಸತ್ಯವಾಗಿದೆ. ಪ್ರಾಣಿಗಳಿಂದ ಲಭ್ಯವಾಗುವ ಯಾವುದಾದರೂ ಮಾಂಸಾಹಾರವೇ ಆಗುತ್ತದೆ. ಇದನ್ನು ಅನುಸರಿಸಿ ಸ್ವಲ್ಪ ಸಸ್ಯಾಹಾರವನ್ನು, ಸ್ವಲ್ಪ ಮಾಂಸಾಹಾರವನ್ನು ಮನುಷ್ಯ ಉಪಯೋಗಿಸುತ್ತಿದ್ದಾನೆಂದು ಹೇಳಬಹುದು. ಹಾಗೆಯೇ ಯಾವ ಮನುಷ್ಯ ಸಸ್ಯಾಹಾರವನ್ನಾಗಲೀ, ಇಲ್ಲವೇ ಮಾಂಸಾಹಾರವನ್ನಾಗಲೀ, ಕೇವಲ ಒಂದನ್ನೇ ಉಪಯೋಗಿಸಿ ಬದುಕುತ್ತಿಲ್ಲ. ಎರಡು ವಿಧಗಳ ಆಹಾರವನ್ನು ಸೇರಿಸಿ ಉಪಯೋಗಿಸುತ್ತಿದ್ದಾನೆ. ಕೆಲವರು ಪ್ರತ್ಯೇಕಿಸಿ ಕೆಲವು ಕುಲಗಳಾಗಿ ಇರುವವರು ಮಾಂಸವನ್ನು ತಿನ್ನದೇ ಇದ್ದೂ ಜೀವನವನ್ನು ಸಾಗಿಸುತ್ತಿದ್ದಾರೆ. ಅಷ್ಟು ಮಾತ್ರಕ್ಕೆ ಅವರನ್ನು ಸಸ್ಯಾಹಾರಿಗಳೆಂದು ಹೇಳಬಾರದು. ಮೇಲ್ನೋಟಕ್ಕೆ ಶಾಕಾಹಾರಿಗಳೆಂದು ಹೇಳುವ ಪ್ರತಿ ವ್ಯಕ್ತಿ ಹಾಲನ್ನು, ಮೊಸರನ್ನು, ಅಥವಾ ತುಪ್ಪವನ್ನು ಬಳಸುತ್ತಿದ್ದಾನೆ. ಆದ್ದರಿಂದ ಆತನು ಪೂರ್ತಿ ಸಸ್ಯಾಹಾರಿ ಅಲ್ಲ, ಮಾಂಸಾಹಾರಿ ಎಂದು ಕೂಡಾ ಹೇಳಬಹುದು.

ಅದೇ ವಿಧವಾಗಿ ಪ್ರತಿ ವ್ಯಕ್ತಿ ಮಾಂಸಾಹಾರಿ ಮತ್ತು ಸಸ್ಯಾಹಾರಿಯಾಗಿ ಇದ್ದಾನೆ. ಇವರು ರಾಕ್ಷಸರು, ಇವರು ದೇವತೆಗಳೆಂದು ಮನುಷ್ಯನ ಪ್ರವರ್ತನೆಯನ್ನು, ಗುಣಗಳನ್ನು ಅನುಸರಿಸಿ ಹೇಳಬಹುದು. ಮನುಷ್ಯನಲ್ಲಿನ ಗುಣ ಪ್ರವರ್ತನೆಯನ್ನು ಅನುಸರಿಸಿ ಇವರು ರಾಕ್ಷಸರು, ಇವರು ದೇವತೆಗಳೆಂದು ಹೇಳಬಹುದೆಂದು ಪ್ರಥಮ ದೈವಗ್ರಂಥವಾದ ಭಗವದ್ಗೀತೆಯಲ್ಲಿ ಹೇಳಿದ್ದಾರೆ. ಅಷ್ಟೇ ಹೊರತು ಆಹಾರವನ್ನು ಅನುಸರಿಸಿ ಇವರು ರಾಕ್ಷಸರೆಂದು, ಇವರು ದೇವತೆಗಳೆಂದು ಹೇಳಲಿಲ್ಲ. ಪ್ರತಿ ಮನುಷ್ಯ ಹುಟ್ಟುತ್ತಲೇ ಮಾಂಸಾಹಾರಿಯಾಗಿ ಜೀವನವನ್ನು ಪ್ರಾರಂಭಿಸುತ್ತಿದ್ದಾನೆ. ನಂತರ ಸ್ವಲ್ಪ ಕಾಲ ಬೆಳೆದ ನಂತರ

ಕುಡಿಯುವ ವಯಸ್ಸಿನಿಂದ ತಿನ್ನುವ ವಯಸ್ಸಿಗೆ ಬಂದ ನಂತರ ಸಸ್ಯಾಹಾರವನ್ನು ತಿನ್ನುತ್ತಿದ್ದಾನೆ. ಮೊದಲು ಶಿಶುದಸೆಯಲ್ಲಿ ತಾಯಿಯ ಹಾಲನ್ನು ಕುಡಿಯುವು ದರಿಂದ ಪ್ರತಿ ವ್ಯಕ್ತಿ ಮಾಂಸಾಹಾರಿಯೆಂದೇ ಹೇಳಬಹುದು. ಇದರ ಪ್ರಕಾರ ನಾನು ಸಸ್ಯಾಹಾರಿ ಎಂದು ಯಾವ ಮನುಷ್ಯ ಹೇಳುವುದಕ್ಕೆ ಸಾಧ್ಯವಿಲ್ಲ. ಈಗ ರಾವಣಬ್ರಹ್ಮ ಕೇವಲ ಮಾಂಸಾಹಾರಿಯೆಂದು ಹೇಳಬಹುದಾ? ಹಾಗೆಯೇ ಮಾಂಸವನ್ನು ತಿನ್ನದ ಕೆಲವು ಕುಲದವರನ್ನು ಸಸ್ಯಾಹಾರಿಗಳೆನ್ನಬಹುದಾ? ಯಾರನ್ನೂ ಒಂದೇ ಆಹಾರಕ್ಕೆ ಸಂಬಂಧಿಸಿದವರಾಗಿ ಹೇಳಲಾರೆವು. ಆ ದಿನ ದೇವತೆಗಳೆಂದು ಹೇಳಲ್ಪಟ್ಟವರು ಮಾಂಸಾಹಾರ, ಸಸ್ಯಾಹಾರ ತೆಗೆದು ಕೊಳ್ಳುತ್ತಿದ್ದರು, ಹಾಗೆಯೇ ರಾಕ್ಷಸರೆನ್ನುವವರು ಮಾಂಸಾಹಾರವನ್ನು ಸಸ್ಯಾಹಾರ ವನ್ನು ಎರಡನ್ನು ತೆಗೆದುಕೊಳ್ಳುತ್ತಿದ್ದರು. ಒಬ್ಬ ವ್ಯಕ್ತಿ ಭೋಜನವನ್ನು ತಿನ್ನುವಾಗ ಮೊದಲು ಎಲ್ಲ ಸಸ್ಯಾಹಾರಿಗಳಾದ ಸೊಪ್ಪು, ಸಾರು, ಸಾಂಬಾರು ಎಲ್ಲ ತಿಂದರೂ, ಕೊನೆಯಲ್ಲಿ ಮೊಸರಿನಿಂದ ಅಥವಾ ಮಜ್ಜಿಗೆಯಿಂದ ತಿನ್ನುವುದರಿಂದ ಆತನು ಸಸ್ಯಾಹಾರಿಯೇ ಅಲ್ಲದೇ ಮಾಂಸಾಹಾರಿ ಎಂದು ಕೂಡಾ ಹೇಳಬಹುದು. ರಾವಣಬ್ರಹ್ಮನ ಆಹಾರದಲ್ಲಿ ಎರಡು ವಿಧಗಳಾದ ಆಹಾರಗಳು ಇದ್ದವು. ರಾವಣಬ್ರಹ್ಮ ನಿವಾಸಿಸುವ ಲಂಕೆಯ ಸುತ್ತ ಸಮುದ್ರ ಇರುವುದರಿಂದ ಆತನ ಆಹಾರದಲ್ಲಿ ಹೆಚ್ಚಾಗಿ ಮೀನುಗಳು, ಸೀಗಡಿಮೀನು ಇರುತ್ತಿದ್ದವು. ಅಷ್ಟೇ ಹೊರತು ಪ್ರಾಣಿ ಮಾಂಸವನ್ನು ತಿನ್ನುವವನಲ್ಲ. ಪ್ರಾಣಿಮಾಂಸವನ್ನು ಬಳಸದಷ್ಟುಮಾತ್ರಕ್ಕೆ ಆತನು ಹಾಲು, ಮೊಸರು ಬಳಸುತ್ತಿದ್ದರಿಂದ, ಮೀನುಗಳನ್ನು ತಿನ್ನುತ್ತಿದ್ದರಿಂದ ಆತನನ್ನು ಮಾಂಸಾಹಾರಿ ಯಾಗಿ ಮತ್ತು ಸಸ್ಯಾಹಾರಿಯೆಂದು ಹೇಳಬಹುದು. ಪ್ರತಿ ಮನುಷ್ಯ ತಾಯಿಯ ಹಾಲನ್ನು ಕುಡಿದು ಮಾಂಸಾಹಾರಿಯಾಗಿ ಜೀವನವನ್ನು ಪ್ರಾರಂಭಿಸಿ ನಂತರ ಸಸ್ಯಹಾರಿಯಾಗಿ ಕೂಡಾ ತಯಾರಾಗಿ ಎರಡು ವಿಧಗಳ ಆಹಾರಗಳಿಗೆ ಅಭ್ಯಾಸವಾಗಿದ್ದಾನೆ. ಆದ್ದರಿಂದ ದೇವತೆಗಳು ಸಸ್ಯಹಾರಿಗಳೆಂದು, ರಾಕ್ಷಸರು ಮಾಂಸಾಹಾರಿಗಳೆಂದು ವಿಭಜಿಸಿ ಹೇಳುವುದಕ್ಕೆ ಸಾಧ್ಯವಿಲ್ಲ.

ದೇವತೆಗಳು, ರಾಕ್ಷಸರು ದ್ವಿವಿಧ ಆಹಾರಗಳನ್ನು ಸಂಯುಕ್ತವಾಗಿ ತೆಗೆದು ಕೊಳ್ಳುತ್ತಿದ್ದಾರೆ.

**ಪ್ರಶ್ನೆ :– ರಾವಣಬ್ರಹ್ಮನಿಗೆ ಚಿಕ್ಕಂದಿನಿಂದ ಹತ್ತು ತಲೆಗಳು ಇವೆಯೆನ್ನುವುದು ವಾಸ್ತವವೇನಾ?**

**ಉತ್ತರ :–** ರಾವಣಬ್ರಹ್ಮನಿಗೆ ಚಿಕ್ಕವನಿರುವಾಗ ವಿದ್ಯೆ ಹೇಳಿರುವ ಗುರುವು ರಾವಣ ಬ್ರಹ್ಮನನ್ನು ಒಂದು ಪ್ರಶ್ನೆ ಕೇಳಿದನು. ಆಗ ರಾವಣಬ್ರಹ್ಮ ಅದಕ್ಕೆ ಉತ್ತರ ಹತ್ತು ವಿಧಗಳಲ್ಲಿ ಹೇಳಿದ್ದಾನೆ. ಆಗ ಆತನು ಹೇಳಿರುವ ಉತ್ತರವನ್ನು ಕೇಳಿ ಆಶ್ಚರ್ಯಪಟ್ಟು **"ನಿನ್ನದು ಕಾಣಿಸುವ ಒಂದು ತಲೆಯೇ ಅಲ್ಲದೇ ಕಾಣಿಸದ ತಲೆಗಳು ಒಂಭತ್ತು ಇವೆ."** ಆದ್ದರಿಂದ ಇಂದಿನಿಂದ ನಿನ್ನನ್ನು **'ಹತ್ತು ತಲೆಗಳ ರಾವಣ'** ಎಂದು ಕರೆಯುತ್ತೇನೆ ಎಂದು ಹೇಳಿದನು. ಅಂದಿನಿಂದ ರಾವಣನನ್ನು, ವಿದ್ಯೆ ಕಲಿಸಿದ ಗುರುವು ಹತ್ತು ತಲೆಗಳ ರಾವಣ ಎಂದು ಕರೆಯುತ್ತಿದ್ದನು. ಆಗ ಆ ಮಾತನ್ನು ಕೇಳಿದ ಬಹಳಜನ ವಿದ್ಯಾರ್ಥಿಗಳು ರಾವಣನನ್ನು ಯಾಕೆ ಹಾಗೆ ಕರೆಯುತ್ತಿದ್ದೀರೆಂದು ಗುರುವನ್ನು ಕೇಳಿದರು. ಅದಕ್ಕೆ ಗುರು ಹೀಗೆ ಹೇಳಿದನು. **"ನಿಮ್ಮೆಲ್ಲರಿಗೂ ಒಂದು ತಲೆ ಬುದ್ಧಿ ಮಾತ್ರವೇ ಇದೆ. ರಾವಣನಿಗೆ ಹತ್ತು ತಲೆಗಳಿಗಿರುವಷ್ಟು ಬುದ್ಧಿ ಇದೆ. ಆದ್ದರಿಂದ ರಾವಣನನ್ನು ಹತ್ತು ತಲೆಗಳವನು ಎಂದು ಕರೆಯುತ್ತಿದ್ದೇನೆ"** ಎಂದು ಹೇಳಿದನು. ರಾವಣಬ್ರಹ್ಮ ಚಿಕ್ಕಂದಿನಿಂದಲೇ ಆತನಿಗೆ ಹತ್ತು ಶಿರಸ್ಸುಗಳು ಇರುವವನೆಂದು ಹೆಸರು ಬಂದಿದೆ. ಅಷ್ಟಕ್ಕೂ ರಾವಣನನ್ನು ಆತನ ಗುರುವು ಏನು ಪ್ರಶ್ನೆ ಕೇಳಿದನು, ಅದಕ್ಕೆ ಆತನು ಏನು ಉತ್ತರ ಹೇಳಿದನು ಎಂದು ನೋಡಿದರೇ ಹೀಗಿದೆ.

ರಾವಣಬ್ರಹ್ಮನ ಗುರುವು **"ನಿನಗೆ ಧೈರ್ಯವಿದೆಯಾ?"** ಎಂದು ರಾವಣನನ್ನು ಪ್ರಶ್ನಿಸಿದ್ದಾನೆ. ಅದಕ್ಕೆ ರಾವಣಬ್ರಹ್ಮ ಆಧ್ಯಾತ್ಮಿಕದಿಂದ ಕೂಡಿರುವ ಉತ್ತರವನ್ನು ಹೇಳಿದನು. ಗುರುಗಳ ಪ್ರಶ್ನೆಗೆ, ರಾವಣನು ಕೆಳಗಿನ ವಿಧವಾಗಿ ಉತ್ತರ ಹೇಳಿದ್ದಾನೆ ನೋಡಿರಿ.

1) ಮೀಸೆ ಇದ್ದರೇ ರೋಷ ಇರುತ್ತದೆ.

2) ರೋಷ ಇದ್ದರೇ ಪೌರುಷ ಇರುತ್ತದೆ.

3) ಪೌರುಷ ಇದ್ದರೇ ಪುರುಷತ್ವ ಇರುತ್ತದೆ.

4) ಪುರುಷತ್ವ ಇದ್ದರೇ ತ್ರಿಪುರತ್ವ ಇರುತ್ತದೆ.

5) ತ್ರಿಪುರತ್ವ ಇದ್ದರೇ ಧೈರ್ಯ ಇರುತ್ತದೆ.

6) ರೋಷವಿಲ್ಲದ ಮೀಸೆ ಕೆಲಸಕ್ಕೆ ಬರುವುದಿಲ್ಲ.

7) ಪೌರುಷವಿಲ್ಲದ ರೋಷ ಕೆಲಸಕ್ಕೆ ಬರುವುದಿಲ್ಲ.

8) ಪುರುಷತ್ವವಿಲ್ಲದ ಪೌರುಷ ಕೆಲಸಕ್ಕೆ ಬರುವುದಿಲ್ಲ.

9) ತ್ರಿಪುರತ್ವವಿಲ್ಲದ ಪುರುಷತ್ವವು ಕೆಲಸಕ್ಕೆ ಬರುವುದಿಲ್ಲ.

10) ಧೈರ್ಯವಿಲ್ಲದ ತ್ರಿಪುರತ್ವವು ಕೆಲಸಕ್ಕೆ ಬರುವುದಿಲ್ಲ.

ಈ ಉತ್ತರವನ್ನು ಕೇಳಿದ ಗುರುಗಳು ಆಶ್ಚರ್ಯಪಟ್ಟು ಹೋದರು. ಒಂದು ಧೈರ್ಯವನ್ನು ಕುರಿತು ಕೇಳಿದರೇ ಆಧ್ಯಾತ್ಮಿಕದೊಂದಿಗೆ ಕೂಡಿರುವ ಹತ್ತು ವಾಕ್ಯಗಳನ್ನು ಏಕಧಾಟಿಯಾಗಿ ಹೇಳಿದ ರಾವಣನನ್ನು ಹೊಗಳದೇ ಇರಲಾರದೆ ಹೋದನು. ರಾವಣನಿಗೆ ಕಾಣಿಸುವ ತಲೆ ಒಂದೇ ಇದ್ದರೂ, ಆ ಒಂದು ತಲೆಯಲ್ಲಿ ಕಾಣಿಸದ ಹತ್ತು ತಲೆಗಳ ಬುದ್ಧಿ ಇರುವುದರಿಂದ ರಾವಣನು ದಶ ಶಿರಸ್ಸುಗಳಿರುವವನೆಂದು ಹೇಳುವುದಾಗಿದೆ. ಅಂದಿಗೆ ರಾವಣನ ವಯಸ್ಸು ಸುಮಾರು 18 ವರ್ಷಗಳಿರಬಹುದು. 18 ವರ್ಷಗಳ ವಯಸ್ಸಿನಿಂದಲೇ

ರಾವಣಬ್ರಹ್ಮ "ದಶಕಂಠ" ಎಂದು "ದಶ ಶಿರಸ್ಸುಗಳನ್ನು ಹೊಂದಿರುವವನೆಂದು" ಹೆಸರು ಗಳಿಸಿದನು. ರಾವಣಬ್ರಹ್ಮ ಯಾವ ವಿಷಯವನ್ನಾದರೂ ಹತ್ತರಷ್ಟು ಹೆಚ್ಚಿನ ಬುದ್ಧಿಯಿಂದ ಆಲೋಚಿಸುವುದರಿಂದ ತಪ್ಪು ನಿರ್ಣಯಗಳನ್ನು ತೆಗುದುಕೊಳ್ಳದೇ ಎಷ್ಟೋ ಸಕ್ರಮವಾಗಿ ಸರಿಯಾದ ನಿರ್ಣಯಗಳು ತೆಗೆದುಕೊಳ್ಳುತ್ತಿದ್ದನು. ಅಂತಹ ರಾವಣಬ್ರಹ್ಮನನ್ನು ಅವಮಾನ ಪಾಲು ಮಾಡುತ್ತಾ, ರಾವಣನು ದುರ್ಮಾರ್ಗನೆಂದು ಪ್ರಚಾರ ಮಾಡಿದ ಆ ದಿನದ ರಚನಕಾರರು ರಾವಣಬ್ರಹ್ಮನಿಗೆ ತೀರದ ಅನ್ಯಾಯ ಮಾಡಿದವರಾಗುತ್ತಿದ್ದಾರೆ. ಅದರಿಂದ ವಿಚಕ್ಷಣೆ ಇಲ್ಲದ ಪ್ರಜೆಗಳು ರಾವಣನನ್ನು ಒಂದುಕಡೆ ದಶಕಂಠನೆನ್ನುತ್ತಾ, ಮತ್ತೊಂದುಕಡೆ ದುರ್ಮಾರ್ಗನೆಂದು ಹೇಳುತ್ತಿದ್ದಾರೆ. ಹಾಗೆ ಆತನನ್ನು ಆರೋಪಿಸುತ್ತಿರುವುದರಿಂದ, ಆತನದ್ದು ದೇವರ ಅವತಾರವಾಗುವುದರಿಂದ ರಾವಣ ಬ್ರಹ್ಮನನ್ನು ಅವಮಾನಿಸಿದವರಿಗೆ ದ್ವಿತೀಯ ದೈವಗ್ರಂಥದಲ್ಲಿ ಹೇಳಿದಂತೆ ಎರಡು ಯುಗಗಳ ಪಾಪವನ್ನು ಅನುಭವಿಸಬೇಕಾಗಿ ಬರುತ್ತದೆ. ಆದ್ದರಿಂದ ಕುರುಡನಹಾಗೆ ಮಾತನಾಡುವುದಕ್ಕಿಂತ ವಿಚಕ್ಷಣೆ ಹೊಂದಿ ಮಾತನಾಡುವುದು ಒಳ್ಳೆಯದು. ಒಂದು ತಲೆ ಇರುವವನು ನನ್ನ ಬುದ್ಧಿ ದೊಡ್ಡದು ಎಂಬ ಭಾವನೆಯಲ್ಲಿ ಇದ್ದಾನೆ. ಇದರ ಪ್ರಕಾರ ಹತ್ತು ತಲೆಗಳ ಬುದ್ಧಿ ಇರುವವನು ಎಷ್ಟುದೊಡ್ಡ ಆಲೋಚನೆ ವರನಾಗಿ ಇರುತ್ತಾನೋ ತಿಳಿಯಬಲ್ಲದು. ರಾವಣಬ್ರಹ್ಮ ಆಧ್ಯಾತ್ಮಿಕ ಗುರುವೇ ಅಲ್ಲದೇ, ದೈವಧರ್ಮಗಳನ್ನು ಕಾಪಾಡಿ ಪ್ರಜೆಗಳಿಂದ ಆಚರಿಸುವಂತೆ ಮಾಡಿದವನು. ದೈವವೆ ಮಾನವನಾಗಿ ಬಂದಿರುವ ಅವತಾರವಾದ್ದರಿಂದ ರಾವಣಬ್ರಹ್ಮನನ್ನು **'ಭಗವಾನ್ ರಾವಣಬ್ರಹ್ಮ'** ಎಂದು ಪೂರ್ವ ಕಾಲದಲ್ಲಿ ಹೇಳುತ್ತಿದ್ದರು. ಪ್ರಸ್ತುತ ಕಾಲದಲ್ಲಿ ಭಗವಾನ್ ಎಂಬ ಪದ ಹೋದರೂ ರಾವಣನ ಹೆಸರಿನ ಕೊನೆಯಲ್ಲಿ ಬ್ರಹ್ಮ ಎಂದು ಇದೆ. ಬ್ರಹ್ಮ ಎಂದರೇ ದೇವರೆಂದು ಅರ್ಥ. 'ಬ್ರಹ್ಮ' ಎಂಬ ಪದವು ಸಾಮಾನ್ಯ ಮಾನವರಿಗೆ ಹೇಳಲ್ಪಡುವುದಿಲ್ಲ. ಅದನ್ನನುಸರಿಸಿಯಾದರೂ ರಾವಣನು ದುರ್ಮಾರ್ಗನಲ್ಲ ಎಂದು ತಿಳಿಯಬೇಕು. ಮನುಷ್ಯರಾದವರು ಒಳ್ಳೆಯವರನ್ನು ಕೆಟ್ಟವರಾಗಿ, ಕೆಟ್ಟವರನ್ನು ಒಳ್ಳೆಯವರಾಗಿ ಹೇಳುವುದು ನಡೆಯುತ್ತಿದೆ. ನಾವು ಎಲ್ಲರಹಾಗೆ

ಹೋಗದೇ ಸತ್ಯವನ್ನೇ ಹೇಳಿ, ಸತ್ಯವನ್ನೇ ಪ್ರಚಾರ ಮಾಡುತ್ತಾ, ಅದರಲ್ಲಿನ ಭಾಗವಾಗಿ ರಾವಣಬ್ರಹ್ಮನನ್ನು **'ಭಗವಾನ್ ರಾವಣಬ್ರಹ್ಮ'** ನಾಗಿ ಕರೆಯುತ್ತೇವೆ.

**ಪ್ರಶ್ನೆ :– ರಾವಣಬ್ರಹ್ಮ ಭಗವಾನ್ ರಾವಣಬ್ರಹ್ಮನಾಗಿದ್ದೂ ದೈವ ಧರ್ಮಗಳನ್ನು ಏನೆಂದು ತಿಳಿಸಿದ್ದಾನೆ. ದೈವಧರ್ಮಗಳನ್ನು ಹೇಗೆ ಕಾಪಾಡಿದ್ದಾನೆ?**

**ಉತ್ತರ :–** ರಾವಣ ಬ್ರಹ್ಮ ಈ ದಿನ ಪ್ರಜೆಗಳ ಮಧ್ಯದಲ್ಲಿ ಆರ್ಯರು ಮಾಡಿರುವ ಕುತಂತ್ರದಿಂದ ದುರ್ಮಾರ್ಗನಾಗಿ ಪ್ರಚಾರವಾದರೂ, ವಾಸ್ತವವಾಗಿ ಆತನು ಪ್ರಜೆಗಳು ಅಂದುಕೊಂಡಹಾಗೆ ದುರ್ಮಾರ್ಗನಲ್ಲ. ಸಾಕ್ಷ್ಯಾತ್ತು ದೇವರ ಅವತಾರವಾದ 'ಭಗವಂತನ ಅವತಾರವೆಂದು' ಈ ದಿನ ತಿಳಿದಿದ್ದೇವೆ. ಮೊದಲು ಮೋಕ್ಷವನ್ನು ಹೊಂದಿದ ಜನಕನನ್ನು, ಕೃಷ್ಣನು ಭಗವದ್ಗೀತೆಯಲ್ಲಿ ಉದಾಹರಣೆಯಾಗಿ ಹೇಳಿದ್ದಾನೆ. ದ್ವಾಪರಯುಗದಲ್ಲಿ ಜನಕನನ್ನು ಕುರಿತು ಹೇಳಿದ್ದಾನೆಂದರೇ, ದ್ವಾಪರ ಯುಗದ ಕೊನೆಯವರೆಗು ಮೋಕ್ಷವನ್ನು ಹೊಂದಿದವನು ಒಬ್ಬ ಜನಕನು ಹೊರತು ಇತರರು ಇಲ್ಲವೆಂದೇ ಹೇಳಬಹುದು. ತ್ರೇತಾಯುಗದಲ್ಲಿ ಜನಕನು ಮೋಕ್ಷ ಹೊಂದುವುದಕ್ಕೆ ಕಾರಣ, ಆ ದಿನ ಜ್ಞಾನ ಹೇಳಿದ ರಾವಣಬ್ರಹ್ಮನೇಯೆಂದು ಹೇಳಬಹುದು. ರಾಮನ ಕಡೆ ಬರೆದಿರುವ ರಾಮಾಯಣದಲ್ಲಿ ರಾವಣನ ವಿಷಯಗಳನ್ನು ಎಷ್ಟನ್ನೋ ತಿಳಿಯದಂತೆ ಮಾಡಿರುವುದರಿಂದ, ಬರೆದಿರುವ ಸಮಾಚಾರವನ್ನು ವಕ್ರೀಕರಿಸಿ ಬರೆದಿರುವು ದರಿಂದ ರಾವಣಬ್ರಹ್ಮ ವಿಷಯವು ಯಾರಿಗೂ ತಿಳಿಯದೇ ಹೋಗಿದೆ. ಆದ್ದರಿಂದ ರಾವಣನು ಲಂಕೆಯಲ್ಲಿ **"ಸಾಮ್ರಾಜ್ಯ ಚಕ್ರವರ್ತಿಯೇ ಅಲ್ಲದೇ, ಆಧ್ಯಾತ್ಮಿಕ ನಿಪುಣನೆಂದೂ, ದೈವಧರ್ಮಗಳನ್ನು ತಿಳಿಸಿರುವ ಗುರು ಎಂದೂ, ಸಾಕ್ಷ್ಯಾತ್ತೂ ಭಗವಂತನು"** ಎಂಬ ವಿಷಯವು ಬಹಳಜನರಿಗೆ ತಿಳಿದಿಲ್ಲ. ರಾವಣಬ್ರಹ್ಮ ತ್ರೇತಾಯುಗದಲ್ಲಿ ಜನ್ಮಿಸಿದವನು. ಕೃತಯುಗದಲ್ಲಿ ಪ್ರಜೆಗಳೆಲ್ಲರಿಗೂ ಜ್ಞಾನ ತಿಳಿದಿದೆ. ಕೃತಯುಗ ಕೊನೆಗೆಲ್ಲಾ ಪ್ರಜೆಗಳಲ್ಲಿರುವ ಜ್ಞಾನವು ಇಲ್ಲದೇ ಹೋಗುವುದಕ್ಕೆ ಆರಂಭಿಸಿತು. **"ಯಾವಾಗ ಧರ್ಮಗಳಿಗೆ ಮುಪ್ಪು ಏರ್ಪಟ್ಟು ಅಧರ್ಮಗಳು ಆಚರಣೆಯೊಳಗೆ ಬರುತ್ತವೋ ಆಗ ನಾನು ಅವತರಿಸುತ್ತೇನೆಂದು"**

ಭಗವದ್ಗೀತೆಯಲ್ಲಿ ಹೇಳಿದಂತೆ ದೇವರು ಮನುಷ್ಯನಾಗಿ ಹುಟ್ಟಬೇಕಾದ ಕೆಲಸ ಏರ್ಪಟ್ಟಿದೆ. ಮನುಷ್ಯನಾಗಿ ಹುಟ್ಟಿರುವ ದೇವರು ಯಾರೋ ಯಾರಿಗೂ ತಿಳಿದಿಲ್ಲ. ಯಾವಾಗ ದೇವರು ಭಗವಂತನಾಗಿ ಜನ್ಮಿಸಿದರೂ ಆತನು ಇಂಥವನು ಎಂದು ತಿಳಿಯುವುದಕ್ಕೆ ಅವಕಾಶವಿರುವುದಿಲ್ಲ.  ಆದರೇ ಎಲ್ಲಿ ಧರ್ಮಗಳು ತಿಳಿಯುತ್ತಿರುತ್ತವೋ ಅಲ್ಲಿ ಭಗವಂತನಿರುವಹಾಗೆ ಗುರುತಿಸಬಹುದು. ಆದರೇ ಆತನು ಹೇಳಿರುವ ಧರ್ಮಗಳು ಅರ್ಥವಾಗುವುದಕ್ಕೆ ಎಷ್ಟೋ ವರ್ಷಗಳು ಹಿಡಿಯುತ್ತದೆ. ಮನುಷ್ಯನ ರೂಪದಲ್ಲಿರುವ ಭಗವಂತನು ಹೇಳಿರುವ ಧರ್ಮಗಳು ಪ್ರಚಾರವಾಗುವುದಕ್ಕೆ ಕೆಲವು ಹತ್ತಾರುವರ್ಷಗಳು ಹಿಡಿಯುತ್ತದೆ. ಅವು ಪ್ರಚಾರವಾದ ನಂತರ ಅವು ಅರ್ಥವಾಗುವುದಕ್ಕೆ ಕೆಲವು ಹತ್ತಾರು ವರ್ಷಗಳು ಹಿಡಿಯುತ್ತದೆ. ಅಷ್ಟರಲ್ಲಿ ಬಂದಿರುವ ಭಗವಂತನು ಜನ್ಮವನ್ನು ಸಾಕುಮಾಡಿ ಹೋಗಿರುತ್ತಾನೆ. ಆದ್ದರಿಂದ ಭಗವಂತನು ಬದುಕಿದ್ದಾಗ ಆತನನ್ನು ಯಾರೂ ಕಂಡುಕೊಳ್ಳಲಾರರು.

ಭಗವಂತನನ್ನು ಧರ್ಮಗಳಿಂದ ಅಲ್ಲದೇ ಮತ್ತೊಂದು ವಿಧಾನದಿಂದ ತಿಳಿಯಬಹುದು. **"ಯಾರು ಪ್ರಕೃತಿಯನ್ನು ಶಾಸಿಸುವ ಶಕ್ತಿ ಹೊಂದಿರುತ್ತಾರೋ"** ಅವರು ಭಗವಂತನೆಂದು ಕೂಡಲೇ ತಿಳಿಯಬಹುದು. ಆದರೂ ದೇವರ ಅವತಾರವನ್ನು ಪ್ರಜೆಗಳು ಗುರುತಿಸಲಾರದಷ್ಟು ಕುರುಡರಾಗಿ ಇದ್ದಾರೆ. ದ್ವಾಪರಯುಗದಲ್ಲಿ ಕೃಷ್ಣನ ವಿಷಯದಲ್ಲಿ ಅದೇ ನಡೆದಿದೆ. ಕಲಿಯುಗದಲ್ಲಿ ಯೇಸು ವಿಷಯದಲ್ಲಿ ಅದೇ ನಡೆದಿದೆ. ಕೃಷ್ಣನನ್ನು, ಯೇಸುನನ್ನು ಕಿಂಚಿತ್ತಾದರೂ ಭಗವಂತನನ್ನಾಗಿ ಇಂದಿಗೂ ಒಪ್ಪಿಕೊಳ್ಳದವರಿದ್ದಾರೆ. ಹಾಗಿರುವಾಗ ತ್ರೇತಾಯುಗದಲ್ಲಿದ್ದ ರಾವಣಬ್ರಹ್ಮನನ್ನು ದುರ್ಮಾರ್ಗನನ್ನಾಗಿ ಹೇಳುತ್ತಿದ್ದಾರೆ ಹೊರತು, ಆತನನ್ನು ದೇವರ ಅವತಾರವೆಂದು ಗುರುತಿಸಲಾರದೇ ಹೋಗಿದ್ದಾರೆ. ದೇವರ ಅವತಾರವಾದ ಭಗವಂತನು ಭೂಮಿಮೇಲಕ್ಕೆ ಬಂದರೇ ತನ್ನ ಧರ್ಮಗಳನ್ನು ತಿಳಿಸುತ್ತಾನೆ. ದ್ವಾಪರ, ಕಲಿಯುಗಗಳಲ್ಲಿ ಅದೇ ನಡೆದಿರುವಾಗ, ತ್ರೇತಾಯುಗದಲ್ಲಿ ರಾವಣಬ್ರಹ್ಮ ಧರ್ಮಗಳನ್ನು ತಿಳಿಸುವುದೇ ಅಲ್ಲದೆ,

ಅಧರ್ಮಗಳನ್ನು ಆಚರಿಸುವವರನ್ನು ಶಿಕ್ಷಿಸುವುದು ಕೂಡಾ ನಡೆದಿದೆ. ತ್ರೇತಾಯುಗದಲ್ಲಿ ಭಾರತದೇಶದಲ್ಲಿ ದಕ್ಷಿಣ ಭೂಭಾಗವು ಸ್ವಲ್ಪ ಜ್ಞಾನ ಹೊಂದಿತ್ತು. ಹಾಗಿರುವುದಕ್ಕೆ ಕಾರಣ ದಕ್ಷಿಣ ಭಾಗವು ಶ್ರೀಲಂಕಕ್ಕೆ ಸಮೀಪವಿರುವುದೇ ಎಂದು ಹೇಳಬಹುದು. ಶ್ರೀಲಂಕದಲ್ಲಿ ರಾವಣನು ಇರುವುದರಿಂದ ಅಲ್ಲಿ ಅಧರ್ಮ ಆಚರಣೆಗಳು ಇಲ್ಲದೇ ಎಲ್ಲರೂ ಧರ್ಮಾಚರಣೆಗೆ ಅಭ್ಯಾಸವಾಗಿದ್ದಾರೆ. ಭಾರತದೇಶ ದಕ್ಷಿಣ ಪ್ರಾಂತದಲ್ಲಿ ಸ್ವಲ್ಪ ಧರ್ಮಾಚರಣೆ ಇದ್ದರೂ ಸ್ವಲ್ಪ ಅಧರ್ಮ ಆಚರಣೆ ಇತ್ತು. ಉತ್ತರ ಭೂಭಾಗದಲ್ಲಿ ಹೆಚ್ಚಾಗಿ ಅಧರ್ಮ ಆಚರಣೆಯಿತ್ತು. ಶ್ರೀಲಂಕಕ್ಕೆ ಹತ್ತಿರವಾಗಿರುವ ದಕ್ಷಿಣ ಭಾರತದೇಶದಲ್ಲಿ ಅಲ್ಲಲ್ಲಿ ಕೆಲವು ಕಡೆ ಮಾತ್ರ ನಡೆಯುವ ಅಧರ್ಮ ಆಚರಣೆಗಳನ್ನು ರಾವಣಬ್ರಹ್ಮ ತನ್ನ ಸೈನ್ಯದಿಂದ ಅಡ್ಡಿ ಮಾಡುತ್ತಿದ್ದನು. ತನ್ನ ಭೂಭಾಗ ಅಲ್ಲದೇ ಹೋದರೂ ತನ್ನ ರಾಜ್ಯಕ್ಕೆ ಪಕ್ಕದಲ್ಲೇ ಇದ್ದ ಪ್ರಾಂತವಾದ್ದರಿಂದ ಅಲ್ಲಿ ಕೂಡಾ ತನಗೆ ತಿಳಿದು ಅಧರ್ಮಗಳನ್ನು ನಡೆಯಲು ಅವಕಾಶ ಮಾಡಿ ಕೊಡುತ್ತಿರಲಿಲ್ಲ. ಅಧರ್ಮಗಳಿಗೆ ಅಭ್ಯಾಸ ವಾದವರಿಗೆ ರಾವಣಬ್ರಹ್ಮನ ಚಟುವಟಿಕೆಗಳು ಕೆಟ್ಟದಾಗಿ ಕಾಣಿಸುತ್ತಿದ್ದವು. ಅಲ್ಲಿಯೇ ರಾವಣಬ್ರಹ್ಮ ದುರ್ಮಾರ್ಗನೆಂದು ಪ್ರಜೆಗಳು ಹೇಳುವುದಕ್ಕೆ ಪ್ರಾರಂಭಿಸಿದರು.

ಅಧರ್ಮಗಳ ಆಚರಣೆಗಳನ್ನು ನಡೆಸಲು ಬಿಡದೆ ನಿಲ್ಲಿಸುವುದರಿಂದ ಅಧರ್ಮಗಳು ಒಳ್ಳೆಯದಾಗಿ ಕಾಣಿಸುವವರೆಲ್ಲರಿಗೂ ರಾವಣಬ್ರಹ್ಮ ಕೆಟ್ಟದಾಗಿ ಕಾಣಿಸುತ್ತಿದ್ದನು. ದೈವಜ್ಞಾನ ತಿಳಿಯದಿದ್ದಾಗ ಯಾವುದು ಧರ್ಮ, ಯಾವುದು ಅಧರ್ಮ ಎಂದು ತಿಳಿಯದೆ ಅಧರ್ಮಗಳನ್ನು ಧರ್ಮಗಳೆಂದು ಅಂದು ಕೊಳ್ಳುತ್ತಿದ್ದರು. ಅಧರ್ಮಗಳನ್ನೇ ಭಕ್ತಿ ಮಾರ್ಗವಾಗಿ ತಿಳಿದು ಆಚರಿಸುತ್ತಿದ್ದರು. ಭಗವದ್ಗೀತೆಯಲ್ಲಿ ಈ ಕಾರ್ಯಗಳ ಮುಖಾಂತರ ದೇವರು ತಿಳಿಯುವುದಿಲ್ಲ ಎಂದು ಹೇಳಿರುವ  ನಾಲ್ಕು ಕಾರ್ಯಗಳನ್ನು ನಾಲ್ಕು ಅಧರ್ಮಗಳಾಗಿ ಹೇಳಬಹುದು. ಭಗವದ್ಗೀತೆಯಲ್ಲಿ ಭಗವಂತನಾದ ಕೃಷ್ಣನು ಮೂರು ಯೋಗಗಳನ್ನು ತಿಳಿಸಿ ಅವುಗಳನ್ನು ಧರ್ಮಗಳನ್ನಾಗಿ ಹೇಳಿದ್ದಾನೆ. ಧರ್ಮಗಳಿಂದ ದೇವರು ತಿಳಿಯುತ್ತಾನೆಂದು ಹೇಳಿದ್ದಾನೆ. ಅದನ್ನನುಸರಿಸಿ ದೇವರು

ತಿಳಿಯುವುದಿಲ್ಲ ಎಂದು ಹೇಳಿರುವ ನಾಲ್ಕು ಕಾರ್ಯಗಳನ್ನು ಅಧರ್ಮಗಳಾಗಿ ಹೇಳಿಕೊಳ್ಳಬಹುದು. **1) ಬ್ರಹ್ಮ ಯೋಗ, 2) ಕರ್ಮಯೋಗ, 3) ಭಕ್ತಿಯೋಗ** ಎಂಬ ಮೂರು ಯೋಗಗಳು ದೇವರನ್ನು ಸೇರಿಸುವ ಕಾರ್ಯಗಳು ಆಗಿರುವುದರಿಂದ ಅವುಗಳನ್ನು ಧರ್ಮಗಳೆಂದು ಹೇಳುತ್ತಿದ್ದೇವೆ. ಇದರಪ್ರಕಾರ ಧರ್ಮಗಳು ಮೂರೆಂದು ಹೇಳಬಹುದು. ಅಧರ್ಮಗಳು ನಾಲ್ಕು ಎಂದು ಅವು 1) ಯಜ್ಞ, 2) ವೇದಪಾರಾಯಣ, 3) ದಾನ, 4) ತಪಸ್ಸು ಆಗಿವೆಯೆಂದು ಹೇಳಬಹುದು.

ಕೃತಯುಗದ ಅಂತ್ಯದಿಂದ ಪ್ರಾರಂಭವಾಗಿರುವವು ನಾಲ್ಕು ಅಧರ್ಮಗಳಾಗಿರುವಾಗ ತ್ರೇತಾಯುಗ, ದ್ವಾಪರಯುಗವನ್ನು ದಾಟಿ ಕಲಿಯುಗದಲ್ಲಿ ಪ್ರವೇಶಿಸುತ್ತಲೇ ಐದನೆಯ ಅಧರ್ಮ ಕೂಡಾ ಸೇರಿಹೋಗಿದೆ. ಈಗ ಭೂಮಿಮೇಲೆ ಐದು ಅಧರ್ಮಗಳು ಏರ್ಪಟ್ಟಿವೆ. 'ಮತ' ಎನ್ನುವುದು ಮನುಷ್ಯರ ಮಧ್ಯದಲ್ಲಿ ಏರ್ಪಟ್ಟು ಎಲ್ಲವುಗಳಿಗಿಂತ ದೊಡ್ಡ ಅಧರ್ಮವಾಗಿ ತಯಾರಾಗಿದೆ. ಉಳಿದ ನಾಲ್ಕು ಅಧರ್ಮಗಳಿಂದ ಮನುಷ್ಯ ತಪ್ಪಿಸಿಕೊಂಡರೂ, 'ಮತ' ಎಂಬ ಐದನೆಯ ಅಧರ್ಮದಿಂದ ತಪ್ಪಿಸಿಕೊಳ್ಳಲಾಗದೇ ಹೋಗುತ್ತಿದ್ದಾನೆ. ಕೆಲವು ಇತರ ದೇಶಗಳಲ್ಲಿ ನಾಲ್ಕು ಅಧರ್ಮಗಳು ಇಲ್ಲದಿದ್ದರೂ 'ಮತ' ಎಂಬ ಅಧರ್ಮ ಮಾತ್ರ ಸಂಪೂರ್ಣವಾಗಿದೆ. ತ್ರೇತಾಯುಗದಲ್ಲಿ ಮತವೆಂಬ ಐದನೇ ಅಧರ್ಮ ಇಲ್ಲದಿದ್ದರೂ ಭಾರತದೇಶದಲ್ಲಿ ಉಳಿದ ನಾಲ್ಕು ಅಧರ್ಮಗಳು ಸಂಪೂರ್ಣವಾಗಿದ್ದವು. ಆದರೇ ಶ್ರೀಲಂಕದಲ್ಲಿ ನಾಲ್ಕು ಅಧರ್ಮಗಳು ಇರಲೇ ಇಲ್ಲ. ಭಾರತದೇಶ ದಕ್ಷಿಣ ಭಾಗದಲ್ಲಿ ಅಧರ್ಮಗಳು ಇರುವುದೇ ಅಲ್ಲದೇ ಅದರಲ್ಲಿ ಯಜ್ಞವನ್ನು ಹೆಚ್ಚಾಗಿ ಆಚರಿಸುತ್ತಿದ್ದರು. ಯಜ್ಞ ಮಾಡುವುದು ಅಧರ್ಮ ಆಚರಣೆ ಆಗುವುದರಿಂದ ರಾವಣಬ್ರಹ್ಮ ತನ್ನ ಪಕ್ಕದ ದೇಶವಾದ ಭಾರತದೇಶದ ದಕ್ಷಿಣ ಭಾಗದಲ್ಲಿ ನಡೆಯುವ ಯಜ್ಞಗಳನ್ನು ಭಂಗ ಮಾಡುವಂತೆ ತನ್ನ ಅನುಚರರಿಗೆ ಆಜ್ಞಾಪಿಸಿರುವುದರಿಂದ ರಾವಣಬ್ರಹ್ಮ ಸೈನ್ಯದಲ್ಲಿನ ಕೆಲವರು ಬಂದು ಯಜ್ಞಗಳನ್ನು ಕೆಡಿಸುವುದೇ ಅಲ್ಲದೇ ಯಜ್ಞಗಳನ್ನು ಮಾಡುವವರನ್ನು

ಚೆನ್ನಾಗಿ ಹೊಡೆದು ಹೋಗುತ್ತಿದ್ದರು. ರಾವಣಬ್ರಹ್ಮ ತನ್ನ ವಿಮಾನದಲ್ಲಿ ಭಾರತ ಭೂಭಾಗದಲ್ಲಿ ತಿರುಗುತ್ತಾ ಮೇಲಿನಿಂದ ಗಮನಿಸುತ್ತಾ, ಎಲ್ಲಿ ಯಜ್ಞಗಳು ಮಾಡುವಹಾಗೆ ಕಾಣಿಸಿದರೂ, ಅಲ್ಲಿ ಇಳಿದು ಯಜ್ಞಗಳನ್ನು ಭಂಗಮಾಡುತ್ತಿದ್ದರು. ಹಾಗೆ ಮಾಡುವುದರಿಂದ ಯಜ್ಞಗಳು ಒಳ್ಳೆಯ ಕಾರ್ಯಗಳು ಎಂದು ತಿಳಿದು ಮಾಡುವವರೆಲ್ಲರೂ ರಾವಣಬ್ರಹ್ಮ ದುರ್ಮಾರ್ಗನೆಂದೂ, ತಮ್ಮ ಕಾರ್ಯಗಳನ್ನು ಭಂಗ ಮಾಡಿದ ದುರ್ಮಾರ್ಗನೆಂದು ಪ್ರಚಾರ ಮಾಡಿದರು. ಹೀಗೆ ಕೆಲವು ವರ್ಷಗಳು ರಾವಣನು ಬದುಕಿರುವಷ್ಟು ಕಾಲ ಭಾರತ ದೇಶದಲ್ಲಿ ಸ್ವಲ್ಪ ಭಾಗದವರೆಗು ತನ್ನ ವಿಮಾನದಲ್ಲಿ ತನ್ನ ಸಹಚರರೊಂದಿಗೆ ಸಂಚರಿಸುತ್ತಾ ಯಜ್ಞಗಳು ಮಾಡುವವರನ್ನು, ತಪಸ್ಸುಗಳು ಮಾಡುವವರನ್ನು, ವೇದಗಳನ್ನು ಓದುವವರನ್ನು ದೂಷಿಸಿ ಶಿಕ್ಷಿಸುತ್ತಿದ್ದರಿಂದ ಆತನನ್ನು ಭಗವಂತನೆಂದು ಗುರುತಿಸಲಾರದೇ ಹೋಗುವುದಲ್ಲದೇ ಪ್ರಜೆಗಳು ಆತನನ್ನು ದೂಷಿಸುತ್ತಿದ್ದರು.

**ಪ್ರಶ್ನೆ :– ರಾವಣನನ್ನು ಭಗವಂತನೆಂದು ಹೇಳಿದವರಲ್ಲಿ ನೀನೇ ಮೊದಲನೆಯವನು. ರಾವಣನು ತ್ರೇತಾಯುಗದಲ್ಲಿ ಬಂದರೇ ಅಂದಿನಿಂದ ಮೂರು ಯುಗಗಳಲ್ಲಿ ಇಲ್ಲಿಯವರೆಗೂ ರಾವಣನನ್ನು ದುರ್ಮಾರ್ಗನೆಂದವರೇ ಇದ್ದಾರೆ ಹೊರತು, ದೇವರ ಅವತಾರವೆಂದು, ಭಗವಂತನೆಂದು ಇಲ್ಲಿಯವರೆಗು ಯಾರೂ ಹೇಳಲಿಲ್ಲ. ಶ್ರೀರಾಮನು ತ್ರೇತಾಯುಗದಲ್ಲಿ ದೇವರೆಂದು ಕೇಳಿದ್ದೇವೆ. ಇಂದಿಗೂ ಆತನನ್ನು ಶ್ರೀರಾಮನು ದೇವರೆಂದೇ ಎಲ್ಲರೂ ಹೇಳುತ್ತಿದ್ದಾರೆ. ನೀವು ಮಾತ್ರ ರಾಮನನ್ನು ಅಲ್ಲದೇ ರಾವಣನು ದೇವರೆಂದು ಹೇಳುತ್ತಿದ್ದೀರ. ಇದು ಲೋಕ ವಿರುದ್ಧ ಅಲ್ಲವೇ? ಕೋದಂಡರಾಮನು ದೇವರಲ್ಲವೆಂದು, ರಾವಣನು ಹೇಳಿದಂತೆ ನೀವು ಒಂದು ಸಂದರ್ಭದಲ್ಲಿ ಹೇಳಿದ್ದೀರಿ. ರಾವಣನು ಅಯೋಧ್ಯ ರಾಮನನ್ನು ದೇವರಲ್ಲ ಎಂದು ಯಾಕೆ ಹೇಳಿದ್ದಾನೆ? ಯಾವ ಆಧಾರದಿಂದ ಹೇಳಿದ್ದಾನೆ?**

**ಉತ್ತರ :–** ನೀವು ಅರ್ಥಮಾಡಿಕೊಳ್ಳುವುದರಲ್ಲಿ ತಪ್ಪಾಗಿ ಅರ್ಥೈಸಿಕೊಂಡಿದ್ದೀರ. ರಾವಣನು ಹೇಳಿರುವುದು ಅಯೋಧ್ಯ ರಾಮನನ್ನು 'ದೇವರಲ್ಲ' ಎಂದಿದ್ದು ವಾಸ್ತವವೇ! ಅಷ್ಟೇ ಹೊರತು ರಾಮನನ್ನು 'ದೇವರಲ್ಲ' ಎಂದು ಎಂದಿಗೂ

ರಾವಣನು ಹೇಳಲಿಲ್ಲ. ಇಲ್ಲಿ ಎಲ್ಲರೂ ತಪ್ಪಾಗಿ ತಿಳಿದಿರುವುದು 'ರಾಮನು ಒಬ್ಬನೇ ಆತನೇ ಅಯೋಧ್ಯ ರಾಮನೆಂದು' ಅಂದುಕೊಳ್ಳುವುದು ಪೂರ್ತಿ ತಪ್ಪೆಂದು ಹೇಳಬಹುದು. ವಿವರವಾಗಿ ಹೇಳಿದರೇ 'ಶ್ರೀರಾಮ' ಎಂಬ ಹೆಸರು ಕೃತಯುಗದಿಂದ ಇದೆ. 'ಶ್ರೀರಾಮ' ಎಂಬ ಪದವು ಒಬ್ಬ ವ್ಯಕ್ತಿಯ ಹೆಸರಲ್ಲ. ದೇವರಿಗೆ ಇನ್ನೊಂದು ಪದವಾಗಿ 'ಶ್ರೀರಾಮ' ಎಂದು ಹೇಳುತ್ತಿದ್ದರು. 'ಶ್ರೀರಾಮ' ಎಂಬ ಪದದಲ್ಲಿಯೇ ದೈವತ್ವವು ಒಳಗೊಂಡಿದೆ. ದೈವತ್ವವಿರುವ ಆ ಪದವನ್ನು ಅನೇಕಜನ ಕೃತಯುಗದಲ್ಲಿಯೇ ಹೆಸರಾಗಿ ಇಟ್ಟುಕೊಳ್ಳುತ್ತಿದ್ದರು. 'ಶ್ರೀರಾಮ' ಎಂದು ಹೆಸರು ಇಟ್ಟುಕೊಂಡ ವರೆಲ್ಲರೂ ಸಾಧಾರಣ ಮನುಷ್ಯರೇ. ಕೃತಯುಗದ ನಂತರ ತ್ರೇತಾಯುಗದಲ್ಲಿ ದಶರಥ ರಾಜನಿಗೆ ನಾಲ್ವರು ಗಂಡುಮಕ್ಕಳು ಹುಟ್ಟಿದ್ದರೇ, ಅದರಲ್ಲಿ ದೊಡ್ಡವನಿಗೆ ಶ್ರೀರಾಮ ಎಂಬ ಹೆಸರನ್ನು ಇಟ್ಟಿದ್ದಾರೆ. ಅಷ್ಟೊತ್ತಿಗೆ ತ್ರೇತಾಯುಗದಲ್ಲಿ ಕೂಡಾ ಶ್ರೀರಾಮ ಎಂಬ ಹೆಸರಿರುವವರು ಅನೇಕ ಮಂದಿ ಇರುವುದರಿಂದ ದಶರಥ ಪುತ್ರನು ಅವರಿಗಿಂತ ಎಲ್ಲಾ ವಿಧಗಳಲ್ಲಿ ದೊಡ್ಡವನಾದ್ದರಿಂದ ಸಾಮಾನ್ಯ ಮನುಷ್ಯರಲ್ಲಿ ರಾಜಕುಮಾರನಾಗಿ ಹುಟ್ಟಿರುವ ದಶರಥ ಪುತ್ರನ ಹೆಸರು ಬೆರೆತು ಹೋಗದಂತಿರುವುದಕ್ಕೆ 'ಶ್ರೀರಾಮ' ಎಂಬ ಹೆಸರಿಗೆ ಬದಲು ಈತನು ಇಂಥವನು ಎನ್ನುವಹಾಗೆ, ಮುಖ್ಯವಾದ ಮನುಷ್ಯ ಎನ್ನುವಂತೆ, ಸಾಮಾನ್ಯ ಮನುಷ್ಯನಲ್ಲ ಎನ್ನುವಹಾಗೆ, ಆತನ ಹೆಸರಿನ ಮೊದಲು ಗುರುತಿಸುವ ಪದಗಳನ್ನು ಇಡಲು ಪ್ರಾರಂಭಿಸಿದರು. ರಾಮನಿಗೆ ಚಿಕ್ಕಂದಿನಲ್ಲಿ ಇಟ್ಟಿರುವ ಹೆಸರಿನ ಮೊದಲು ಈತನು ಇಂಥವನು ಎನ್ನುವಂತೆ ಮೊದಲು 'ದಶರಥ ರಾಮ' ಎಂದು ಕರೆದಿದ್ದಾರೆ. ನಂತರ ಬಿಲ್ಲುವಿದ್ಯೆ ಕಲಿತುಕೊಂಡಾಗ 'ಕೋದಂಡರಾಮ' ಎಂದು ಕರೆದಿದ್ದಾರೆ. ಸೀತೆಯನ್ನು ವಿವಾಹವಾದ ನಂತರ 'ಸೀತಾರಾಮ' ಎಂದು ಕರೆದಿದ್ದಾರೆ. ನಂತರ ಪಟ್ಟಾಭಿಷೇಕದಲ್ಲಿ ದಶರಥನಿಗೆ ಕೈಕೆಗೆ ವಾದ ನಡೆದು ಪಟ್ಟಾಭಿಷೇಕ ಇಲ್ಲದೇ ಹೋದ ನಂತರ 'ರಾಮ' ಎಂಬ ಪದದ ಮೊದಲು 'ಪಟ್ಟಾಭಿ ರಾಮ' ಎಂದು ಕರೆದಿದ್ದಾರೆ. ರಾಮನು ಹುಟ್ಟಿರುವುದು ಅಯೋಧ್ಯೆಯಲ್ಲಿ ಆಗಿರುವುದರಿಂದ ಆತನನ್ನು 'ಅಯೋಧ್ಯ ರಾಮ' ಎಂದು ಕೂಡಾ ಕರೆದಿದ್ದಾರೆ.

ಮೊದಲು ಇಟ್ಟಿರುವುದು ಶ್ರೀರಾಮ ಎಂಬ ಹೆಸರಾದರೇ ಹಾಗೆ ಕರೆದರೇ ಎಲ್ಲರೊಂದಿಗೆ ಸಮಾನವಾಗಿ ಹೋಗುತ್ತಾನೆಂದು, ಸಾಮಾನ್ಯರಲ್ಲಿ ಸಮಾನವಾಗಿ ಕಾಣಿಸುವುದು ಆತನ ತಂದೆಗೆ ಇಷ್ಟವಿಲ್ಲದೆ ಮೊದಲು 'ದಶರಥ ರಾಮ' ಎಂದು ಹೆಸರಿಟ್ಟು ನಂತರ ನಾಲ್ಕು ಅಂತಹ ಹೆಸರುಗಳೇ ಬೇರೆಬೇರೆ ಯಾಗಿ ಕರೆಯುವಂತೆ ಏರ್ಪಟ್ಟಿವೆ. ಮೊದಲು ಇಟ್ಟಿರುವ 'ಶ್ರೀರಾಮ' ಎಂಬ ಹೆಸರು ಆತನಿಗೆ ಚಿಕ್ಕಂದಿನಲ್ಲೇ ಇಲ್ಲದೇ ಹೋಗಿ ಆತನ ಸ್ಥಿತಿಯನ್ನು ತಿಳಿಸುತ್ತಿರುವ ಐದು ಹೆಸರುಗಳು ಬರುವುದರಿಂದ ಎಲ್ಲರೂ ಐದರಲ್ಲಿ ಯಾರಿಗೆ ತೋಚಿದ ಹೆಸರನ್ನು ಅವರು ಕರೆಯುತ್ತಿದ್ದರು. ಆ ವಿಧವಾಗಿ ಕರೆಯುವುದರಿಂದ ಮೊದಲು ಇಟ್ಟಿರುವ 'ಶ್ರೀರಾಮ' ಎಂಬ ಹೆಸರು ಯಾರಿಗೂ ಅಭ್ಯಾಸವಿಲ್ಲದೇ ಹೋಗಿದೆ. ಅದರಿಂದ ಯಾರೂ ಶ್ರೀರಾಮ ಎಂದು ಹೆಸರಿನಿಂದ ಕರೆಯದೇ ಉಳಿದ ಹೆಸರುಗಳಿಂದಲೇ ಕರೆಯುತ್ತಿದ್ದರು. ಯಾರಾದರೂ ಶ್ರೀರಾಮ ಎಂಬ ಹೆಸರಿನಿಂದ ಕರೆದರೇ ಹಾಗೆ ಕರೆಯಬಾರದೆಂದು ಆತನ ಸಂಬಂಧಿಕರೆಲ್ಲರೂ ಹೇಳುತ್ತಿದ್ದರು. ಹಾಗೆ ಹೇಳುವುದರಿಂದ ಆ ಹೆಸರನ್ನು ಎಲ್ಲರೂ ಬಿಟ್ಟುಹಾಕಿ 'ಅಯೋಧ್ಯ ರಾಮ' ಎಂಬ ಹೆಸರಿನಿಂದ ಹಿಡಿದು ಉಳಿದ ನಾಲ್ಕು ಹೆಸರುಗಳಿಂದ ಕರೆಯುತ್ತಿದ್ದರು.

ರಾವಣನು 'ಶ್ರೀರಾಮ' ಎಂಬ ಹೆಸರನ್ನು ಗೌರವಿಸುತ್ತಿದ್ದನು. 'ಶ್ರೀರಾಮ' ಎಂಬ ಪದವು ದೇವರಿಗೆ ಸಂಬಂಧಿಸಿರುವುದೆಂದು ಹೇಳುತ್ತಿದ್ದನು. 'ಶ್ರೀರಾಮ' ಎಂಬ ಮೂರಕ್ಷರಗಳು ಭಕ್ತಿಯಿಂದ ನುಡಿದರೇ ಅವನಿಗೆ ಕೆಲವು ಕರ್ಮಗಳು ಸುಟ್ಟುಹೋಗುತ್ತವೆಂದು ಹೇಳುತ್ತಿದ್ದನು. **ಶ್ರೀ** ಎಂದರೇ ಶುಭಕರವಾದ ಮೋಕ್ಷ ಎಂದೂ, **ಮ** ಎಂದರೇ ನಾನು, **ರಾ** ಎಂದರೇ ನಾಶವಾಗುವುದು ಅಥವಾ ಇಲ್ಲದೇ ಹೋಗುವುದೆಂದು ಅರ್ಥವಿದೆ. **"ನಾನು ಇಲ್ಲದೇ ಹೋಗಿ ಮೋಕ್ಷವನ್ನು ಹೊಂದುವುದು'** ಎಂದು ಅರ್ಥ. 'ಶ್ರೀರಾಮ' ಎಂಬ ಪದವು ನುಡಿಯುವುದರಲ್ಲಿ **ಜೀವಿಯಾಗಿ ಇರುವವನು (ಮ) ಇಲ್ಲದೇ ಹೋಗಿ (ರಾ) ಮೋಕ್ಷವನ್ನು ಹೊಂದುವುದು (ಶ್ರೀ)**. ಇದನ್ನು ಅನುಸರಿಸಿ ಜೀವಿಯು ಇಲ್ಲದೇ ಹೋಗಿ

ದೇವರಾಗಿ ಬದಲಾಗಿಹೋಗುವುದೆಂದು ಅರ್ಥ. ದೇವರಲ್ಲಿ ಐಕ್ಯವಾಗಿ ಹೋಗುವುದನ್ನು ತಿಳಿಸುವ ಪದವೇ 'ಶ್ರೀರಾಮ' ಎಂಬ ಪದವು. ಆದ್ದರಿಂದ ಶ್ರೀರಾಮ ಎಂದು ಭಕ್ತಿ ಪೂರ್ವಕವಾಗಿ ಹೇಳಿದವರಿಗೆ ಕೆಲವು ಕರ್ಮಗಳು ಹೋಗುತ್ತವೆಂದು ರಾವಣಬ್ರಹ್ಮನೇ ಬಹಳಜನರಿಗೆ ಹೇಳಿದ್ದಾನೆ. ದಶರಥ ರಾಮನನ್ನು ರಾವಣಬ್ರಹ್ಮ ದೇವರನ್ನಾಗಿ ಎಂದಿಗೂ ಒಪ್ಪಿಕೊಳ್ಳಲಿಲ್ಲ. 'ಶ್ರೀರಾಮ' ಎಂಬ ಪದವು ಶ್ರೇಷ್ಠವಾದುದೇ, ದೈವಸೂತ್ರ ಒಳಗೊಂಡಿರುವುದೇ ಆದರೆ ಆ ಹೆಸರು ಇಟ್ಟುಕೊಂಡವರೆಲ್ಲರೂ ಸಾಧಾರಣ ಮನುಷ್ಯರಾಗಿಯೇ ಇರುತ್ತಾರೆ ಹೊರತು, ಯಾರೂ ಆ ಹೆಸರಿಗೆ ತಕ್ಕಂತೆ ದೇವರಲ್ಲ ಎನ್ನುವುದು ರಾವಣಬ್ರಹ್ಮನ ವಾದ. ರಾವಣಬ್ರಹ್ಮನಿಗೆ ತಿಳಿದ ವಿಧಾನದ ಪ್ರಕಾರ 'ಅಯೋಧ್ಯ ರಾಮ' ಎನ್ನುವವನು, 'ದಶರಥ ರಾಮ' ಎನ್ನುವವನು 'ರಾಮ' ಎಂಬ ಹೆಸರು ಹೊಂದಿರುವ ವ್ಯಕ್ತಿಯೇ ಹೊರತು ದೇವರಲ್ಲ ಎಂದು ರಾವಣಬ್ರಹ್ಮ ಹೇಳುತ್ತಿದ್ದನು.

'ಶ್ರೀರಾಮ' ಎಂಬ ಪದವು ದೈವಶಕ್ತಿಯಿಂದ ಕೂಡಿಕೊಂಡಿರುವ ಶಬ್ಧವು. ಆ ಶಬ್ಧವನ್ನು ಮನುಷ್ಯರಿಗೆ ಹೆಸರಾಗಿ ಇಟ್ಟರೂ, ಅವರು ಮನುಷ್ಯರಾಗಿಯೇ ಇರುತ್ತಾರೆ. ಯಾರಾದರೇ 'ಶ್ರೀರಾಮ' ಎಂಬ ಪದಕ್ಕೆ ಅರ್ಥ ತಿಳಿದು, ವಾಸ್ತವ ಭಾವದಿಂದ 'ಶ್ರೀರಾಮ' ಎಂದು ನುಡಿದಷ್ಟುಮಾತ್ರಕ್ಕೆ, ನುಡಿದವನಿಗೆ ಸ್ವಲ್ಪ ಕರ್ಮ ಹೋಗುವುದು ವಾಸ್ತವವೇಯೆಂದು ನಾವು ಕೂಡಾ ಒಪ್ಪಿಕೊಳ್ಳಬೇಕಾಗಿದೆ. ವಾಸ್ತವವಾಗಿ ಆ ಪದವು **'ಮರಾಶ್ರೀ'** ಎಂದು ಇತ್ತು. ಅದನ್ನು ನುಡಿಯುವುದರಲ್ಲಿ 'ಶ್ರೀರಾಮ' ಎಂಬ ಪದವಾಗಿ ಏರ್ಪಟ್ಟಿದೆ. ಮರಾಶ್ರೀ ಎಂದರೂ, ಶ್ರೀರಾಮ ಎಂದರೂ ಎರಡೂ ಒಂದೇ ಅರ್ಥವನ್ನು ಕೊಡುತ್ತಿವೆ. ರಾವಣಬ್ರಹ್ಮ 'ಶ್ರೀರಾಮ' ಎಂಬ ಪದವನ್ನು ದೇವರಾಗಿ ಒಪ್ಪಿಕೊಳ್ಳುತ್ತಿದ್ದನೇ ಹೊರತು, ಹೆಸರು ಇಟ್ಟುಕೊಂಡಷ್ಟುಮಾತ್ರಕ್ಕೆ 'ಮನುಷ್ಯ ದೇವರು' ಎಂಬ ಮಾತನ್ನು ಪೂರ್ತಿ ವಿರೋಧಿಸುತ್ತಿದ್ದನು. ತ್ರೇತಾಯುಗವೊಂದರ ವಾಸ್ತವ ಹೆಸರು ತ್ರೈತಾಯುಗ. ಆದರೇ ಅದು ತ್ರೇತಾಯುಗವಾಗಿ ಬದಲಾಗಿಹೋಗಿದೆ. ಹಾಗೆಯೇ 'ಶ್ರೀರಾಮ' ಎಂಬ ಮಾತು ದೈವತ್ವವನ್ನು ತಿಳಿಸುವುದು. ಆದರೇ 1) ದಶರಥ ರಾಮ,

2) ಅಯೋಧ್ಯ ರಾಮ, 3) ಕೋದಂಡರಾಮ, 4) ಪಟ್ಟಾಭಿ ರಾಮ, 5) ಸೀತಾ ರಾಮ, 6) ಕಲ್ಯಾಣ ರಾಮ ಎಂಬ ಹೆಸರುಗಳು ದೈವತ್ವಕ್ಕೆ ಸಂಬಂಧಿಸಿರುವವಲ್ಲ ಎಂದು ತಿಳಿಸುತ್ತಾ, ತ್ರೈತಾ ಯುಗದಲ್ಲಿ (ತ್ರೇತಾಯುಗದಲ್ಲಿ) 'ದೇವರು ಮನುಷ್ಯನಾಗಿ ಹುಟ್ಟಿರುವುದು' ವಾಸ್ತವ ಆದರೇ, ದಶರಥ ಪುತ್ರನು ದೇವರಲ್ಲವೆಂದು ರಾವಣಬ್ರಹ್ಮ ಹೇಳಿದಾಗ, ಅದೇ ವಿಷಯವನ್ನೇ ಭಕ್ತ ಕಬೀರು ಕೂಡಾ "ಶ್ರೀರಾಮನು ಬೇರೆಯಾಗಿದ್ದಾನೆ. ನಾನು ದಶರಥ ರಾಮನನ್ನು ಕರೆಯಲಿಲ್ಲ, ನೆನೆಯಲಿಲ್ಲ. ನಾನು ಮಾತ್ರ ಆತ್ಮರಾಮನಾದ ಶ್ರೀರಾಮನನ್ನು ನೆನಪಿಸಿಕೊಳ್ಳುತ್ತಿದ್ದೇನೆ, ಅಷ್ಟೇ ಹೊರತು ಅಯೋಧ್ಯ ರಾಮನನ್ನು ನಾನು ನೆನೆಯಲಿಲ್ಲ" ಎಂದು ಭಕ್ತ ಕಬೀರು ಕೂಡಾ ಹೇಳಿದ್ದಾನೆ. ಇದನ್ನನುಸರಿಸಿ ರಾಮನು ಯಾರೋ, ರಾವಣನು ಯಾರೋ ತಿಳಿದುಕೊಳ್ಳಿ.

**ಪ್ರಶ್ನೆ :– ರಾವಣನು 'ಶ್ರೀಲಂಕ' ಎಂಬ ದೇಶದಲ್ಲಿ ಇದ್ದಾನೆ. ಜನಕನು ಭಾರತ ದೇಶದಲ್ಲಿ ಇದ್ದಾನೆ. ಪಕ್ಕದ ದೇಶದಲ್ಲಿದ್ದ ರಾವಣನು ಭಾರತದೇಶದಲ್ಲಿದ್ದ ಜನಕನಿಗೆ ಗುರು ಹೇಗಾದನು? ಜನಕನು ಸಮುದ್ರವನ್ನು ದಾಟಿ ಹೋಗಲಾರನು ಅಲ್ಲವೇ! ಇದಕ್ಕೆ ನಿಮ್ಮ ಉತ್ತರವೇನು?**

**ಉತ್ತರ :–**ರಾವಣನು ಹುಟ್ಟಿರುವುದು ಲಂಕದಲ್ಲೇ. ರಾವಣನು ಹುಟ್ಟುವುದಕ್ಕಿಂತ ಮೊದಲು ಲಂಕ ಕೂಡಾ ಭಾರತದೇಶಕ್ಕೆ ಸಂಬಂಧಿಸಿದ ದೇಶವಾಗಿ ಕರೆಯಲ್ಪಡುತ್ತಿತ್ತು. ಲಂಕಕ್ಕು ಭಾರತದೇಶಕ್ಕು ಸಾವಿರ ಮೀಟರುಗಳ ದೂರಕ್ಕಿಂತ ಹೆಚ್ಚು ಇರುತ್ತಿರಲಿಲ್ಲ. ಸಾವಿರ ಮೀಟುರುಗಳು ಎಂದರೇ ಒಂದು ಕಿಲೋಮೀಟರು. ಸಾವಿರ ಮೀಟರುಗಳು ಸಮುದ್ರವನ್ನು ಕೆಲವರು ಈಜಿ ದಾಟುತ್ತಿದ್ದರು. ಕೆಲವರು ಈಜುವುದಕ್ಕೆ ದೂರವಾಗುವುದರಿಂದ ಸಮುದ್ರದಲ್ಲಿ ಇಳಿಯುತ್ತಿರಲಿಲ್ಲ. ರಾವಣಬ್ರಹ್ಮ ಹುಟ್ಟಿದ ಸಮಯದಲ್ಲಿ **"ದೇವರು ಭಗವಂತನಾಗಿ ಹುಟ್ಟಿದ್ದಾನೆಂದು"** ಮೇಘಗಳೆಂಬ ಮಹಾಭೂತಗಳು (ಜೀವಿಗಳು) ಸಂತೋಷಿಸಿದವರಾಗಿ ಹೆಚ್ಚು ಮಳೆಯನ್ನು ಸುರಿಸಿದರೇ, ಭೂಮಿ ಸಂತೋಷವನ್ನು ತಿಳಿಸುತ್ತಾ ಕಂಪಿಸಿದರೇ, ಸಮುದ್ರದಲ್ಲಿ ಸುನಾಮೀ, ಭೂಮಿ ಮೇಲೆ ಜಲಪ್ರಳಯ ಏರ್ಪಟ್ಟಿವೆ. ಆ

ಸುನಾಮಿಯಿಂದ ಭಾರತ ಭೂಭಾಗವು ಸುಮಾರು 20 ಕಿಲೋಮೀಟರುಗಳು ಮುಳುಗಿಹೋಗಿದೆ. ಅಂದಿನಿಂದ ಭಾರತದೇಶದವರು ಸಮುದ್ರವನ್ನು ದಾಟಲಾರದೆ ಲಂಕಕ್ಕೆ ಹೋಗುತ್ತಿರಲಿಲ್ಲ. ಅಂದಿನಿಂದ ಲಂಕೆಯೊಂದಿಗೆ ಭಾರತದೇಶಕ್ಕೆ ಸಂಬಂಧ ಮುರಿದು ಹೋಗಿದೆ. ಇದೆಲ್ಲಾ ರಾವಣನು ಹುಟ್ಟಿದಾಗ ನಡೆದಿದೆ. ಅಲ್ಲಿಯವರೆಗು ಭಾರತದೇಶ ಪಾಲನೆಯಲ್ಲಿ ಭಾಗವಾಗಿದ್ದ ಲಂಕ ಪ್ರತ್ಯೇಕ ದೇಶವಾಗಿ ಏರ್ಪಟ್ಟಿದೆ. 'ಲಂಕ' ಎಂದರೇ 'ಸುತ್ತಲೂ ನೀರಿರುವ ಸ್ವಲ್ಪ ಪ್ರಾಂತ' ಎಂದು ಅರ್ಥ. ರಾವಣ ಜನ್ಮದಿಂದ ಲಂಕ ಪ್ರತ್ಯೇಕ ರಾಜ್ಯವಾಗಿ ಏರ್ಪಟ್ಟಿದೆ. ಭಾರತದೇಶ ದೊಂದಿಗೆ ಪರಿಪಾಲನಾ ಸಂಬಂಧ ಮುರಿದುಹೋಗಿ ಲಂಕಕ್ಕೆ ಪ್ರತ್ಯೇಕವಾದ ರಾಜ, ಪ್ರತ್ಯೇಕವಾದ ಪಾಲನೆ ಏರ್ಪಟ್ಟಿದೆ.

ರಾವಣನಿಗೆ 25 ವರ್ಷಗಳ ವಯಸ್ಸು ಬರುತ್ತಲೇ ಲಂಕ ಪಾಲನೆಯ ಜವಾಬ್ದಾರಿ ರಾವಣನ ಮೇಲೆ ಬಿದ್ದಿತು. ಚಿಕ್ಕ ವಯಸ್ಸಿನಲ್ಲೇ ಲಂಕ ರಾಜ್ಯಕ್ಕೆ ರಾಜನಾದ ರಾವಣನು ತನ್ನ ದೇಶದಲ್ಲಿದ್ದ ಪ್ರತಿ ವ್ಯಕ್ತಿ ದೈವಜ್ಞಾನವನ್ನು ತಿಳಿಯುವಂತೆ, ಆರಾಧನೆ ಮಾಡಿದರೇ ಒಂದು ಈಶ್ವರ ಲಿಂಗಕ್ಕೇ ಆರಾಧನೆ ಮಾಡುವಂತೆ ತಯಾರಿ ಮಾಡಿದನು. ಲಂಕ ದೇಶದಲ್ಲಿ ರಾವಣನು ರಾಜನಾದ ನಂತರ ಪ್ರಜೆಗಳೆಲ್ಲರೂ ಜ್ಞಾನಿಗಳು ಆಗುವುದು, ಎಲ್ಲರೂ ಈಶ್ವರ ಲಿಂಗವನ್ನೇ ಪೂಜಿಸುವುದರಿಂದ ಲಂಕ ಒಂದು ಆಧ್ಯಾತ್ಮಿಕ ಕೇಂದ್ರವಾಗಿ ತಯಾರಾಗಿದೆ. ಅಲ್ಲಿಯವರೆಗೂ 'ಲಂಕ' ಎಂಬ ಎರಡು ಅಕ್ಷರಗಳ ಹೆಸರಿಗೆ ಮೋಕ್ಷಕ್ಕೆ ಗುರುತಾದ 'ಶ್ರೀ' ಬಂದು ಸೇರಿದೆ. ಆದ್ದರಿಂದ ಅಂದಿನಿಂದ ಲಂಕ ಶ್ರೀಲಂಕವಾಗಿ ಬದಲಾಗಿಹೋಗಿದೆ. ಲಂಕೆಯನ್ನು ಶ್ರೀಲಂಕವಾಗಿ ಎಲ್ಲರೂ ಕರೆಯುವುದಕ್ಕೆ ಅಭ್ಯಾಸ ಮಾಡಿಕೊಂಡರು. ಅಂದಿನಿಂದ ಇಂದಿನವರೆಗು ಲಂಕದೇಶವು ಶ್ರೀಲಂಕವಾಗಿ ಕರೆಯಲ್ಪಡುತ್ತಿದೆ. ಆ ಕಾಲದಲ್ಲಿ ತ್ರೇತಾಯುಗದ ಕೊನೆಯವರೆಗು ರಾತ್ರಿ ಹೊತ್ತು ಶ್ರೀಲಂಕದ ಕಡೆ ಅಂದರೇ ಭಾರತದೇಶಕ್ಕೆ ಪೂರ್ತಿ ದಕ್ಷಿಣದಲ್ಲಿ ಬೆಳಕು ಕಾಣಿಸುತ್ತಿತ್ತು. ದೂರದಿಂದ ಶ್ರೀಲಂಕದ ಕಡೆ ಇರುವ ಬೆಳಕನ್ನು ನೋಡಿದ ಭಾರತೀಯರು ಲಂಕದಲ್ಲಿ ಯಾವುದೋ ದೊಡ್ಡ ಶಕ್ತಿ ಇದೆಯೆಂದು

ಅಂದುಕೊಳ್ಳುತ್ತಿದ್ದರು. ಆದರೇ ಆ ದೊಡ್ಡಶಕ್ತಿ ರಾವಣನೇಯೆಂದು ತಿಳಿಯ ಲಾರದೇ ಹೋದರು. ದಕ್ಷಿಣ ಭಾರತ ದೇಶದಲ್ಲಿ ಎಲ್ಲರಿಗಿಂತಲೂ ಮೀರಿದ ಜ್ಞಾನಿಗಳಿರುತ್ತಿದ್ದರು. ದೊಡ್ಡಜ್ಞಾನಿಗಳಾದವರು ಕೆಲವರು ರಾವಣನು ಸಾಮಾನ್ಯ ವಾದ ಮನುಷ್ಯನಲ್ಲ ಆತನಲ್ಲಿ ದೈವಜ್ಞಾನ, ದೈವವು ಒಳಗೊಂಡಿದೆಯೆಂದು ತಿಳಿದು 'ರಾವಣ' ಎಂಬ ಹೆಸರಿನ ಕೊನೆಯಲ್ಲಿ 'ಬ್ರಹ್ಮ' ಎಂಬ ಬಿರುದನ್ನು ಸೇರಿಸಿ ಪೂರ್ತಿಯಾಗಿ **"ರಾವಣಬ್ರಹ್ಮ"** ಎಂದು ಕರೆಯುತ್ತಿದ್ದರು. ಈ ವಿಧವಾಗಿ ಲಂಕ, ಶ್ರೀಲಂಕವಾಗಿ, ರಾವಣನು ರಾವಣಬ್ರಹ್ಮನಾಗಿ ಬದಲಾಗಿ ಹೋಗಿದ್ದಾನೆ.

ರಾವಣಬ್ರಹ್ಮನಿಗಿಂತ ಸುಮಾರು ಇಪ್ಪತ್ತೈದು ವರ್ಷಗಳ ಚಿಕ್ಕವನಾದ ಜನಕನು ಶ್ರೀಲಂಕದ ಕಡೆ ರಾತ್ರಿಹೊತ್ತು ಕಾಣಿಸುವ ಬೆಳಕನ್ನು ನೋಡಿ, ರಾವಣಬ್ರಹ್ಮ ದೊಡ್ಡ ಆಧ್ಯಾತ್ಮಿಕ ನಿಪುಣನೆಂದು ತಿಳಿದು, ಯಾವ ವಿಧವಾಗಿ ಆದರೂ ರಾವಣಬ್ರಹ್ಮನ ಶಿಷ್ಯನಾಗಬೇಕೆಂದು ಜನಕನು ಅಂದುಕೊಳ್ಳುವುದು ನಡೆಯಿತು. ಅಂದಿನ ಕಾಲದಲ್ಲಿಯೇ ರಾವಣಬ್ರಹ್ಮನಿಗೆ **ಔಷಧ ಗುಣಗಳು ಮತ್ತು ಮಂತ್ರಶಕ್ತಿ ತರಂಗಗಳು ಬೆರೆತಿರುವ ವಿಮಾನವಿತ್ತು.** ವಿಮಾನ ಎಂದರೇ ಆಕಾಶದಲ್ಲಿ ಪಯಣಿಸುವುದೆಂದು ಅರ್ಥ. ಅದು ಯಾವಾಗಲೂ ಭೂಮಿಮೇಲೆ ಇಳಿಯದೆ ಆಕಾಶದಲ್ಲೇ ಇರುತ್ತಿತ್ತು. ಪ್ರಯಾಣಿಸುವ ಸಮಯದಲ್ಲೇ ಅಲ್ಲದೇ ಭೂಮಿಮೇಲೆ ಇಳಿದರೂ ಭೂಮಿಗೆ ಅಡಿ ಎತ್ತರದಲ್ಲಿ ಇದ್ದು ನಿಂತಿರುತ್ತಿತ್ತು. ಆ ವಿಮಾನ ಹೆಚ್ಚಾಗಿ ಪುಷ್ಪಗಳಿಂದ ಅಲಂಕರಿಸಲ್ಪಟ್ಟಿರುತ್ತಿತ್ತು. ರಾವಣಬ್ರಹ್ಮನ ಮೇಲೆ ಗುರುಭಕ್ತಿ ಹೊಂದಿರುವ ಶ್ರೀಲಂಕ ಪ್ರಜೆಗಳು ಆತನು ಪ್ರಯಾಣಿಸುವ ವಿಮಾನವನ್ನು ಪುಷ್ಪಗಳಿಂದ ಅಲಂಕರಿಸುತ್ತಿದ್ದರು. ಆದ್ದರಿಂದ ಅದರ ಹೆಸರು "ಪುಷ್ಪಕ ವಿಮಾನ" ಎಂದು ಕರೆಯಲ್ಪಡುತ್ತಿತ್ತು. ರಾವಣಬ್ರಹ್ಮ ತನ್ನ ದೇಶಕ್ಕೆ ಸಮೀಪದಲ್ಲಿರುವ ಭಾರತ ದೇಶದಲ್ಲಿ ದಕ್ಷಿಣ ಪ್ರಾಂತವೆಲ್ಲವೂ ತನ್ನ ಜ್ಞಾನವನ್ನು ತಿಳಿಸಿದ್ದಾನೆ. ಅಂದಿನ ಕಾಲದಲ್ಲಿ ರಾವಣಬ್ರಹ್ಮನ ಜ್ಞಾನವನ್ನು ತಿಳಿದು ಎಷ್ಟೋಜನ ದೊಡ್ಡ ಜ್ಞಾನಿಗಳಾಗಿ ಬದಲಾಗಿದ್ದಾರೆ. ಜನಕನು ದಕ್ಷಿಣ ಭಾರತದೇಶದಲ್ಲಿ

ಒಂದು ಪ್ರಾಂತದ ರಾಜನಾಗಿ ಇದ್ದನು. ಆತನು ರಾವಣಬ್ರಹ್ಮನನ್ನು ಗುರುವಾಗಿ ಕೋರಿದವರಲ್ಲಿ ಮೊದಲನೆಯ ವನು. ಆದ್ದರಿಂದ ರಾವಣಬ್ರಹ್ಮ ತನ್ನ ವಿಮಾನದಲ್ಲಿ ಯಾವ ಪ್ರಾಂತಕ್ಕೆ ಬಂದು ಜ್ಞಾನವನ್ನು ಹೇಳಿದರೇ ಆ ಪ್ರಾಂತಕ್ಕೆ ಹೋಗಿ ಜ್ಞಾನವನ್ನು ತಿಳಿದುಕೊಳ್ಳುತ್ತಿದ್ದನು. ಆ ವಿಧವಾಗಿ ರಾವಣಬ್ರಹ್ಮನ ಜ್ಞಾನವನ್ನು ತಿಳಿಯುವುದರಿಂದ ಜನಕನು ದೊಡ್ಡ ಕರ್ಮಯೋಗಿಯಾಗಿ ಬದಲಾಗಿ ಹೋದನು. ಕರ್ಮಯೋಗವನ್ನು ಆಚರಿಸಿ ಆ ಜನ್ಮದಲ್ಲಿಯೇ ಮೋಕ್ಷ ಹೊಂದಿದಂತೆ ಭಗವದ್ಗೀತೆಯಲ್ಲಿ ಕರ್ಮಯೋಗದಲ್ಲಿ ಇಪ್ಪತ್ತನೆಯ ಶ್ಲೋಕವು ಸಾಕ್ಷಿಯಾಗಿ ಇದೆ.

ಭಾರತದೇಶವೊಂದರ ಪಕ್ಕದ ದೇಶವಾದ ಶ್ರೀಲಂಕ ದೈವಜ್ಞಾನದಲ್ಲಿ ಪ್ರಥಮ ಸ್ಥಾನವನ್ನು ಆಕ್ರಮಿಸಿರುವಾಗ, ಉತ್ತರ ಭಾರತದೇಶದಲ್ಲಿನ ಆರ್ಯರು ರಾವಣಬ್ರಹ್ಮನ ಮೇಲೆ, ಶ್ರೀಲಂಕದ ಮೇಲೆ ಅಸೂಯೆ ಹೊಂದಿ ರಾವಣಬ್ರಹ್ಮನನ್ನು ಅಪ್ರತಿಷ್ಠೆ ಪಾಲು ಮಾಡಬೇಕೆಂದು ಕಂಕಣ ಕಟ್ಟಿಕೊಂಡು ಅದೇ ಕೆಲಸವಾಗಿ ರಾವಣನು ಕೆಟ್ಟವನೆಂದು, ದುರ್ಮಾರ್ಗನೆಂದು ಪ್ರಚಾರ ಮಾಡಲು ಪ್ರಾರಂಭಿಸಿದರು. ಸತ್ಯಾಸತ್ಯಗಳನ್ನು ತಿಳಿಯದ ಪ್ರಜೆಗಳು ಯಾರು ಏನು ಹೇಳಿದರೇ ಆ ಮಾತನ್ನು ವಿಚಕ್ಷಣೆ ಇಲ್ಲದೇ ಕೇಳುವುದರಿಂದ ಆರ್ಯರು ಪ್ರಚಾರ ಮಾಡಿದಂತೆ ರಾವಣನು ರಾಕ್ಷಸನೆಂದೂ, ಕಾಮಾಂಧನೆಂದೂ, ದುರ್ಮಾರ್ಗ ನೆಂದೂ ನಂಬಿದರು. ಆರ್ಯರು ಅಷ್ಟಕ್ಕೆ ನಿಲ್ಲದೇ ರಾವಣಬ್ರಹ್ಮನಿಗೆ ಯಾವುದೋ ಸಂಬಂಧವಿಲ್ಲದ ಉತ್ತರದೇಶದವನಾದ ದಶರಥ ರಾಮನನ್ನು ರಾವಣನಿಗೆ ವಿರುದ್ಧವಾಗಿ ಪ್ರಚಾರ ಮಾಡಿದರು. ಅದರಿಂದ ಪ್ರಜೆಗಳಲ್ಲಿ ರಾಮನು ಒಳ್ಳೆಯವನು, ದೇವರೆಂದು, ರಾವಣನು ಕೆಟ್ಟವನು ರಾಕ್ಷಸನೆಂದು ಪ್ರಚಾರವಾಗಿ ಹೋಗಿದೆ. ರಾವಣಬ್ರಹ್ಮ 'ದೇವರ ಅವತಾರವಾದ ಭಗವಂತನಾಗಿ' ಇದ್ದು, ದೈವಜ್ಞಾನಕ್ಕೇ ಹೆಚ್ಚು ಪ್ರಾಧಾನ್ಯತೆ ಕೊಟ್ಟು ಪ್ರಚಾರ ಮಾಡಿದರೂ, ಯಾರಿಗೂ ಯಾವ ಕೇಡು ಮಾಡದಿದ್ದರೂ ಕೊನೆಗೆ ಈ ದಿನ ಪ್ರಜೆಗಳ ಮಧ್ಯದಲ್ಲಿ ರಾವಣನು ಕೆಟ್ಟವನಾಗಿ, ದುರ್ಮಾರ್ಗನಾಗಿ ಉಳಿದುಹೋಗಿದ್ದಾನೆ.

ಹೆಸರಿನ ಕೊನೆಯಲ್ಲಿ ಬ್ರಹ್ಮ ಎಂಬ ಬಿರುದಿದ್ದರೂ, ಹೆಸರಿನ ಮೊದಲು 'ಭಗವಾನ್' ಎಂಬ ಶಬ್ಧವಿದ್ದರೂ, ಆತನಲ್ಲಿನ ದೈವತ್ವವನ್ನು ಗುರುತಿಸದ ಅಜ್ಞಾನಿಗಳು ಆತನನ್ನು ಕೆಟ್ಟವನಾಗಿ ತಿಳಿದರೂ, ಆ ದಿನ ಆತನು ಹೇಳಿರುವ ಜ್ಞಾನವನ್ನು ಅನುಸರಿಸಿ ಇಂದಿಗೂ ಭಾರತದೇಶದಲ್ಲಿ ಆತನ ಭಕ್ತರು ಅಲ್ಲಲ್ಲಿ ಇದ್ದಾರೆ. ರಾವಣಬ್ರಹ್ಮ ದೈವಜ್ಞಾನವನ್ನೇ ಬೋಧಿಸುವುದರಿಂದ ಲಂಕ ಸುತ್ತಲೂ ಇರುವ ಸಮುದ್ರಕ್ಕೆ 'ಜ್ಞಾನ ಸಮುದ್ರ' ಎಂದು ಅರ್ಥ ಬರುವಹಾಗೆ 'ಇಂದೂ ಮಹಾ ಸಮುದ್ರ' ಎಂದು ಹೆಸರಿಟ್ಟಿದ್ದಾರೆ. 'ಇಂದೂ' ಎನ್ನುವ ಪದವು ಈ ಮಧ್ಯೆ ಕಾಲದಲ್ಲಿ ಅಂದರೇ ಸುಮಾರು 150 ವರ್ಷಗಳ ಕೆಳಗೆ ಶಬ್ಧವು ಬದಲಾವಣೆಯಾಗಿ ಹಿಂದೂ ಮಹಾಸಮುದ್ರವಾಗಿ ಹೆಸರು ಬದಲಾಗಿ ಹೋಗಿದೆ. 'ಇಂದೂ' ಎಂಬ ಪದಕ್ಕೆ 'ಜ್ಞಾನ' ಎಂದು ಅರ್ಥವಿದೆ ಆದರೇ, 'ಹಿಂದೂ' ಎಂಬ ಪದಕ್ಕೆ ಯಾವ ಅರ್ಥವಿಲ್ಲ ಎಂದು ಗ್ರಹಿಸಬೇಕು. ನಾವು ಪೂರ್ವವಿರುವ ಹೆಸರನ್ನು 'ಇಂದೂ' ಎಂದು ಹೇಳಿದರೇ, ಚರಿತ್ರೆ ತಿಳಿಯದವರು ಇದೇನೋ ಪ್ರತ್ಯೇಕವಾದ ಮತವಾಗಿ ಭಾವಿಸಿ, ನಮ್ಮನ್ನು ಕೂಡಾ ಅನ್ಯಮತಸ್ಥರಾಗಿ ಪ್ರಚಾರ ಮಾಡುತ್ತಿದ್ದಾರೆ. ಅಷ್ಟು ದೊಡ್ಡ ರಾವಣಬ್ರಹ್ಮನನ್ನು ದುರ್ಮಾರ್ಗನು ಎಂದವರು ನಮ್ಮನ್ನು ಅನ್ಯಮತಸ್ಥರೆಂದು ಪ್ರಚಾರ ಮಾಡುವುದು ದೊಡ್ಡ ವಿಷಯವೇನಲ್ಲ.

**ಪ್ರಶ್ನೆ:– ಲಂಕ ಪ್ರಾಂತದಲ್ಲಿ ರಾತ್ರಿಹೊತ್ತು ಬೆಳಕು (ಕಾಂತಿ) ಭಾರತ ದೇಶದವರೆಗು ಕಾಣಿಸುತ್ತಿತ್ತು ಎಂದು ಹೇಳಿದ್ದೀರಿ ಅಲ್ಲವೇ! ಹಾಗೆ ಯಾಕೆ ಕಾಣಿಸುತ್ತಿತ್ತು? ಈ ವಿಷಯಗಳು ರಾಮಾಯಣದಲ್ಲಿ ಕೂಡಾ ಬರೆಯಲಿಲ್ಲ ಅಲ್ಲವೇ! ನೀವು ಹೇಗೆ ಹೇಳುತ್ತಿದ್ದೀರಿ?**

**ಉತ್ತರ:–** ಪ್ರಪಂಚವೆಲ್ಲಾ ಅಣುವಣುವಿನಲ್ಲೂ ವ್ಯಾಪಿಸಿರುವವನು ದೇವರು. ದೇವರು ಶಕ್ತಿ ಸ್ವರೂಪನು, ಆತನು ಎಲ್ಲೆಡೆ ವ್ಯಾಪಿಸಿದ್ದರೂ ಕಾಣಿಸುವ ಆಕಾರವಿಲ್ಲದವನು. ಆದ್ದರಿಂದ ಆತನನ್ನು ಯಾರೂ ನೋಡಲಾರರು. ದೇವರಿದ್ದಾನೆ ಎನ್ನುವುದಕ್ಕೆ ಏನಾದರೂ ಎಲ್ಲರಿಗೂ ತಿಳಿಯುವ ಸಾಕ್ಷಿ ಇರಬೇಕು, ಆದಕಾರಣ ಅಜ್ಞಾನಿಗಳಿಗು ಸಹಿತ ತಿಳಿಯುವಂತೆ, ರಾವಣಬ್ರಹ್ಮನ ಅವತಾರದಲ್ಲಿ

ದೇವರು ಭಗವಂತನಾಗಿ ಇದ್ದಾಗ, ಮೊಟ್ಟಮೊದಲು ಬಂದಿರುವ ಅವತಾರ ವಾದ್ದರಿಂದ ಆ ವಿಷಯವು ಎಲ್ಲರಿಗೂ ನೆನಪಿರುವಹಾಗೆ ಲಂಕ ಪ್ರಾಂತದಲ್ಲಿ ಆಕಾಶದಲ್ಲಿ ಸ್ವಲ್ಪ ಬೆಳಕು ಕಾಣಿಸುತ್ತಿತ್ತು. ರಾವಣಬ್ರಹ್ಮ ನೂರು ವರ್ಷಗಳ ವಯಸ್ಸಿನಲ್ಲಿ ಮರಣಿಸಿದಾಗ, ಅಲ್ಲಿಯವರೆಗು ಶ್ರೀಲಂಕ ಪ್ರಾಂತದಲ್ಲಿ ಆಕಾಶದಲ್ಲಿ ಕಾಣಿಸುವ ಬೆಳಕು ಇಂದೂ (ಹಿಂದೂ) ಮಹಾಸಮುದ್ರದ ಮೇಲಕ್ಕೆ ಸರಿದುಹೋಗಿದೆ. **'ರಾವಣ ಜನ್ಮ ಮೊಟ್ಟಮೊದಲ ಭಗವಂತನ ಜನ್ಮ'** ಆಗಿರುವುದರಿಂದ ಆ ವಿಷಯ ಎಂದಿಗೂ ಗುರುತಾಗಿರುವಹಾಗೆ ರಾವಣಬ್ರಹ್ಮ ಶಕ್ತಿ ಆತನ ಶರೀರದೊಂದಿಗೆ ಇರುವವರೆಗು ಬೆಳಕಾಗಿ (ಕಾಂತಿಯಾಗಿ) ಕಾಣಿಸಿದೆ. ಆತನು ಶರೀರವನ್ನು ಬಿಟ್ಟು ಹೋದ ನಂತರ ಅಲ್ಲಿಯವರೆಗು ಬೆಳಕಾಗಿ ದೃಶ್ಯರೂಪದಲ್ಲಿದ್ದ ಶಕ್ತಿ ಕಾರ್ಯರೂಪದೊಳಗೆ ಬದಲಾಗಿಹೋಗಿ ಹಿಂದೂ ಮಹಾಸಮುದ್ರದ ಮೇಲೆ ಲಂಕಕ್ಕೆ ಕೆಳಗಿನ ಭಾಗದಲ್ಲಿ ಇದ್ದುಹೋಗಿದೆ. ಆ ಕಾಲದಲ್ಲಿ ಸಮುದ್ರದ ಮೇಲೆ ಪ್ರಯಾಣ ಮಾಡುವವರು ಇಲ್ಲ. ತ್ರೇತಾಯುಗ, ದ್ವಾಪರಯುಗ ಕಳೆದುಹೋಗಿ ನಂತರ ಬಂದಿರುವ ಕಲಿಯುಗದಲ್ಲಿ ಸಮುದ್ರಯಾನ ಮಾಡುವ ಹಡಗುಗಳು ಬಂದಿವೆ. ಭಾರತದೇಶಕ್ಕು ಶ್ರೀಲಂಕಕ್ಕು ಮಧ್ಯ ಭಾಗದಲ್ಲಿ ಸಮುದ್ರದಲ್ಲಿ ದೊಡ್ಡ ಮರಳಿನದಿನ್ನೆಗಳು (ದಿಬ್ಬೆಗಳು) ಇರುವುದರಿಂದ ಪೂರ್ವ ಪ್ರಾಂತಕ್ಕೆ ಬರುವ ನೌಕೆಗಳು ಎಲ್ಲವೂ ಶ್ರೀಲಂಕವನ್ನು ಸುತ್ತಿ ಬರಬೇಕಾದುದೇ.

ತ್ರೇತಾಯುಗ, ದ್ವಾಪರಯುಗ ಕಳೆದುಹೋಗಿ ಕಲಿಯುಗ ಪ್ರಾರಂಭ ದಲ್ಲಿಯೇ ಕ್ರಿಯ ಶಕ್ತಿರೂಪದಲ್ಲಿರುವ ರಾವಣಬ್ರಹ್ಮನ ಆತ್ಮಶಕ್ತಿ ಒಳಾಂತರ ಕ್ರಿಯಾಶಕ್ತಿಯಾಗಿ ಬದಲಾಗಿಹೋಗಿ ಅಮೆರಿಕಾ ಪಕ್ಕದಲ್ಲಿ ಐನೂರು ಕಿಲೋಮೀಟರುಗಳ ದೂರದಲ್ಲಿ ಸಮುದ್ರದಲ್ಲಿ ತ್ರಿಭುಜಾಕಾರದಲ್ಲಿ ನಿಂತು ಹೋಗಿದೆ. ಪೂರ್ವದಿಕ್ಕಿಗಿರುವ ಪ್ರಾಂತದಲ್ಲಿ ಅಮೆರಿಕಾದಲ್ಲಿನ ಫ್ಲೋರಿಡಾ ರಾಷ್ಟ್ರದಿಂದ ಐನೂರು ಕಿಲೋಮೀಟರುಗಳ ದೂರದಲ್ಲಿ ಪೂರ್ವ ದಿಕ್ಕಿಗಿರುವ ಪ್ರಾಂತದಲ್ಲಿ ಬೆರ್ಮುಡಾದ್ವೀಪ ಸಮೀಪದಲ್ಲಿ ನಿಂತಿರುವ ಬ್ರಹ್ಮಶಕ್ತಿ ಕ್ರಿಯಾಶೀಲ ಶಕ್ತಿಯಾಗಿ ಬದಲಾಗಿ ಹೋಗಿರುವುದರಿಂದ ತನ್ನ ಗುರುತಿಗಾಗಿ ಪ್ರಜೆಗಳಿಗೆ

ಅರ್ಥವಾಗದ ಕಾರ್ಯಗಳು ಮಾಡುತ್ತಿದೆ. ಸಮುದ್ರದಲ್ಲಿ ರಾವಣಬ್ರಹ್ಮನ ಜನ್ಮಕ್ಕೆ ಗುರುತಾಗಿ ನಿಂತಿರುವ ರಾವಣಬ್ರಹ್ಮ ಆತ್ಮಶಕ್ತಿ ಮೂರು ಆತ್ಮಗಳ ಸಿದ್ಧಾಂತದ ಪ್ರಕಾರ ಮೂರು ಕೋನಗಳ ಮಧ್ಯದಲ್ಲಿ ನಿಂತಿದೆ. ಸಮುದ್ರದ ಒಳಭಾಗದಲ್ಲಿ ತ್ರಿಭುಜಾಕಾರವಾಗಿ ಇರುವ ಶಕ್ತಿ ಆ ಪ್ರಾಂತದೊಳಗೆ ಹೋಗಿರುವ ದೊಡ್ಡದೊಡ್ಡ ನೌಕೆಗಳನ್ನು, ಆಕಾಶದಲ್ಲಿ ಆ ಪ್ರಾಂತದ ಮೇಲೆ ಹೋಗುವ ವಿಮಾನಗಳನ್ನು ಇಂದಿಗೂ ನೂರಾರು ಸಂಖ್ಯೆಯಲ್ಲಿ ಕಾಣಿಸದೆ ಹೋಗುವಂತೆ ಮಾಡಿದೆ. ಅದು ರಾವಣಬ್ರಹ್ಮ ಜನ್ಮಕ್ಕೆ ಗುರುತಾಗಿರುವ ಶಕ್ತಿಯೆಂದು ಇಲ್ಲೇತನಕ ಯಾರಿಗೂ ತಿಳಿದಿಲ್ಲ. ಬೆರ್ಮುಡಾದ್ವೀಪ ಪ್ರಾಂತದಲ್ಲಿ ತ್ರಿಕೋನಾಕಾರವಾಗಿ ಇರುವ ಕಾಣಿಸದ ಶಕ್ತಿಯಿಂದಲೇ ಯಾರಿಗೂ ಅರ್ಥವಾಗದ ಕಾರ್ಯಗಳು ನಡೆದಿವೆ.

ರಾಮಾಯಣದಲ್ಲಿ ಕೇವಲ ರಾಮನ ಬಗ್ಗೆ ಇರುವ ವಿಷಯಗಳನ್ನೇ ಒಳ್ಳೆಯದಾಗಿ ತೋರಿಸುತ್ತಾ ಬರೆಯುವುದು ನಡೆದಿದೆ. ಅದರಲ್ಲಿ ರಾವಣಬ್ರಹ್ಮನ ಬಗ್ಗೆ ಒಂದು ವಿಷಯವನ್ನು ಕೂಡಾ ಬರೆಯದೇ ಹೋಗುವುದಲ್ಲದೆ ರಾವಣಬ್ರಹ್ಮನನ್ನು ಕೆಟ್ಟದಾಗಿ ಚಿತ್ರಿಸಿ ತೋರಿಸಿದ್ದಾರೆ. ಅಷ್ಟೇ ಹೊರತು ಆ ದಿನ ಲಂಕದಲ್ಲಿ ನಡೆದ ಸಮಾಚಾರವಾಗಲೀ, ಸಮುದ್ರದ ಮೇಲಿನ ಬೆಳಕನ್ನಾಗಲೀ ಯಾವುದೂ ಬರೆಯಲಿಲ್ಲ. ರಾಮಾಯಣದಲ್ಲಿ ಕೇವಲ ರಾಮನ ಬಗ್ಗೆ ಇರುವ ಸಮಾಚಾರವನ್ನು ಮಾತ್ರವೇ ಬರೆದಿದ್ದಾರೆ. ಆದ್ದರಿಂದ ಈ ದಿನವಿರುವ ಬೆರ್ಮುಡಾ ಟ್ರೈಯಾಂಗಿಲ್‌ಗೆ ಮೂಲಾಧಾರವಾದ ಆ ದಿನದ ಶಕ್ತಿಯನ್ನು ಕುರಿತು ಯಾರಿಗೂ ತಿಳಿಯದಹಾಗೆ ಹೋಗಿದೆ. ಆ ದಿನ ಲಂಕ ಪ್ರಾಂತದ ಮೇಲೆ ಆಕಾಶದಲ್ಲಿ ರಾತ್ರಿಹೊತ್ತು ಕಾಣಿಸುವ ಬೆಳಕನ್ನು ಕುರಿತು ನಾನು ಹೇಳಿದರೂ ಇಂದಿನ ಪ್ರಜೆಗಳು ನಂಬಲಾರದ ಅಯೋಮಯಸ್ಥಿತಿಯಲ್ಲಿ ಬಿದ್ದುಹೋಗಿದ್ದಾರೆ. ರಾಮಾಯಣದಲ್ಲಿ ಇಲ್ಲದ ವಿಷಯವನ್ನು ನೀವು ಹೇಗೆ ಹೇಳಬಲ್ಲಿರೆಂದು ನನ್ನನ್ನು ಪ್ರಶ್ನಿಸುತ್ತಿದ್ದಾರೆ. ರಾಮಾಯಣದಲ್ಲಿ ರಾವಣ ವಿಷಯವಿರುವುದಿಲ್ಲವೆಂದು, ಅದು ಕೇವಲ ರಾಮನನ್ನು ಕುರಿತು ಬರೆದಿರುವುದೇಯೆಂದು ಅವರಿಗೆ ತಿಳಿಯದು. ನಾನು ಬರೆದಿರುವ ಗ್ರಂಥಗಳೆಲ್ಲವು ಯಾರಿಗೂ ತಿಳಿಯದ ವಿಷಯಗಳನ್ನೇ

ಬೋಧಿಸುತ್ತಿವೆ. ಎಲ್ಲರಿಗೂ ತಿಳಿದಿರುವ ವಿಷಯಗಳನ್ನು ನಾನು ಹೇಳಬೇಕಾದ ಕೆಲಸವಿಲ್ಲ. ಯಾರಿಗೂ ತಿಳಿಯದ ಅನೇಕ ರಹಸ್ಯಗಳು ನನ್ನಿಂದ ಹೇಳಲ್ಪಟ್ಟಿವೆ. ಆ ವಿಷಯಗಳು ಯಾರಿಗೂ ತಿಳಿಯದಿರುವವೆಂದು ಹೇಳುವುದು ಸತ್ಯವೇ ಆದರೇ ಆ ವಿಷಯಗಳು ವಾಸ್ತವವಾಗಿ ನನಗೂ ಕೂಡಾ ತಿಳಿಯವು. ಈ ವಿಧವಾಗಿ ಎಲ್ಲ ವಿಷಯಗಳನ್ನು ಬರೆದಿರುವ ನಾನು ಹೇಳುವುದು ಕೆಲವರಿಗೆ ವಿಚಿತ್ರವಾಗಿಯೇ ಇರುತ್ತದೆ. ಯಾರಿಗೆ ಹೇಗಿದ್ದರೂ ಕೆಲವು ರಹಸ್ಯ ವಿಷಯಗಳು, ಚರಿತ್ರೆಯಲ್ಲಿ ನಡೆದ ಕೆಲವು ಸಂಘಟನೆಗಳು ನನಗೆ ತಿಳಿಯದವುಗಳೆಂದು ನಾನು ಒಪ್ಪಿಕೊಳ್ಳುತ್ತಿದ್ದೇನೆ. ಏನೂ ತಿಳಿಯದವನು ಹೇಗೆ ಬರೆದಿದ್ದೀಯ? ಎಂದು ಕೆಲವರು ಕೇಳಿದ ಪ್ರಶ್ನೆಗೆ ಸಮಾಧಾನವಾಗಿ ನಾನು ಹೀಗೆ ಹೇಳುತ್ತಿದ್ದೇನೆ.

ಮನುಷ್ಯನ ಶರೀರದಲ್ಲಿ ಜೀವಿಯು, ದೇವರು ಎಂದು ಇಬ್ಬರು ಇದ್ದಾರೆ. ಜೀವಿಯಾಗಿ ನಾನು ಶರೀರದಲ್ಲಿರುವಾಗ, ನನ್ನ ಶರೀರದಲ್ಲಿನ ಆತ್ಮ ದೇವರಾಗಿ ಹೇಳಲ್ಪಡುತ್ತಿದೆ. ಜೀವಾತ್ಮ, ಆತ್ಮ, ಎರಡೂ ಪ್ರತಿ ಶರೀರದೊಳಗೆ ಇರುವಾಗ ಪರಮಾತ್ಮಯೆಂಬ ಮೂರನೆಯ ಆತ್ಮ ಶರೀರದೊಳಗೆ, ಶರೀರದ ಹೊರಗೆ ಎಲ್ಲೆಡೆ ಅಣುಅಣುವಿನಲ್ಲೂ ವ್ಯಾಪಿಸಿದೆ. ಹೊರಗೆ ಕೂಡಾ ವ್ಯಾಪಿಸಿರುವ ಪರಮಾತ್ಮನನ್ನು ದೇವರೆಂದು ಹೇಳಬಹುದು. ದೇವರೆಂದರೇ ಎಲ್ಲೆಡೆ ವ್ಯಾಪಿಸಿ ಇರುವವನೇ ಆದರೂ ಶರೀರದೊಳಗಿನ ಆತ್ಮನನ್ನು ಕೂಡಾ ದೇವರೆಂದೇ ಹೇಳುತ್ತಿದ್ದಾರೆ. ಆಧ್ಯಾತ್ಮಿಕ ವಿದ್ಯೆಯಲ್ಲಿ ಪರಮಾತ್ಮನನ್ನು ಮತ್ತು ಆತ್ಮನನ್ನು ಇಬ್ಬರನ್ನೂ ಒಂದೇ ಹೆಸರಾದ 'ದೇವರು' ಎಂದೇ ಹೇಳುತ್ತಿದ್ದಾರೆ. ಶರೀರ ದೊಳಗಿನ ದೇವರಾದ ಆತ್ಮ ಕೃತಯುಗದಿಂದ ಇಂದಿನವರೆಗು ಜೀವಿಯ ಹಿಂದೆಯೇ ಇರುತ್ತಾನೆ. ಜೀವಿಗೆ ಯಾವ ಜನ್ಮದ ಜ್ಞಾಪಕವು ಆ ಜನ್ಮದವರೆಗೇ ಇರುತ್ತದೆ. ಆತ್ಮಕ್ಕಾದರೇ ಎಲ್ಲಾ ಜನ್ಮಗಳ ಜ್ಞಾಪಕ ಇರುತ್ತದೆ. ಅಷ್ಟೇ ಅಲ್ಲದೇ ಶರೀರದಲ್ಲಿ ಅಧಿಪತಿಯಾಗಿ, ಅಧಿಕಾರಿಯಾಗಿ ಇರುವ ಆತ್ಮ ಸಮಸ್ತ ಕೆಲಸಗಳನ್ನು ಮಾಡುತ್ತಾ, ಸಮಸ್ತ ಮಾತುಗಳನ್ನು ಮಾತನಾಡುತ್ತಿದ್ದಾನೆ. ಶರೀರದಲ್ಲಿ ಜೀವಿಯು ವಾಸ್ತವವಾಗಿ ಯಾವ ಕೆಲಸವನ್ನು ಮಾಡಲಿಲ್ಲ. 'ಶರೀರದಲ್ಲಿ ನಡೆಯುವ

ಎಲ್ಲಾ ಕೆಲಸಗಳನ್ನು ನಾನೇ ಮಾಡುತ್ತಿದ್ದೇನೆಂದು' ಜೀವಿಯು ಅಹಂಭಾವನೆ ಯಿಂದ ಅಂದುಕೊಳ್ಳುತ್ತಿದ್ದಾನೆ. ಹಾಗೇ ಶರೀರದಲ್ಲಿ ಮಾತನಾಡುವ ಪ್ರತಿ ಮಾತು ಶರೀರದಲ್ಲಿನ ಆತ್ಮವೇ ಮಾತನಾಡುತ್ತಿರುವಾಗ, ಜೀವಿಯು ಸುಮ್ಮನಿರುವ ವನಾಗಿದ್ದರೂ ಅಜ್ಞಾನದಿಂದ, ಅಹಂಕಾರದಿಂದ ನಾನೇ ಮಾತನಾಡುತ್ತಿದ್ದೇನೆಂದು ಅಂದುಕೊಳ್ಳುತ್ತಿದ್ದಾನೆ. ಈ ವಿಷಯವು ಮೂರು ದೈವಗ್ರಂಥಗಳಲ್ಲಿ ಸಂಕ್ಷಿಪ್ತವಾಗಿ ಹೇಳಲಾಗಿದೆ. ಉದಾಹರಣೆಗೆ ದ್ವಿತೀಯ ದೈವಗ್ರಂಥದಲ್ಲಿ ಮತ್ತಾಯ 10-20 ವಾಕ್ಯದಲ್ಲಿ **"ನೀನು ಮಾತನಾಡುವ ಪ್ರತಿ ಮಾತು ನಿನ್ನ ತಂದೆಯಾದ ಆತ್ಮವೇ ಮಾತನಾಡುತ್ತಿದ್ದಾನೆ, ನೀನು ಏನೂ ಮಾತನಾಡಲಿಲ್ಲ."** ಎಂದು ಹೇಳಿದ್ದಾರೆ. ಹಾಗೆಯೇ ಪ್ರಥಮ ದೈವಗ್ರಂಥವಾದ ಭಗವದ್ಗೀತೆಯಲ್ಲಿ ಕೂಡಾ ಅನೇಕಕಡೆ ಈ ವಿಷಯವನ್ನು ಹೇಳಿದ್ದಾರೆ. ಈ ವಾಕ್ಯಗಳ ಪ್ರಕಾರ ಎಷ್ಟೋ ರಹಸ್ಯಗಳನ್ನು ನಾನು ಹೇಳಲಿಲ್ಲ. ನನ್ನ ಶರೀರದೊಳಗಿನ ಆತ್ಮವೇ ಹೇಳುತ್ತಿದೆ. ಈ ವಿಷಯವು ನಾನು ಇದಕ್ಕು ಮೊದಲು ಕೂಡಾ ಅನೇಕಬಾರಿ ಹೇಳಿದ್ದೇನೆ. ಇದರ ಪ್ರಕಾರ ಈ ಗ್ರಂಥದಲ್ಲಿ ಹೇಳಿರುವ ವಿಷಯಗಳೆಲ್ಲವೂ ಜೀವಿಯಾದ ನಾನು ಹೇಳಿರುವವು ಅಲ್ಲ. ಎರಡನೆಯ ದೇವರಾಗಿರುವ ಆತ್ಮ ಹೇಳಿರುವವೇಯೆಂದು ತಿಳಿಯಬೇಕು.

**ಪ್ರಶ್ನೆ :- ರಾವಣಬ್ರಹ್ಮ ಕೆಲವರಿಂದ 'ಭಗವಾನ್ ರಾವಣಬ್ರಹ್ಮ'ನಾಗಿ ಕರೆಯಲ್ಪಟ್ಟರೂ ಆತನು ರಾಮನ ಬಾಣಕ್ಕೆ ಮರಣಿಸಿದನು. ರಾಮನ ಬಾಣವು ನಾಭಿಯಲ್ಲಿ (ಹೊಕ್ಕಳನಲ್ಲಿ) ಚುಚ್ಚಿಕೊಂಡಾಗ ರಾವಣಬ್ರಹ್ಮ ಪ್ರಾಣ ಹೋಯಿತು ಎಂದು ರಾಮಾಯಣದಲ್ಲಿ ಬರೆದಿದ್ದಾರೆ. ನೀವು ಹೇಳುವ ರಾವಣಾಯಣದ ಪ್ರಕಾರ ಆ ಮಾತು ಸತ್ಯವೇನಾ ಎಂದು ನಾವು ಕೇಳುತ್ತಿದ್ದೇವೆ? ಭಗವಂತನ ಜನ್ಮ ಅಷ್ಟು ಸುಲಭವಾಗಿ ಮರಣಿಸುವುದು ಸ್ವಲ್ಪ ವಿಚಿತ್ರವಾಗಿ ಕಾಣಿಸುತ್ತಿದೆ. ಆ ದಿನ ನಡೆದ ಸತ್ಯವನ್ನು ತಿಳಿಸಿರೆಂದು ಕೇಳುತ್ತಿದ್ದೇವೆ?**

**ಉತ್ತರ :-** ರಾವಣನು ಭಗವಾನನೇಯೆಂದು ಗತದಲ್ಲಿ ಕೆಲವರು ಗುರುತಿ ಸಿರಬಹುದು ಆದರೇ, ಈಗ ರಾವಣನನ್ನು ದುರ್ಮಾರ್ಗನನ್ನಾಗಿ ಗುರುತಿಸಿದ ಸಮಾಜದಲ್ಲಿ ರಾವಣನು 'ದೇವರ ಅವತಾರವಾದ ಭಗವಂತನೆಂದು"

ಹೇಳಿದವರಲ್ಲಿ ನಾವೇ ಮೊದಲಿಗರು. ದೇವರು ಧರ್ಮಸಂಸ್ಥಾಪನೆಗೆ ಭೂಮಿ ಮೇಲೆ ಮನುಷ್ಯನಾಗಿ ಹುಟ್ಟಿದರೇ ತಾನು ಸಾಧಾರಣ ಮನುಷ್ಯನಾಗಿಯೇ ಪ್ರವರ್ತಿಸಿ, ತನ್ನನ್ನು ಸಾಮಾನ್ಯ ಮನುಷ್ಯನಾಗಿಯೇ ಎಲ್ಲರೂ ಗುರುತಿಸುವಂತೆ ಮಾಡುವನು ಆದರೆ, ತಾನು ಭಗವಂತನೆಂದು ಯಾರಿಗೂ ತಿಳಿಯಲು ಅವಕಾಶ ಕೊಡುವುದಿಲ್ಲ. ಆತನು ಹೇಗೆ ಜೀವಿಸಿದರೂ ಆತನು ಬಂದಿರುವ ಧ್ಯೇಯವನ್ನು ನೆರವೇರಿಸಿ ಹೋಗುವನು. ಭೂಮಿಮೇಲೆ ಒಬ್ಬನಿಗಾಗಲೀ, ಅನೇಕ ಜನರಿಗಾಗಲೀ ದೈವಧರ್ಮಗಳನ್ನು ತಿಳಿಸಿ ಹೋಗುವನು. ಕೃಷ್ಣನ ಅವತಾರದಲ್ಲಿ ಅರ್ಜುನನಿಗೆ ಒಬ್ಬನಿಗೇ ಜ್ಞಾನ ಹೇಳಿರುವಾಗ, ನಂತರ ಕಲಿಯುಗದಲ್ಲಿ ಬಂದಿರುವ ಜನ್ಮದಲ್ಲಿ ಅನೇಕ ಮಂದಿಗೆ ಜ್ಞಾನವನ್ನು ತಿಳಿಸಿದ್ದಾನೆ. ದೇವರು 'ಭಗವಂತನು' ಎಂಬ ಮನುಷ್ಯನಾಗಿ ಮೂರು ಯುಗಗಳಲ್ಲಿ ಮೂರುಬಾರಿ ಬಂದಿದ್ದಾನೆಂದು ಆಲಸ್ಯವಾಗಿಯಾದರೂ ಗ್ರಹಿಸಿದ್ದೇವೆ. ರಾವಣಬ್ರಹ್ಮ ಒಂದರ ಜನ್ಮ ಮೊದಲ ಭಗವಂತನ ಜನ್ಮ ಎಂದು ತಿಳಿದಿದ್ದೇವೆ. ಮೊದಲ ಜನ್ಮದಲ್ಲಿ ಹೇಗೆ ಮರಣಿಸಿದರೇ ಹಾಗೇ ಮೂರು ಜನ್ಮಗಳಲ್ಲಿಯೂ ಮರಣಿಸಿದಂತೆ ಪ್ರಜೆಗಳಿಗೆ ತಿಳಿಯಬೇಕೆಂದು ಆತನು ನಿರ್ಣಯಿಸಿಕೊಂಡ ನಿರ್ಣಯ. ಹಾಗೆಯೇ ರಕ್ತವು ಸೋರಿ ಮೂರು ಜನ್ಮಗಳಲ್ಲಿಯೂ ಮರಣಿಸಿದಂತೆ ನಡೆದಿದೆ.

ರಾವಣಬ್ರಹ್ಮನಿಗೆ ಮೊದಲಿನಿಂದ ತಿಳಿದಹಾಗೆಯೇ ಯುದ್ಧ ನಡೆದಿದೆ. ತಾನು ಅಯೋಧ್ಯ ರಾಮನ ಕೈಯಲ್ಲಿ ಮರಣಿಸುವೆನೆಂದು ರಾವಣನು ತನ್ನ ಹೆಂಡತಿಯಾದ ಮಂಡೋದರಿ ದೇವಿಗೆ ಹೇಳಿದ್ದನು. ರಾಮನು ಲಂಕಕ್ಕೆ ಬಂದು ಯುದ್ಧ ಮಾಡುವುದಕ್ಕೆ ಬೇಕಾಗಿರುವ ವಾತಾವರಣವನ್ನು ಅದೇಕೆಲಸವಾಗಿ ಸೃಷ್ಠಿಸಿದ್ದಾನೆ. ಆತನು ಮೊದಲೇ ಅಂದುಕೊಂಡಹಾಗೆ ಯುದ್ಧ ನಡೆದಿದೆ. ಆ ಯುದ್ಧದಲ್ಲಿ ರಾಮನ ಬಾಣವು ರಾವಣಬ್ರಹ್ಮ ನಾಭಿಯಲ್ಲಿ ನಾಟಿಕೊಂಡು ರಾವಣಬ್ರಹ್ಮ ಮರಣಿಸುವುದು ನಡೆದ ಕೆಲಸವೇ. ಆದರೇ ಹೊಟ್ಟೆಯಲ್ಲಿ ಅದೂ ನಾಭಿಸ್ಥಾನದಲ್ಲಿ ಯಾವ ಆಯುಧದಿಂದ ಇರಿದರೂ ಅಲ್ಲಿ ಮರಣಿಸುವುದಕ್ಕೆ ಕಾರಣವಾದ ಅವಯವಗಳು ಇಲ್ಲದಿರುವುದರಿಂದ ಯಾರೂ ಮರಣಿಸುವುದಿಲ್ಲ.

ಆದರೇ ರಾಮಾಯಣದಲ್ಲಿ ಬರೆದಿರುವುದರ ಪ್ರಕಾರ ನೋಡಿದರೇ ರಾವಣಬ್ರಹ್ಮನ ನಾಭಿಯಲ್ಲಿ ಅಮೃತದಿಂದ ತುಂಬಿದ ಕಳಶ ಇದೆಯೆಂದೂ, ಅದು ಇರುವವರೆಗು ರಾವಣನು ಮರಣಿಸುವುದಿಲ್ಲವೆಂದೂ, ರಾವಣನ ತಮ್ಮನಾದ ವಿಭೀಷಣನ ಮುಖಾಂತರ ರಾಮನು ತಿಳಿದುಕೊಂಡು, ರಾಮನು ತನ್ನ ಬಾಣವನ್ನು ನಾಭಿಸ್ಥಾನದಲ್ಲಿ ಚುಚ್ಚಿಕೊಳ್ಳುವಹಾಗೆ ಮಾಡಿದಾಗ, ರಾವಣನು ತನ್ನ ಹೊಟ್ಟೆಯಲ್ಲಿ ನಾಭಿ ಭಾಗದಲ್ಲಿ ಚುಚ್ಚಿಕೊಂಡ ಬಾಣದಿಂದ ಮರಣಿಸಿದ್ದಾನೆಂದು ಹೇಳಿದ್ದಾರೆ. ಆದರೇ ಇದು ಸ್ವಲ್ಪ ನಿಜ, ಸ್ವಲ್ಪ ಸುಳ್ಳಾಗಿದೆ. ರಾಮನ ಬಾಣವು ರಾವಣನ ನಾಭಿಯಲ್ಲಿ ಚುಚ್ಚಿಕೊಂಡಿರುವುದು ವಾಸ್ತವವೇ ಆದರೆ, ರಾವಣನ ನಾಭಿಯಲ್ಲಿ ಅಮೃತ ಕಳಶ ಇದೆಯೆನ್ನುವುದು ಪೂರ್ತಿ ಅಸತ್ಯ. ವಾಸ್ತವವಾಗಿ ಹೊಟ್ಟೆಯ ಸ್ಥಾನದಲ್ಲಿ ಎಲ್ಲಿ ಯಾವ ಆಯುಧ ಚುಚ್ಚಿಕೊಂಡರೂ ಸಾಯುವ ಪ್ರಮಾದವೇನೂ ಇರುವುದಿಲ್ಲ. ವಾಸ್ತವವಾಗಿ ಮನುಷ್ಯ ಮರಣಿಸುವಷ್ಟು ಪ್ರಮಾದವನ್ನು ರಾಮನ ಬಾಣ ಉಂಟುಮಾಡಲಿಲ್ಲ. ಆದರೂ ರಾವಣಬ್ರಹ್ಮ ಮರಣಿಸುವುದು ನಡೆದಿದೆ.

'ಕಾರಣವಿಲ್ಲದೆ ಪ್ರಾಣ ಹೋಗದು' ಎಂಬ ಗಾದೆಯ ಪ್ರಕಾರ ಯಾವುದೋ ಒಂದು ಕಾರಣದಿಂದ ಮನುಷ್ಯ ಮರಣಿಸುವನು. ಅದೇ ವಿಧವಾಗಿ ರಾವಣಬ್ರಹ್ಮ ತಾನು ಮೊದಲೇ ನಿರ್ಣಯಿಸಿಕೊಂಡಹಾಗೆ ಚಿಕ್ಕ ಗಾಯಕ್ಕೇ ಮರಣಿಸುವುದು ನಡೆದಿದೆ. ಅಷ್ಟೇ ಹೊರತು ಹೊಕ್ಕಳಿನಲ್ಲಿ ಅಮೃತಕಳಶವನ್ನು ಹೊಡೆದಿದ್ದಾನೆ ಎನ್ನುವುದು ಅಸತ್ಯ. ಕೃಷ್ಣನ ಜನ್ಮದಲ್ಲಿ ಕೂಡಾ ಅಪಾಯವಿಲ್ಲದ ಕಡೆ ಕಾಲಿನಬೆರಳಿಗೆ ಬಾಣ ನಾಟಿದಾಗ ಆ ಕಾರಣದಿಂದ ಆತನು ಮರಣಿಸುವುದು ನಡೆದಿದೆ. ಮೂರು ಜನ್ಮಗಳಲ್ಲಿಯೂ ರಕ್ತವು ಸೋರಿ ಮರಣಿಸಬೇಕೆನ್ನುವುದು ನಿರ್ಣಯ. ಆ ನಿರ್ಣಯದ ಪ್ರಕಾರ ಒಂದು ಜನ್ಮದಲ್ಲಿ ಹೊಟ್ಟೆಯಲ್ಲಿ ಬಾಣ ನಾಟಿರುವುದು ಕಾರಣವಾದರೇ, ಎರಡನೆಯ ಜನ್ಮದಲ್ಲಿ ಕಾಲಿನಬೆರಳಿಗೆ ಬಾಣವು ನಾಟಿ ಚಿಕ್ಕ ಗಾಯವಾಗಿದೆ. ಚಿಕ್ಕ ಗಾಯದಲ್ಲಿ ಸ್ವಲ್ಪ ರಕ್ತ ಸೋರಿಹೋಗಿ ಆ ಕಾರಣದಿಂದ ಕೃಷ್ಣನು ಮರಣಿಸುವುದು ನಡೆದಿದೆ. ಹಾಗೆಯೇ ಮೂರನೆಯ ಜನ್ಮದಲ್ಲಿ ಕೈಗೆ ಮೊಳೆಗಳು ಹೊಡೆದಾಗ ಸ್ವಲ್ಪ ರಕ್ತಪಾತಕ್ಕೇ ಯೇಸು

ಮರಣಿಸುವುದು ನಡೆದಿದೆ. ಒಂದು ಹೊಟ್ಟೆಗೆ, ಎರಡು ಕಾಲಿಗೆ, ಮೂರು ಕೈಗೆ ನಾಟಿದ ರಕ್ತಗಾಯಗಳಿಂದ ಮರಣಿಸುವುದಾಗಿದೆ. ವಾಸ್ತವವಾಗಿ ಆ ಮೂರು ವಿಧಾನಗಳು ರಕ್ತಸೋರುವುದು ಎನ್ನುವುದು ಸತ್ಯವೇ ಆದರೂ ಅದು ಮರಣಿಸುವಷ್ಟು ಪ್ರಮಾದವನ್ನುಂಟುಮಾಡುವ ಗಾಯಗಳಲ್ಲ.

ಭಗವಂತನಾಗಿ ಹುಟ್ಟಿದವನು ಮೂರು ವಿಧಗಳಾಗಿ ಮರಣಿಸಿದರೂ ಮೂರರಲ್ಲಿ ರಕ್ತ ಸೋರುವುದು ಹೊರತು ಏನೂ ಇಲ್ಲ. ಹಾಗೆ ಮೂರು ಜನ್ಮಗಳಲ್ಲಿ ಒಂದೇ ವಿಧವಾಗಿ ಮರಣಿಸುವುದರಿಂದ ಮೂರು ಜನ್ಮಗಳಿಗು ಒಂದರೊಂದಿಗೆ ಒಂದು ಅವಿನಾಭಾವಸಂಬಂಧವಿದೆಯೆಂದು, ಆ ಸಂಬಂಧವನ್ನನುಸರಿಸಿ ಮೂರು ಜನ್ಮಗಳು ಭಗವಂತನವೇಯೆಂದು ಗುರುತಿಸುವುದಕ್ಕೆ ಅವಕಾಶವಿದೆ. ಮರಣಿಸಿರುವ ವಿಧಾನ ಒಂದೇ, ಬೋಧಿಸಿರುವ ಜ್ಞಾನವು ಒಂದೇ ಆಗಿರುವುದರಿಂದ ಮೂರು ಜನ್ಮಗಳು ಭಗವಂತನವೇಯೆಂದು ಹೇಳುವುದಕ್ಕೆ ಪೂರ್ತಿ ಆಧಾರ ದೊರೆತಂದಾಗಿದೆ. ರಾವಣಬ್ರಹ್ಮ ತನ್ನ ಸಾವನ್ನು ತಾನು ಮೊದಲೇ ನಿರ್ಣಯಿಸಿಕೊಂಡು ಹೊರಗಡೆ ಮೊದಲೇ ಹೇಳುವುದು ನಡೆದಿದೆ. ಆತನು ಹೇಳಿರುವ ಮಾತಿನ ಪ್ರಕಾರ ರಾವಣನು ಮರಣಿಸಿದ್ದಾನೆಂದು ಹೇಳಬಹುದು ಆದರೇ, ರಾಮನ ಬಾಣದಿಂದ ಮರಣಿಸಿದ್ದಾನೆಂದು ಹೇಳುವುದಕ್ಕೆ ಸಾಧ್ಯವಿಲ್ಲ. ರಾಮನ ಬಾಣವು ಕಾರಣವಾದರೇ ಮೊದಲೇ ತಾನು ಹೇಳಿರುವ ಮಾತು ನೆರವೇರಿದೆ. ರಾವಣಬ್ರಹ್ಮನ ಮರಣವು ಸಾಧಾರಣ ಮನುಷ್ಯ ಸಾಯುವಹಾಗೆ ನಡೆದರೂ, ಆತನ ಮರಣದ ನಂತರ ದೊಡ್ಡ ಬೆಳಕು ಆತನ ಶರೀರದಿಂದ ಹೊರಗೆ ಬಂದು ಇಂದೂ ಮಹಾ (ಹಿಂದೂ ಮಹಾ) ಸಮುದ್ರದಲ್ಲಿ ನಿಂತುಹೋಗಿದೆ. ನಂತರ ಕಲಿಯುಗದಲ್ಲಿ ಅಮೆರಿಕಾದಲ್ಲಿ ಒಂದು ರಾಷ್ಟ್ರವಾದ ಫ್ಲೋರಿಡಾಗೆ ಪೂರ್ವದಿಕ್ಕಿನಲ್ಲಿ 500 ಕಿಲೋಮೀಟರುಗಳ ದೂರದಲ್ಲಿ ಬಂದಿದೆಯೆಂದು, ನಮ್ಮ ರಚನೆಗಳಲ್ಲಿನ **"ತ್ರೈತಾಕಾರ ರಹಸ್ಯ"** ಎಂಬ ಗ್ರಂಥದಲ್ಲಿ ಬರೆದಿಟ್ಟಿದ್ದೇವೆ. ಆ ಗ್ರಂಥದಲ್ಲಿ ರಾವಣಬ್ರಹ್ಮನವೊಂದು ಮಹತ್ವವನ್ನು ಕುರಿತು ಕೂಡಾ ಸ್ವಲ್ಪಮಟ್ಟಿಗೆ ಹೇಳಲಾಗಿದೆ. ಇಂದಿಗೂ ರಾವಣಬ್ರಹ್ಮನಿಗೆ ಗುರುತಾಗಿ

ಅಟ್ಲಾಂಟಿಕ್ ಸಮುದ್ರದ ಮೇಲೆ ಯಾರಿಗೂ ಅಂತ್ಯಸಿಗದ ಶಕ್ತಿಯಾಗಿ ಯಾವ ಪರಿಶೋಧಕನ ಪ್ರಯೋಗಗಳಿಗೆ ತಿಳಿಯದೇ ಇದೆ. ತ್ರೈತಾಕಾರ ಶಕ್ತಿಯಾಗಿ ಸಮುದ್ರದಲ್ಲಿ ಇದ್ದರೂ ಇಂದಿಗೂ ಆ ಶಕ್ತಿಯನ್ನು ಗುರುತಿಸಲಾರದವರಾಗಿ ಇದ್ದೇವೆಂದು **"ತ್ರೈತಾಕಾರ ರಹಸ್ಯ"** ಎಂಬ ನಮ್ಮ ಗ್ರಂಥದಲ್ಲಿ ಬರೆಯಲಾಗಿದೆ. ರಾವಣಬ್ರಹ್ಮ ಹುಟ್ಟಿರುವುದು ತ್ರೇತಾಯುಗದಲ್ಲಾದರೇ ಆ ಯುಗದ ಹೆಸರು ಈ ದಿನ ಸ್ವಲ್ಪ ಬದಲಾವಣೆ ಯೊಂದಿಗೆ ತ್ರೇತಾಯುಗವಾಗಿ ಹೇಳಲ್ಪಡುತ್ತಿದೆ. ತ್ರೇತಾಯುಗದಲ್ಲಿ ಹುಟ್ಟಿರುವವನು ರಾವಣಬ್ರಹ್ಮ ಆದಕಾರಣ ಆತನ ಗುರುತಿಗಾಗಿ ತ್ರೈತಾಕಾರ ಶಕ್ತಿ ಸಮುದ್ರದ ಮೇಲೆ ಇಂದಿಗೂ ಇದೆ.

**ಪ್ರಶ್ನೆ :– ಈ ದಿನ 'ದಲಿತರು' ಎಂಬ ಹೆಸರಿರುವವರು ರಾವಣಬ್ರಹ್ಮನನ್ನು ದೊಡ್ಡದಾಗಿ ನೋಡುತ್ತಿದ್ದಾರೆ. ಮಾದಿಗರು ಎಂಬ ಹೆಸರಿರುವವರನ್ನೇ ದಲಿತರಾಗಿ ಹೇಳುತ್ತಿದ್ದಾರೆ. ಮಾದಿಗರು ಒಂದು ಕುಲವಲ್ಲವೆಂದು ನೀವು ಹೇಳಿದ್ದೀರಿ ಅಲ್ಲವೇ! ಒಂದು ಕುಲವಲ್ಲದ ಮಾದಿಗರಿಗೆ ದಲಿತರೆನ್ನುವ ಹೆಸರು ಹೇಗೆ ಬಂದಿದೆ? ಈ ದಿನ ದಲಿತ ಸಂಘಗಳು ಅನೇಕ ಇವೆ. ಅವರನ್ನು ವಿಚಾರಿಸಿದರೇ ದಲಿತರು ಎನ್ನುವ ಮಾತಿಗೆ ಸರಿಯಾದ ಉತ್ತರ ಹೇಳದೆ ತಮ್ಮದು ಒಂದು ಕುಲವಾಗಿ ಹೇಳಿಕೊಳ್ಳುತ್ತಿದ್ದಾರೆ. ಮಾ ದಿಗ ಕುಲದವರೇ ದಲಿತರೆಂದು ಬಹಳಜನ ಹೇಳುತ್ತಿದ್ದಾರೆ. ವಾಸ್ತವವಾಗಿ ದಲಿತರೆಂದರೇ ಯಾರೋ? ಆ ಹೆಸರು ಅವರಿಗೆ ಹೇಗೆ ಬಂದಿದೆಯೋ ನೀವು ಸವಿವರವಾಗಿ ಹೇಳಬಲ್ಲಿರೆಂದು ಕೇಳುತ್ತಿದ್ದೇವೆ?**

**ಉತ್ತರ :–** ನೀವು ಹೇಳಿದಂತೆ ಮಾ ದಿಗರನ್ನೇ ದಲಿತರೆಂದು ಹೇಳುವುದು ನಡೆಯುತ್ತಿದೆ. 'ಮಾ ದಿಗ' ಎನ್ನುವವರು ಒಂದು ಕುಲದವರಲ್ಲವೆಂದು, ಅಜ್ಞಾನಿಗಳಾಗಿ ಇರುವವರನ್ನು ಎಲ್ಲರನ್ನು ಸೇರಿಸಿ ಹೇಳುವ ಪದವೆಂದು ಮೊದಲೇ ಹೇಳಿದ್ದೇವೆ. ಈಗ ಹೇಳುವ ದಲಿತರೆನ್ನುವವರು ಕೂಡಾ ಒಂದು ಕುಲದವರಲ್ಲ. ಅಜ್ಞಾನದಲ್ಲಿರುವ ಎಲ್ಲ ಕುಲದವರನ್ನು ಸೇರಿಸಿ ಹೇಳುವ ಪದವು 'ದಲಿತರು' ಇಲ್ಲವೇ 'ಮಾ ದಿಗ'ರು. 'ಮಾ ದಿಗ' ಎಂದರೂ, 'ದಲಿತ' ಎಂದು ಹೇಳಿದರೂ ಎರಡೂ ಎಲ್ಲ ಕುಲಗಳಲ್ಲಿನ ಅಜ್ಞಾನಿಗಳನ್ನು ತಿಳಿಸುವ ಪದವೇ

ಹೊರತು ಅದು ಪ್ರತ್ಯೇಕಿಸಿ ಒಂದು ಕುಲವಲ್ಲ. ಸತ್ಯವನ್ನು ಹೇಳಿದರೇ **'ದಳ (ಲ)'** ಎಂಬ ಪದದಿಂದ **'ದಲಿತ'** ಎಂಬ ಪದವು ಏರ್ಪಟ್ಟಿದೆ. ದಳ ಎಂದರೇ **ಅನೇಕರು ಒಂದು ಗುಂಪಾಗಿ ಸೇರಿ ಇರುವುದನ್ನು ದಲ (ದಳ)** ಎಂದು ಹೇಳುತ್ತಾರೆ. ಆ ದಳದಲ್ಲಿರುವವರನ್ನು ದಲಿತರು ಎಂದು ಹೇಳಬಹುದು. ಎಲ್ಲಾದರೂ ಒಂದು ದಲ ತಯಾರಾದರೇ ಆ ದಲದಲ್ಲಿ ಒಂದು ಜಾತಿ, ಒಂದು ಕುಲ ಎನ್ನುವವರು ಇರುವುದಿಲ್ಲ. ಹಾಗೆಯೇ ಅಜ್ಞಾನ ದಳದಲ್ಲಿ ಒಂದು ಕುಲದವರು ಇಲ್ಲದೇ ಅನೇಕ ಕುಲದವರು ಇರುವುದು ಸತ್ಯ. ಅಜ್ಞಾನವು ಒಂದು ಕುಲಕ್ಕೆ ಪರಿಮಿತಿಯಲ್ಲ. ಯಾವ ಕುಲದಲ್ಲಾದರೂ ಅಜ್ಞಾನಿಗಳು ಇರಬಹುದು. ಹಾಗೆ ಎಲ್ಲ ಕುಲಗಳ ಅಜ್ಞಾನಿಗಳನ್ನು ಸೇರಿಸಿ ಒಂದು ಗುಂಪಾಗಿ ಹೇಳುತ್ತಾ ಅವರನ್ನು 'ದಲಿತರು' ಎಂದು ಪೂರ್ವ ಕಾಲದಲ್ಲಿ ಕರೆಯುತ್ತಿದ್ದರು. ಹಾಗೆಯೇ ಎಲ್ಲ ಕುಲಗಳಲ್ಲಿನ ಜ್ಞಾನಿಗಳನ್ನು ಸೇರಿಸಿ **'ಬ್ರಾಹ್ಮಣರು'** ಎಂದು ಅನ್ನುವುದೇ ಅಲ್ಲದೇ **'ದ್ವಿಜರು'** ಎನ್ನುತ್ತಿದ್ದರು. ಅಜ್ಞಾನಿಗಳಿಗೆ 'ಮಾ ದಿಗರು' ಮತ್ತು 'ದಲಿತರು' ಎಂದು ಎರಡು ಹೆಸರುಗಳಿಂದ ಹೇಳಿದಂತೆ, ಜ್ಞಾನವಿರುವವರನ್ನು ಕೂಡಾ 'ಬ್ರಾಹ್ಮಣರು' ಮತ್ತು 'ದ್ವಿಜರು' ಎಂದು ಎರಡು ಹೆಸರುಗಳಿಂದ ಕರೆಯುತ್ತಿದ್ದರು. **ಮಾದಿಗರು (ಕೆಳಗಿನವರು)** ಎಂದರೂ, **ದಲಿತರು** ಎಂದರೂ ಅದು ಒಂದು ಕುಲವಲ್ಲದೆ **ಒಟ್ಟಾರೆ ಅಜ್ಞಾನಿಗಳ** ಗುರುತಾಗಿ ಇದೆ. ಹಾಗೇ ಬ್ರಾಹ್ಮಣರು ಮತ್ತು ದ್ವಿಜರು ಎಂದರೂ ಅದು ಒಂದು ಕುಲಕ್ಕೆ ಸಂಬಂಧಿಸಿದ ಪದವಲ್ಲದೇ **ಜ್ಞಾನಿಗಳನ್ನು** ಗುರುತಿಸುವುದಕ್ಕಾಗಿ ಇದೆ. ದ್ವಿಜರು ಎಂದರೇ ಎರಡನೆಯಬಾರಿ ಜನ್ಮಿಸಿದವರೆಂದು ಅರ್ಥ.

ಪೂರ್ವವಿರುವ ಭಾವವು ಹೋಗಿ ಪ್ರಜೆಗಳಲ್ಲಿ ಹೊಸ ಭಾವನೆ ಬಂದಿದೆ. ಇದಕ್ಕೆ ಕಾರಣ ಈದಿನ ಗತ ಚರಿತ್ರೆ ತಿಳಿಯದ ಮನುಷ್ಯರು ಸಮಾಜದಲ್ಲಿ ಇರುವುದರಿಂದ, ಸತ್ಯವನ್ನು ಬಿಟ್ಟು ಅಸತ್ಯವನ್ನು ಆಶ್ರಯಿಸಿದವರಾಗಿ ದಲಿತರನ್ನು, ಮಾದಿಗರನ್ನು ಒಂದು ಕುಲವಾಗಿ ಹೇಳುತ್ತಿದ್ದಾರೆ. ಹಾಗೆಯೇ ಬ್ರಾಹ್ಮಣರು, ದ್ವಿಜರು ಎನ್ನುವವರನ್ನು ಕೂಡಾ ಒಂದು ಕುಲವಾಗಿ ಹೇಳುತ್ತಿದ್ದಾರೆ. ವಾಸ್ತವವಾಗಿ

ಮಾದಿಗರೆಂದರೂ, ಬ್ರಾಹ್ಮಣರೆಂದರೂ ಕುಲಕ್ಕೆ ಸಂಬಂಧವಿಲ್ಲದ ಹೆಸರುಗಳೆಂದು ಜ್ಞಾನಕ್ಕೆ, ಅಜ್ಞಾನಕ್ಕೆ ಗುರುತಾಗಿ ಹೇಳಿರುವ ಹೆಸರುಗಳೆಂದು ತಿಳಿಯಬೇಕು. ಈಗ ಮಾದಿಗರಿಗೆ, ದಲಿತರಿಗೆ ವಿವರ ತಿಳಿದಿದೆ. ಹಾಗೆಯೇ ಬ್ರಹ್ಮಜ್ಞಾನ ತಿಳಿದವರು ಬ್ರಾಹ್ಮಣರೆಂದು ಕೂಡಾ ಅರ್ಥ ತಿಳಿದಿದೆ. ಬ್ರಾಹ್ಮಣರನ್ನು 'ದ್ವಿಜರು' ಎಂದು ಕೂಡಾ ಕರೆಯುವುದು ಪೂರ್ವವಿತ್ತು. ಪ್ರಸ್ತುತ ಕಾಲದಲ್ಲಿ ಬ್ರಾಹ್ಮಣರಾದವರಿಗೆ ಕೆಲವರಿಗೆ ಮಾತ್ರವೇ 'ದ್ವಿಜರು' ಎಂಬ ಪದವೊಂದರ ಅರ್ಥ ಗೊತ್ತಿದೆ. ಈ ದಿನ ಕೆಲವು ಬ್ರಾಹ್ಮಣರಿಗೆ 'ದ್ವಿಜನು' ಎಂಬ ಪದಕ್ಕೆ ಅರ್ಥ ತಿಳಿದಿಲ್ಲ. ಅವರನ್ನು ಕೇಳಿದರೇ ದ್ವಿಜರು ಎಂಬ ಪದಕ್ಕೆ ಸರಿಯಾದ ವಿವರಣೆ ಕೊಡದೆ ಇದ್ದಾರೆ. ದ್ವಿಜರು ಎಂದರೇ ಅಜ್ಞಾನದಲ್ಲಿ ಮರಣಿಸಿ ಜ್ಞಾನದಲ್ಲಿ ಹುಟ್ಟಿದವರೆಂದು ತಿಳಿದಿಲ್ಲ. ಈ ದಿನ ಇತ್ತ ಮಾದಿಗರು, ದಲಿತರು ಅತ್ತ ಬ್ರಾಹ್ಮಣರು, ದ್ವಿಜರು ಎಂಬ ಮಾತಿಗೆ ಅರ್ಥ ತಿಳಿಯದೆ ಎರಡು ಕಡೆದ ತಮ್ಮ ಹೆಸರುಗಳನ್ನು ಪ್ರತ್ಯೇಕ ಕುಲವೆಂದುಕೊಳ್ಳುತ್ತಿದ್ದಾರೆ. ವಾಸ್ತವವಾಗಿ ಕಳೆದಿರುವ ಚರಿತ್ರೆ ತಿಳಿದರೇ ಅವರು ಹಾಗೆ ಅಂದುಕೊಳ್ಳುವವರಲ್ಲ. ಚರಿತ್ರೆ ಮರೆತು ಹೋಗಿರುವವರಾಗಿ ಬ್ರಾಹ್ಮಣರು ಅಗ್ರಕುಲದವರೆಂದು, ದಲಿತರು ಕಡಿಮೆ ಕುಲದವರೆಂದು ಹೇಳಿಕೊಳ್ಳುವುದು ನಡೆಯುತ್ತಿದೆ. ಈ ದಿನ ಹೆಚ್ಚು, ಕಡಿಮೆ ಕುಲಗಳ ಹುಚ್ಚು ಹೆಚ್ಚಾಗಿ ಬ್ರಾಹ್ಮಣರು ಮಾದಿಗರನ್ನು, ಅಂಟಬಾರದವರೆಂದು ದೂರವಾಗಿ ಇಡುತ್ತಿದ್ದಾರೆ. ಹಾಗೆ ಕುಲವಿವಕ್ಷ (ಕುಲಭೇದ) ಮನುಷ್ಯರಲ್ಲಿ ಆರಂಭವಾಗಿದೆ.

ತ್ರೇತಾಯುಗದಲ್ಲೇ ಆರಂಭವಾದ ಕುಲವಿವಕ್ಷ ಈದಿನ ಬೆಳೆದು ದೊಡ್ಡದಾಗಿ ದೇಶವೆಲ್ಲಾ ವ್ಯಾಪಿಸಿದೆ. ಭಾರತದೇಶದಲ್ಲಿ ದಕ್ಷಿಣ ದೇಶದಲ್ಲಿ ದಲಿತರು ಹೆಚ್ಚಾಗಿದ್ದಾರೆಂದು, ಉತ್ತರ ದೇಶದಲ್ಲಿ ಬ್ರಾಹ್ಮಣರು ಹೆಚ್ಚಾಗಿ ಇದ್ದಾರೆಂದೂ ಹೇಳಿಕೊಳ್ಳುತ್ತಿದ್ದಾರೆ. ಅಷ್ಟೇ ಅಲ್ಲದೇ ದಕ್ಷಿಣ ದೇಶದಲ್ಲಿರುವವರನ್ನು ದ್ರಾವಿಡರೆಂದೂ, ಉತ್ತರದೇಶದವರನ್ನು ಆರ್ಯರೆಂದು ಹೇಳಿಕೊಳ್ಳುತ್ತಾ ಆರ್ಯರನ್ನು ಬ್ರಾಹ್ಮಣರು, ದ್ರಾವಿಡರನ್ನು ದಲಿತರೆಂಬ ಅಸೂಯೆಯಿಂದ

ವಿವಕ್ಷದಿಂದ (ಭೇದದಿಂದ) ನೋಡುವುದು ಅಭ್ಯಾಸವಾಗಿ ಹೋಗಿದೆ. ಇದು ಈದಿನದ ಸಮಸ್ಯೆ ಅಲ್ಲ. ತ್ರೇತಾಯುಗದಲ್ಲಿಯೇ ಹುಟ್ಟಿರುವ ಸಮಸ್ಯೆಯೆಂದು ತಿಳಿಯಬೇಕು. ಆರ್ಯರಾದ ಪಂಡಿತರು ರಾಮನನ್ನು ದೊಡ್ಡದಾಗಿ ಹೇಳುವುದು ರಾವಣನನ್ನು ಕಡಿಮೆಯಾಗಿ, ನೀಚನಾಗಿ ಹೇಳುವುದು ಆ ದಿನವೇ ನಡೆದಿದೆ. ರಾಮನು ವನವಾಸವಿದ್ದಾಗ ರಾವಣನು ರಾಮನಿಗೆ ತಿಳಿಯದ ಹಾಗೆ ಸೀತೆಯನ್ನು ಕರೆದುಕೊಂಡು ಹೋಗುವುದರಿಂದ ಸೀತೆ ಇರುವಜಾಡು ತಿಳಿಯದೆ ರಾಮನು ನಲ್ಲಮಲ ಕಾಡಿನಲ್ಲಿ ಸೀತೆಯನ್ನು ಹುಡುಕುತ್ತಾ ಹೋದಾಗ ಅಲ್ಲಿ ಗಿರಿಜನರಾದ ವಾಲಿ, ಸುಗ್ರೀವರನ್ನು ಭೇಟಿಯಾಗುವುದು ನಡೆಯಿತು. ವಾಲಿ, ಸುಗ್ರೀವರ ಮೂಲಕ ಅವರ ಸೈನ್ಯದಲ್ಲಿನ ಹನುಮಂತನು, ಜಾಂಬವಂತನು ಭೇಟಿಯಾಗು ವುದು ನಡೆದಿದೆ. ಆಗ ಅಣ್ಣತಮ್ಮರಾದ ವಾಲಿ ಸುಗ್ರೀವರ ಮಧ್ಯೆ ಇರುವ ಜಗಳದಲ್ಲಿ ರಾಮನು ತಲೆತೂರಿಸಿ, ವಾಲಿಯನ್ನು ಕೊಂದು ಸುಗ್ರೀವನಿಗೆ ಒಳಿತನ್ನು ಮಾಡಿದವನಾಗಿ, ತಾವು ಸೀತೆಯನ್ನು ಹುಡುಕುತ್ತಿರುವಹಾಗೆ ಹೇಳಿದ್ದಾರೆ. ಮೊದಲಿಗೇ ವಾಲಿಯನ್ನು ಕೊಂದರೇ ಸೀತೆಯನ್ನು ಹುಡು ಕುವುದರಲ್ಲಿ ಸಹಾಯ ಮಾಡುತ್ತೇನೆಂದು ಹೇಳಿದ ಸುಗ್ರೀವನು ಹನುಮಂತನನ್ನು ಸೀತೆಯನ್ನು ಹುಡುಕೆಂದು ರಾಮನ ಕೆಲಸದಲ್ಲಿ ವಿನಿಯೋಗಿಸಿದನು. ಆಗ ರಾಮನಿಗೆ ಹನುಮಂತನಿಗೆ ಪರಿಚಯ ಏರ್ಪಟ್ಟಿದೆ.

ಕಾಡಲ್ಲಿ ನಿವಾಸಿಸುವ ಗಿರಿಜನರಾದ ಜಾಂಬವಂತನಾಗಲೀ, ಹನು ಮಂತನಾಗಲೀ, ವಾಲಿ, ಸುಗ್ರೀವರಾಗಲೀ ಕೋತಿಗಳ ರೂಪದಲ್ಲಿ ಇಲ್ಲ. ಅವರೆಲ್ಲರೂ ಮನುಷ್ಯರ ಜಾತಿಯವರೇ. ನಮ್ಮ ಹಾಗೆ ಮಾನವ ಆಕಾರವಿರುವ ವರೇ. ಆ ದಿನ ತಮ್ಮ ರಾಜನಾದ ಸುಗ್ರೀವನು ಹೇಳಿದ ಮಾತಿಗೆ ಕಟ್ಟುಬಿದ್ದು ಹನುಮಂತನು (ಆಂಜನೇಯನು) ಸೀತೆಯನ್ನು ಹುಡುಕಿ ಕೊನೆಗೆ ಲಂಕದಲ್ಲಿ ಇರುವಂತೆ ಕಂಡುಕೊಂಡನು. ಹನುಮಂತನು ಒಪ್ಪಿಕೊಂಡ ಮಾತಿಗೆ ತಪ್ಪದೇ ಸೀತೆಯನ್ನು ಹುಡುಕುವುದೇ ಅಲ್ಲದೇ ರಾಮನ ಸಲುವಾಗಿ ಗಿರಿಜನ ರಾದವರೆಲ್ಲರೂ ಹೋಗಿ, ರಾವಣಬ್ರಹ್ಮ ಸೈನ್ಯದೊಂದಿಗೆ ಯುದ್ಧಮಾಡಿ,

ರಾಮನನ್ನು ಗೆಲ್ಲಿಸಿ ಸೀತೆಯನ್ನು ತಂದುಕೊಳ್ಳುವಹಾಗೆ ಮಾಡಿದರು. ಈ ವಿಧವಾಗಿ ಎಷ್ಟೋ ಒಳಿತನ್ನು ಮಾಡಿದವರನ್ನು ಹೀನವಾಗಿ ನೋಡಿ, ಮನುಷ್ಯರಾದವರನ್ನು ಕೋತಿಗಳಾಗಿ ಚಿತ್ರಿಸಿ, ಆರ್ಯರು ಬರೆಯುವುದು ನಡೆದಿದೆ. ಆರ್ಯರು ದ್ರಾವಿಡರನ್ನು ವಿವಕ್ಷದಿಂದ ನೋಡುವುದೇ ಅಲ್ಲದೇ, ಕೊನೆಗೆ ಅವರಿಗಿಂತಲೂ ದಕ್ಷಿಣ ದೇಶದಲ್ಲಿರುವವರು ಕಡಿಮೆಯವರೆಂಬ ಭಾವವನ್ನು ವ್ಯಕ್ತ ಪಡಿಸುತ್ತಾ ಜಾಂಬವಂತನನ್ನು ಕರಡಿಯಹಾಗೆ, ಹನುಮಂತನನ್ನು ಕೋತಿಯಾಗಿ ಚಿತ್ರಿಸಿ ತೋರಿಸುವುದರಲ್ಲಿ ಆರ್ಯರಾದವರು ತಮಗೆ ಒಳಿತು ಮಾಡಿದವರನ್ನು ಸಹಿತ ನೀಚವಾಗಿ ತೋರಿಸಿ, ವಿಚಕ್ಷಣೆ ಇಲ್ಲದ ಪ್ರಜೆಗಳು ಮತ್ತು ದ್ರಾವಿಡರು ಕೂಡಾ ಅವರ ಮಾತನ್ನು ನಂಬಿ ಮನುಷ್ಯರಾದವರನ್ನು ಕೋತಿಗಳಾಗಿಯೇ ಲೆಕ್ಕಿಸಿಕೊಂಡಿದ್ದಾರೆ. ಇದು ಅನ್ಯಾಯವೆಂದು ಒಬ್ಬರೂ ಕೂಡಾ ಗ್ರಹಿಸಲಾರದೇ ಹೋಗಿದ್ದಾರೆ. ಹನುಮಂತನು ಸೀತೆಯನ್ನು ಬಿಡಿಸುವವರೆಗು ಕೆಲಸ ಮಾಡಿದ್ದಾನೆ. ನಂತರ ರಾಮನೊಂದಿಗೆ ಎಂತಹ ಸಂಬಂಧವೂ ಇಲ್ಲ. ಆದರೂ ಹನುಮಂತನು ರಾಮನ ಭಕ್ತನಾದಂತೆ ಚಿತ್ರಿಸಿ ರಾಮನ ಪಾದಗಳಬಳಿ ಕುಳಿತಿರುವಂತೆ ತೋರಿಸಿದ್ದಾರೆ. ಹಾಗೆ ತೋರಿಸಿರುವು ದರಿಂದ ದ್ರಾವಿಡರು ಆರ್ಯರಿಗೆ ಸೇವಕರೆಂಬ ಭಾವನೆ ಭಾವವನ್ನು ಉಂಟು ಮಾಡಿದ್ದಾರೆ. ಹನುಮಂತನು ಕೋತಿಯಲ್ಲ, ರಾಮನ ಸೇವಕನಲ್ಲ, ಆತನ ಪಾದಗಳ ಬಳಿ ಕುಳಿತುಕೊಳ್ಳಲೂ ಇಲ್ಲ. ಹನುಮಂತನು ಕೋತಿ ಎನ್ನುವುದು ಎಷ್ಟು ನಿಜವೋ, ರಾಮನ ಭಕ್ತನೆನ್ನುವುದು ಕೂಡಾ ಅಷ್ಟೇ ನಿಜ. ಈ ದಿನ ವಿದ್ಯಾವಂತರು, ಮೇಧಾವಿಗಳು, ವಿಜ್ಞಾನ ನಿಪುಣರು ಎಷ್ಟೋ ಜನರಿದ್ದಾರೆ. ಮನುಷ್ಯರಂಥ ಕೋತಿಗಳು, ಮಾತನಾಡುವ ಕೋತಿಗಳು ಭೂಮಿಮೇಲೆ ಎಲ್ಲಿಯೇ ಆಗಲೀ, ಯಾವ ಕಾಲದಲ್ಲಾಗಲೀ ಇಲ್ಲವೆಂದು ಎಲ್ಲರಿಗೂ ತಿಳಿದಿದೆ. ಆದರೂ ಮಲ್ಲಣ್ಣ ಹೇಳಿದರೇ ಪುಲ್ಲಣ್ಣ ಕೇಳಿದನು ಎಂದಂತೆ ಹನುಮಂತನನ್ನು ಕೋತಿ ಎಂದೂ, ಜಾಂಬವಂತನನ್ನು ಕರಡಿ ಎಂದು ಹೇಳಿದರೂ ಎಲ್ಲರೂ ಕೇಳಿ ತಲೆಆಡಿಸುತ್ತಾ ಅದನ್ನೇ ಇತರರಿಗೆ ಹೇಳುತ್ತಿದ್ದಾರೆ. ಗಿರಿಜನರ ಸಹಾಯವನ್ನು ಪಡೆದಿರುವುದೇ ಅಲ್ಲದೇ ಅವರನ್ನು ಪ್ರಾಣಿಗಳ ಕೆಳಗೆ ಜಮಕಟ್ಟಿ, ಭಕ್ತರಹಾಗೆ

ಕಾಲಿನಬಳಿ ಕೂರಿಸಿಟ್ಟಿರುವುದು ಸತ್ಯವೋ, ಅಸತ್ಯವೋ ನೀವು ಒಂದುಬಾರಿ ಆಲೋಚಿಸಿರಿ. ಸತ್ಯವನ್ನು ಹೇಳುವ ನನ್ನನ್ನು ತಪ್ಪುಹಿಡಿಯಬೇಕೆಂದು ನೋಡದೆ ಬುದ್ಧಿಯಿಂದ ಯೋಚಿಸಿ ನೋಡಿರಿ. ನಮ್ಮ ರಚನೆಗಳಲ್ಲಿನ **"ದ್ರಾವಿಡ ಬ್ರಾಹ್ಮಣ"** ಎಂಬ ಗ್ರಂಥದಲ್ಲಿ ಹನುಮಂತನು ಕೋತಿಯೆನ್ನುವುದು ಪೂರ್ತಿ ಅಸತ್ಯವೆಂದು ಹೇಳಿದ್ದೇವೆ. ಅಷ್ಟೇ ಅಲ್ಲದೇ ಹನುಮಂತನು ಯಾವ ವಿಧವಾಗಿ ಬಲಶಾಲಿ ಆಗಿರುವುದು ಕೂಡಾ ಬರೆದಿದ್ದೇವೆ. ಹನುಮಂತನು ಕೋತಿಯೆನ್ನುವುದು ಎಷ್ಟು ಸತ್ಯವೋ, ರಾವಣಬ್ರಹ್ಮ ದುರ್ಮಾರ್ಗ ನೆಂದು ಹೇಳುವುದು ಕೂಡಾ ಅಷ್ಟೇ ಸತ್ಯವಾಗುವುದು. ಭಾರತದೇಶದಲ್ಲಿ ಆರ್ಯರಿಗೆ ದ್ರಾವಿಡರು ಅಧಮರಾಗಿ ಹಿಂದಿನಿಂದಲೂ ಇರುವುದುಂಟು. ಅದಕ್ಕೆ ಸಾಕ್ಷಿ ರಾವಣನನ್ನು ರಾಕ್ಷಸನನ್ನಾಗಿ, ಹನುಮಂತನನ್ನು ಕೋತಿಯನ್ನಾಗಿ, ಗಿರಿಜನರನ್ನು ಪ್ರಾಣಿಗಳನ್ನಾಗಿ ಹೋಲಿಸಿ ಹೇಳುವುದೇಯೆಂದು ತಿಳಿಯುತ್ತಿದೆ. ತ್ರೇತಾಯುಗದಲ್ಲಿ, ದ್ವಾಪರಯುಗದಲ್ಲಿ ದಕ್ಷಿಣ ದೇಶದವರಾದ ದ್ರಾವಿಡರ ಮೇಲೆ ಮಧ್ಯ ಏಷ್ಯಾದಿಂದ ವಲಸೆ ಬಂದ ಆರ್ಯರು ವಿಭೇದ ತೋರಿಸುತ್ತಲೇ ಇದ್ದಾರೆ. ಪೂರ್ವವಿರುವಷ್ಟು ವಿಭೇದ ಈ ದಿನ ಇಲ್ಲದೆ ಹೋದರೂ, ರೂಪಾಯಿ ಯಲ್ಲಿ ಕಾಲುಭಾಗದಷ್ಟು ಈ ದಿನ ಕೂಡಾ ಇದೆ. ಪೂರ್ತಿ ವಿಭೇದ ಯಾವತ್ತು ಇಲ್ಲದೇ ಹೋಗುತ್ತದೋ ಎಂದು ಎದುರು ನೋಡಬೇಕಾಗಿದೆ. ಇಷ್ಟುಕಾಲಕ್ಕೆ ಧೈರ್ಯಮಾಡಿ ಸತ್ಯವನ್ನು ಹೇಳಿದ ನನ್ನ ಮೇಲೆ ಅಸೂಯೆ ಪಡದೆ ಸತ್ಯವನ್ನು ತಿಳಿಯಿರಿರೆಂದು ತಿಳಿಸುತ್ತಿದ್ದೇನೆ.

**ಪ್ರಶ್ನೆ :– ಇಂದಿನ ಕಾಲದಲ್ಲಿ ದಸರಾ ಹಬ್ಬಕ್ಕೆ, ದೀಪಾವಳಿ ಹಬ್ಬಕ್ಕೆ ರಾವಣ ಬೊಂಬೆಯನ್ನು ಇಟ್ಟು ಅದಕ್ಕೆ ಹತ್ತು ತಲೆಗಳನ್ನು ಇಟ್ಟು ಹಬ್ಬದ ದಿನ ರಾವಣ ದಹನವೆಂಬ ಹೆಸರಿನಿಂದ ರಾವಣ ಬೊಂಬೆಯನ್ನು ದಹಿಸುವ ಸಂಪ್ರದಾಯ ದೇಶವೆಲ್ಲಾ ವ್ಯಾಪಿಸಿದೆ ಅಲ್ಲವೇ! ದೇಶದ ಒಟ್ಟಾರೆ ಇಷ್ಟುಜನ ತಪ್ಪು ಮಾಡುತ್ತಿರುವಂತೇನಾ? ಇದಕ್ಕೆ ನೀವೇನು ಹೇಳುತ್ತೀರಿ?**

**ಉತ್ತರ :–** ರಾವಣ ದಹನ ಖಚಿತವಾಗಿ ತಪ್ಪು. ಆದರೂ ಎಲ್ಲರೂ ವಿಚಕ್ಷಣವಿಲ್ಲದೇ ಮಾಡುತ್ತಿದ್ದಾರೆ. ಮೊದಲು ಉತ್ತರ ದೇಶದಲ್ಲಿರುವ ರಾವಣ

ದಹನ ಸಂಪ್ರದಾಯವು ಈ ದಿನ ದಕ್ಷಿಣ ಭಾರತದೇಶಕ್ಕು ಕೂಡಾ ಹಬ್ಬಿದೆ. ಪ್ರತಿಯೊಬ್ಬರು ರಾವಣನು ಒಂದೇ ಒಂದು ಕೆಟ್ಟಕೆಲಸ ಮಾಡಿದ್ದಾನೆಂದು ಅದುವೇ ಸೀತೆಯನ್ನು ಅಪಹರಿಸಿಕೊಂಡು ಹೋಗುವುದೆಂದೂ, ಸೀತೆಯನ್ನು ಅನುಭವಿಸಬೇಕೆಂಬ ದುರ್ಬುದ್ಧಿಯೇ ಆತನ ಸಾವಿಗೆ ಕಾರಣವಾಗಿದೆಯೆಂದು ಹೇಳುತ್ತಿದ್ದಾರೆ. ರಾವಣನು ಸೀತೆಯನ್ನು ಕರೆದುಕೊಂಡು ಹೋಗಿರುವುದು ವಾಸ್ತವವೇ ಆದರೂ ಯಾವ ಸಂದರ್ಭದಲ್ಲಿ ನಡೆದಿದೆ, ಯಾವ ಉದ್ದೇಶದಿಂದ ನಡೆದಿದೆ ಎಂದು ಸ್ವಲ್ಪವಾದರೂ ತಿಳಿಯದೇ ಮಾತನಾಡುತ್ತಾ, ರಾವಣಬ್ರಹ್ಮನನ್ನು ಕೆಟ್ಟವನನ್ನಾಗಿ ಹೇಳುತ್ತಿದ್ದಾರೆ. ಆ ಕೆಡಕಿನಿಂದಲೇ ಆತನ ಬೊಂಬೆಯನ್ನು ಸುಡುವುದು ಇಂದಿಗೂ ನಡೆಯುತ್ತಿದೆ.

ದೇವರು ಭೂಮಿ ಮೇಲೆ ಮನುಷ್ಯನಾಗಿ ಅವತರಿಸಿ ತನ್ನ ಜ್ಞಾನವನ್ನು ಹೇಳಿದರೂ ಆತನಲ್ಲಿನ ಹಿರಿಮೆಯನ್ನು ಪ್ರಜೆಗಳು ಗ್ರಹಿಸದೆ ಹೋಗಿ ಜ್ಞಾನ ಹೇಳುವವನ ಮೇಲೆಯೇ ದ್ವೇಷ ಸಾಧನೆ ಕಾರ್ಯಗಳು ಪ್ರಾರಂಭಿಸುತ್ತಿದ್ದಾರೆ. ದೇವರ ಜ್ಞಾನದ ಮುಂದೆ ಮದವೇರಿದವರು ವಿರುದ್ಧವಾಗಿ ಪ್ರವರ್ತಿಸುತ್ತಾ, ಭಗವಂತನಿಗೆ ಅನೇಕ ತೊಂದರೆಗಳು ಉಂಟುಮಾಡುತ್ತಿದ್ದರೂ, ದುರ್ಮಾರ್ಗರ ಕೆಲಸಗಳು ನೆರವೇರುತ್ತಾ ದೇವರಾದ ಭಗವಂತನು ಕೂಡಾ ಅವಮಾನವನ್ನು ಹೊಂದುತ್ತಿದ್ದಾನೆ. ದುರ್ಮಾರ್ಗರು, ಅಜ್ಞಾನಿಗಳು ಆದವರು ಧನ ಬಲ, ಅಧಿಕಾರಬಲವನ್ನು ಹೊಂದಿ ತಾವು ಮಾಡುವ ಕೆಲಸಗಳೆಲ್ಲವೂ ನೆರವೇರುತ್ತವೆನ್ನುತ್ತಾ ಜ್ಞಾನಕ್ಕೆ ಆತಂಕವಾಗಿ ಪ್ರವರ್ತಿಸುತ್ತಿದ್ದರೂ, ಭಗವಂತನಿಗೆ ತೊಂದರೆ ಕೊಡುವ ಕೆಲಸಗಳನ್ನು ಮಾಡುತ್ತಿದ್ದರೂ ಅವರ ಕೆಲಸಗಳು ನೆರವೇರುವುದು, ಕೊನೆಗೆ ಭಗವಂತನು ಏನೂ ಮಾಡಲಾರದೆ ಅವರ ಕೈಯಲ್ಲಿ ಅವಮಾನ ಹೊಂದುವುದು ನಡೆಯುತ್ತಿದೆ. ಅಜ್ಞಾನಿಗಳು ಧನ ಬಲದಿಂದ, ಪದವಿ ಬಲದಿಂದ ಮಾಡುವ ಕೆಲಸಗಳಿಗೆ ಯಾವ ತೊಂದರೆಯಾಗದಂತೆ ದೇವರೇ ಅವಮಾನ ಹೊಂದುತ್ತಿರುವುದನ್ನು ನೋಡಿದರೇ ಇದರಲ್ಲಿ ದೇವರ ಕೈಲಾಗದತನ ಕಾಣಿಸುತ್ತಿದೆ. ಭಗವಂತನು ಅವಮಾನಪಾಲು ಆಗುವುದೇ ಅಲ್ಲದೆ ಆತನ ಜ್ಞಾನವು ಕೂಡಾ

ಪ್ರಚಾರವಾಗದೇ ಹೋಗುವುದಕ್ಕೆ ಅವಕಾಶ ಏರ್ಪಡುತ್ತಿದೆ. ತನ್ನ ಧರ್ಮಗಳಿಗೆ ಆಪತ್ತು ಉಂಟಾದಾಗ ಅವತರಿಸಿ ಬಂದು ಧರ್ಮಗಳನ್ನು ತಿಳಿಸುವುದು ದೇವರ ಕೆಲಸವೇ ಆದರೂ, ಆತನು ಪ್ರಚಾರ ಮಾಡಿರುವ ಜ್ಞಾನವು ಅಜ್ಞಾನಿಗಳಿಂದ ಅಡಗಾಣಿಸುತ್ತಿದ್ದರೇ, ಅವತರಿಸಿದ ಭಗವಂತನು ಕೂಡಾ ಅವಮಾನವನ್ನು ಹೊಂದುತ್ತಿದ್ದರೇ, ಅದನ್ನು ದೇವರ ಕೈಲಾಗದತನ ಎನ್ನದೇ ಏನನ್ನಬೇಕು? ಅಣಗಿ ಹೋಗಿರುವ ಧರ್ಮಗಳನ್ನು ತಿಳಿಸುವುದರಲ್ಲಿ ಶ್ರದ್ಧೆ ವಹಿಸಿರುವ ದೇವರು, ಅಜ್ಞಾನಿಗಳ ಕೈಯಲ್ಲಿ ಭಗವಂತನು ಅವಮಾನ ಹೊಂದುತ್ತಿರುವಾಗ, ಆತನು ಹೇಳಿರುವ ಜ್ಞಾನವು ಕೂಡಾ ಅವಮಾನ ಹೊಂದಿದಂತಲ್ಲವೇ?

ಎಂದೋ ತ್ರೇತಾಯುಗದಲ್ಲಿ ದೇವರು ಭಗವಂತನಾಗಿ ಹುಟ್ಟಿ ತನ್ನ ಧರ್ಮಗಳನ್ನು ಪ್ರಚಾರ ಮಾಡಿದರೇ, ಆತನು ಬದುಕಿದ್ದಾಗಲೇ ಆತನ ಜ್ಞಾನವನ್ನು ನೋಡದೇ, ಆತನನ್ನು ದುರ್ಮಾರ್ಗನನ್ನಾಗಿ ಹೇಳಿರುವ ಪ್ರಜೆಗಳು ಆತನ ಚಿತ್ರಪಟವನ್ನಾಗಲೀ, ಆತನ ಬೊಂಬೆಯನ್ನಾಗಲೀ ಅಂದಿನಿಂದ ಇಂದಿನವರೆಗೂ ಮೂರು ಯುಗಗಳು ಕಳೆದರೂ ಬಿಡದೇ 'ರಾವಣ ದಹನ' ಎಂಬ ಹೆಸರಿನಿಂದ ಅವಮಾನಿಸುತ್ತಲೇ ಇದ್ದಾರೆ. ಆ ಕೆಲಸವನ್ನು ದೇವರು ನಿವಾರಿಸಲಿಲ್ಲವೆಂದರೇ, ಆತನು ಕೆಲವು ಕೆಲಸಗಳು ಮಾತ್ರ ಮಾಡಬಲ್ಲನು, ದೊಡ್ಡವನೆಂದು ಹೇಳಿಕೊಳ್ಳಬಲ್ಲನು. ಉಳಿದ ಎಲ್ಲಾ ಕೆಲಸಗಳು ಮಾಡಲಾರನೆಂದು, ಮಾಡಲಾರ ದೇನೇ ಯುಗಗಳ ಪರ್ಯಂತರ ತನ್ನ ಅವತಾರ ಬೊಂಬೆಯನ್ನು ಅದೇ ಹೆಸರಿನಿಂದ ಸುಡುತ್ತಿದ್ದರೇ ಇದು ಕೆಟ್ಟದೆಂದು ತಿಳಿಸಲಾರದೇ ಹೋಗಿದ್ದಾನೆ. ಇಷ್ಟುಕಾಲದವರೆಗು ನಿವಾರಿಸಲಾರದೇ ಹೋಗಿದ್ದಾನೆ. ಇದನ್ನು ಅನುಸರಿಸಿ ಸನ್ಮಾರ್ಗರನ್ನು ಭಯಪಡಿಸುವುದಕ್ಕೇ ದೇವರು ಹೊರತು, ದುರ್ಮಾರ್ಗರನ್ನು ಎದುರಿಸುವುದಕ್ಕೆ ಕೈಲಾಗದವನೇಯೆಂದು ತಿಳಿಯುತ್ತಿದೆ. ಸತ್ಯವನ್ನೇ ಹೇಳಿದರೇ ಧನಬಲ, ಅಧಿಕಾರ ಬಲವಿರುವವನ ಕೆಲಸಗಳು ನೆರವೇರುವುದು, ಭಗವಂತನು ಅಥವಾ ಜ್ಞಾನಿಗಳು ಜ್ಞಾನ ಸಂಬಂಧವಾಗಿ ಮಾಡುವ ಕೆಲಸಗಳು ನೆರವೇರದೇ ಹೋಗುವುದು ನೋಡಿದರೇ ಮತ್ತು ದುರ್ಮಾರ್ಗರನ್ನು ದೇವರು ಏನು

ಮಾಡಲಾಗದೇ ಇದ್ದಾಗ ದುರ್ಮಾರ್ಗರ ಮುಂದೆ ಸೋತುಹೋದಂತಲ್ಲವೇ! ಜ್ಞಾನವೇ ದೊಡ್ಡದು, ದೇವರೇ ದೊಡ್ಡವನು ಎಂದು ನಂಬಿದ ನಮ್ಮಂಥವರು ಮಾಡುವ ಕೆಲಸಗಳು ನೆರವೇರದೇ ಜ್ಞಾನಕ್ಕೆ ಆತಂಕ ಮಾಡುವ ಅಜ್ಞಾನಿಗಳ ಕೆಲಸಗಳು ನೆರವೇರುವುದು, ಅವರು ಆರೋಗ್ಯವಂತರಾಗಿ ಇರುವುದು ನೋಡಿದರೇ ದೇವರು ಕೂಡಾ ಮಾಡಲಾರದವುಗಳು ಬಹಳ ಇವೆಯೆಂದು ತಿಳಿಯುತ್ತಿದೆ. ಜ್ಞಾನಿಗೆ ಆರೋಗ್ಯ ಚೆನ್ನಾಗಿಲ್ಲದೇ ಹೋಗಿ, ಅಜ್ಞಾನಿಗೆ, ದುರ್ಮಾರ್ಗನಿಗೆ ಒಳ್ಳೆಯ ಆರೋಗ್ಯವಿರುವಾಗ, ಎಲ್ಲ ಸುಖಗಳು ಆತನು ಪಡೆಯುತ್ತಿರುವಾಗ ಅಜ್ಞಾನಿಯನ್ನು ದೇವರು ಏನೂ ಮಾಡಲಾರದೇ ಹೋಗುತ್ತಿದ್ದಾನೆಂದು ತಿಳಿಯುತ್ತಿದೆ. ಆದ್ದರಿಂದ ನನ್ನ ಅನುಭವದಲ್ಲಿ ರಾವಣಬ್ರಹ್ಮನನ್ನು, ಮತ್ತು ಇನ್ನೂ ಕೆಲವರನ್ನು ನೋಡಿದ ನಂತರ ದೇವರು ಎಲ್ಲಾ ನೋಡುತ್ತಾನೆಂದುಕೊಳ್ಳುವುದು ದೊಡ್ಡ ತಪ್ಪು. ಆದ್ದರಿಂದ ಆಧ್ಯಾತ್ಮಿಕವನ್ನು ಕಲಿಯಬಹುದು ಆದರೇ, ಎಲ್ಲದಕ್ಕು ದೇವರೇ ಎಂದುಕೊಳ್ಳುವುದು ತಪ್ಪೇ ಆಗುತ್ತಿದೆಯೆಂದು ಹೇಳಬಹುದು. ಅದಕ್ಕೆ ರಾವಣಬ್ರಹ್ಮನಿಗೆ ನಡೆಯುತ್ತಿರುವ ಅನ್ಯಾಯವನ್ನು ನೋಡಿದ ನಂತರ ನಮ್ಮಂಥವರಿಗೆ ದೇವರೇ ದಿಕ್ಕು ಎಂದುಕೊಳ್ಳುವುದು ತಪ್ಪೇ ಆಗುತ್ತದೆಂದು ತಿಳಿಯುತ್ತಿದೆ. **ತಸ್ಮಾತ್ ಜಾಗ್ರತೆ.**

**ಒಂದು ವಿಷಯವನ್ನು ಸಮರ್ಥಿಸುವುದಕ್ಕೆ ಶಾಸ್ತ್ರ ಎಷ್ಟು ಅವಶ್ಯವೋ, ಹಾಗೇ ಒಂದು ವಿಷಯವನ್ನು ಖಂಡಿಸುವುದಕ್ಕೂ ಶಾಸ್ತ್ರ ಅಷ್ಟೇ ಅವಶ್ಯವಾಗುತ್ತದೆ.**

**ಅಸತ್ಯವನ್ನು ಸಾವಿರ ಮಂದಿ ಹೇಳಿದರೂ, ಅದು ಸತ್ಯವಲ್ಲ,**
**ಸತ್ಯವನ್ನು ಸಾವಿರ ಮಂದಿ ಅಲ್ಲಗಳೆದರೂ, ಅದು ಅಸತ್ಯವಲ್ಲ.**